ಸೋಮವಾರ, ಏಪ್ರಿಲ್ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 109 | ಪುಟ 12

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಎಂಜಿನಿಯರಿಂಗ್ ಮಾಡಿದವರು, ವಿಜ್ಞಾನದಲ್ಲಿ ಪದವಿ ಪಡೆದು ಸಾಫ್ಟ್‌ವೇರ್ ಟೆಸ್ಟಿಂಗ್‌ನಲ್ಲಿ ಡಿಪ್ಲೊಮಾ ಕೋರ್ಸ್ ಮಾಡಿಕೊಂಡವರಿಗೆ ಹೇರಳ ಅವಕಾಶಗಳಿವೆ.

ಆಳ-ಅಗಲ
ಕ್ಯಾಸ್ಟ್ರೊ ತೆರೆಮರೆಗೆ ಕ್ಯೂಬಾಕ್ಕೆ ಹೊಸ ಯುಗ

5 ಆಸ್ಪತ್ರೆಗಳಿಗೆ ಸ್ಥಳದಲ್ಲೇ ನೋಟಿಸ್ ಜಾರಿ 3
ಎಬಿಡಿ ಅಬ್ಬರಕ್ಕೆ ಕೋಲ್ಕತ್ತ ತತ್ತರ 10
ಅಭ್ಯರ್ಥಿಗಳಿಂದ ತೀವ್ರ ಅಸಮಾಧಾನ
ಅರಣ್ಯ ರಕ್ಷಕರ ಹುದ್ದೆ: ದೈಹಿಕ ಪರೀಕ್ಷೆಯಲ್ಲಿ ಗೊಂದಲ 4

ಇಂದು ಸಚಿವರ ಸಭೆಯಲ್ಲಿ ತೀರ್ಮಾನ • ವಾರಾಂತ್ಯ ಲಾಕ್‌ಡೌನ್ ಬಗ್ಗೆಯೂ ಚರ್ಚೆ ಸಾಧ್ಯತೆ

ಕೋವಿಡ್: ಇನ್ನಷ್ಟು ಕಠಿಣ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಇನ್ನಷ್ಟು ವೇಗ ಪಡೆದುಕೊಂಡಿರುವ ಬೆನ್ನಲ್ಲೇ ಸೋಂಕು ಹರಡುವಿಕೆ ತಡೆಗಟ್ಟಲು ಇನ್ನಷ್ಟು ಕಠಿಣ ನಿರ್ಬಂಧಗಳನ್ನು ವಿಧಿಸುವ ಸಂಬಂಧ ರಾಜ್ಯ ಸರ್ಕಾರ ಸೋಮವಾರ ಮಹತ್ವದ ಸಭೆಯನ್ನು ನಡೆಸಲಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿರ್ದೇಶನದ ಮೇರೆಗೆ ಕಂದಾಯ ಸಚಿವ ಆರ್. ಅಶೋಕ ನೇತೃತ್ವದಲ್ಲಿ ಈ ಸಭೆಯನ್ನು ಕರೆಯಲಾಗಿದ್ದು, ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ಬೆಂಗಳೂರು ಪ್ರತಿನಿಧಿಸುವ ಸಚಿವರು, ಸಂಸದರು ಭಾಗವಹಿಸಲಿದ್ದಾರೆ. ವಾರಾಂತ್ಯದ ಲಾಕ್‌ಡೌನ್ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ 24 ಗಂಟೆಯಲ್ಲಿ ಸುಮಾರು 19 ಸಾವಿರಕ್ಕೂ ಹೆಚ್ಚು ಹೊಸ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರು ಅಲ್ಲದೆ, ಇತರ ಪ್ರಮುಖ ನಗರಗಳಲ್ಲೂ ಕೋವಿಡ್ ಪ್ರಕರಣಗಳು ಹೆಚ್ಚಾಗಿವೆ. ಬೆಂಗಳೂರಿನಲ್ಲಿ ಕೊರೊನಾ ಸೋಂಕಿತರ ಚಿಕಿತ್ಸೆಗೆ ಅಗತ್ಯವಿರುವ ವೈದ್ಯಕೀಯ ಆಮ್ಲಜನಕ (ಆಕ್ಸಿಜನ್) ಪೂರೈಕೆಗೆ ಔಷಧ ನಿಯಂತ್ರಕರ ಕಚೇರಿಯಲ್ಲಿ ಭಾನುವಾರ 'ವಾರ್ ರೂಮ್' ಕೂಡ ರಚಿಸಲಾಗಿದೆ.

ಬೆಂಗಳೂರಿನಲ್ಲಿ ಸೋಂಕು ಮತ್ತು ಸಾವಿನ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ. ಹೀಗಾಗಿ ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ, ತುರ್ತು ನಿಗಾ ಘಟಕ (ಐಸಿಯು) ಕೊರತೆಯೂ ಎದುರಾಗಿದೆ. 'ಈ ಪರಿಸ್ಥಿತಿ ನಿಭಾಯಿಸಲು ಬಿಗಿ ಕ್ರಮ ಅನಿವಾರ್ಯ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸುದ್ದಿಗಾರರಿಗೆ ಭಾನುವಾರ ತಿಳಿಸಿದರು.

'ಸೋಮವಾರದ ಸಭೆಯಲ್ಲಿ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು. ಮುಖ್ಯಮಂತ್ರಿ ಜೊತೆ ಚರ್ಚಿಸಿದ ಬಳಿಕ ಸರ್ಕಾರ ಅಂತಿಮ ನಿರ್ಧಾರವನ್ನು ಪ್ರಕಟಿಸಲಿದೆ' ಎಂದು ಅವರು ಹೇಳಿದರು.

9ನೇ ಪುಟ ನೋಡಿ

ರಾಜ್ಯ ಕೋವಿಡ್ ೧೮-೪-೨೦೨೧

ಒಟ್ಟು ಸೋಂಕಿತರು	11,61,065 (11,41,998 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	1,33,543
ಗುಣಮುಖರಾದವರು	10,14,152
ಒಟ್ಟು ಸಾವು	13,351
ದಿನದ ಏರಿಕೆ	
ಹೊಸ ಪ್ರಕರಣ	19,067
ಗುಣಮುಖ	4,603
ಸಾವು	81

620 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲಾಕ್‌ಡೌನ್ ಪ್ರಸ್ತಾವ ಸದ್ಯ ಸರ್ಕಾರದ ಮುಂದಿಲ್ಲ. ಆದರೆ, ಬೆಂಗಳೂರಿನಲ್ಲಿ ಕಠಿಣ ನಿಯಮ ಜಾರಿ ಖಚಿತ. ಅದನ್ನು ಕಡ್ಡಾಯವಾಗಿ ಪಾಲಿಸಲೇಬೇಕು
ಆರ್. ಅಶೋಕ, ಕಂದಾಯ ಸಚಿವ

ಹಾಸಿಗೆ ಲಭ್ಯತೆ: ಹೆಚ್ಚಳಕ್ಕೆ ಕ್ರಮ

ನವದೆಹಲಿ: ದೇಶದ ವಿವಿಧ ಭಾಗಗಳಲ್ಲಿ ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಕೊರತೆ ಎದುರಾಗಿದೆ. ಹಾಗಾಗಿ, ರಕ್ಷಣೆ, ಕಾರ್ಮಿಕ, ಕಲ್ಲಿದ್ದಲು, ಉಕ್ಕು, ರೈಲ್ವೆ, ಇಂಧನ, ಭಾರಿ ಕೈಗಾರಿಕೆ, ಅಣು ಶಕ್ತಿ, ಜಲಸಾರಿಗೆ ಸಚಿವಾಲಯಗಳ ಅಧೀನದ ಆಸ್ಪತ್ರೆಗಳಲ್ಲಿ ಕೋವಿಡ್ ವಿಭಾಗ ತೆರೆಯಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಈ ಇಲಾಖೆಗಳಿಗೆ ಸೂಚನೆ ನೀಡಿದೆ. ಕೋವಿಡ್ ಮೊದಲ ಅಲೆ ಸಂದರ್ಭದಲ್ಲಿ ಈ ಎಲ್ಲ ಇಲಾಖೆಗಳ ಆಸ್ಪತ್ರೆಗಳನ್ನು ಬಳಸಿಕೊಳ್ಳಲಾಗಿತ್ತು. ಕೇಂದ್ರ ಸರ್ಕಾರದ ಇಲಾಖೆಗಳ ಅಧೀನದಲ್ಲಿರುವ ಎಲ್ಲ ಆಸ್ಪತ್ರೆಗಳಲ್ಲಿಯೂ ಕೋವಿಡ್ ವಿಭಾಗಗಳನ್ನು ತೆರೆಯಬೇಕು. ಒಳರೋಗಿ ಮತ್ತು ಹೊರರೋಗಿ ಘಟಕಗಳು ಇರಬೇಕು ಮತ್ತು ಇಲ್ಲಿ ಪ್ರತ್ಯೇಕ ದ್ವಾರಗಳ ವ್ಯವಸ್ಥೆ ಮಾಡಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ಇಲಾಖೆಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ರಕ್ಷಣಾ ತಯಾರಿಕೆ, ಗೃಹ, ಆಯುಷ್ ಮತ್ತು ಶಿಕ್ಷಣ ಸಚಿವಾಲಯಗಳ ಅಧೀನದಲ್ಲಿಯೂ ಆಸ್ಪತ್ರೆಗಳಿದ್ದು ಅವುಗಳಿಗೂ ಭೂಷಣ್ ಅವರು ಪತ್ರ ಬರೆದಿದ್ದಾರೆ.

ಸೋಂಕು ತೀವ್ರ: ಸತತ ನಾಲ್ಕನೇ ದಿನವೂ ಹೊಸದಾಗಿ ಸೋಂಕು ದೃಢಪಟ್ಟವರ ಸಂಖ್ಯೆ ಎರಡು ಲಕ್ಷವನ್ನು ಮೀರಿದೆ. ಇದೇ ಮೊದಲಿಗೆ ಸಾವಿನ ಸಂಖ್ಯೆ ಭಾನುವಾರ (ಬೆಳಿಗ್ಗೆ 8 ಗಂಟೆವರೆಗಿನ 24 ತಾಸುಗಳಲ್ಲಿ) 1,500 ದಾಟಿದೆ.

ಆಮ್ಲಜನಕ: ಕೈಗಾರಿಕೆ ಬಳಕೆಗೆ ನಿಷೇಧ

ಭಾರತದಲ್ಲಿ ತಯಾರಿಸಲಾಗುವ ಆಮ್ಲಜನಕದಲ್ಲಿ ಶೇ 60ರಷ್ಟು ವೈದ್ಯಕೀಯ ಕ್ಷೇತ್ರದಲ್ಲಿಯೇ ಬಳಕೆಯಾಗುತ್ತಿದೆ. ಈಗ, ಆಸ್ಪತ್ರೆಗಳಲ್ಲಿ ಆಮ್ಲಜನಕ ಕೊರತೆ ಕಾಡುತ್ತಿದೆ. ಹಾಗಾಗಿ, ಒಂಬತ್ತು ಕ್ಷೇತ್ರಗಳನ್ನು ಬಿಟ್ಟು ಬೇರೆ ಎಲ್ಲಿಯೂ ಆಮ್ಲಜನಕದ ಕೈಗಾರಿಕಾ ಬಳಕೆಗೆ ಅವಕಾಶ ನಿರಾಕರಿಸಿ ಸರ್ಕಾರ ಭಾನುವಾರ ಆದೇಶ ಹೊರಡಿಸಿದೆ. ಪ್ರಕರಣಗಳು ಅತಿ ಹೆಚ್ಚು ದಾಖಲಾಗುತ್ತಿರುವ ಮಹಾರಾಷ್ಟ್ರ, ದೆಹಲಿ, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಕರ್ನಾಟಕದ ಪರಿಸ್ಥಿತಿ ಅವಲೋಕಿಸಿದ ಬಳಿಕ ಉನ್ನತಾಧಿಕಾರ ಸಮಿತಿಯು ಈ ನಿರ್ಧಾರಕ್ಕೆ ಬಂದಿದೆ.

ರೆಮ್‌ಡಿಸಿವಿರ್ ಅಕ್ರಮ ಮಾರಾಟ: ಮೂವರ ಬಂಧನ

ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಅಕ್ರಮವಾಗಿ ಸಂಗ್ರಹಿಸಿ ₹10,500 ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ಔಷಧ ಮಳಿಗೆ ಮಾಲೀಕರಿಬ್ಬರು ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ರಾಜೇಶ್, ಶಾಕೀಬ್ ಹಾಗೂ ಸುಹೇಲ್ ಬಂಧಿತರು. ಅವರಿಂದ 11 ಚುಚ್ಚುಮದ್ದು ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ. ಮೂವರ ವಿರುದ್ಧವೂ ಸುದ್ದಗುಂಟೆಪಾಳ್ಯ ಹಾಗೂ ಮಡಿವಾಳ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳಾದ ರಾಜೇಶ್ ಹಾಗೂ ಶಾಕೀಬ್, ಸುದ್ದಗುಂಟೆಪಾಳ್ಯ ಬಳಿ 'ಗುರುಶ್ರೀ ಮೆಡಿಕಲ್ಸ್' ಹೆಸರಿನಲ್ಲಿ ಔಷಧಿ ಮಳಿಗೆ ಇಟ್ಟುಕೊಂಡಿದ್ದರು' ಎಂದೂ ತಿಳಿಸಿದರು.

9ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 2,3,9

ರಾಜ್ಯಪಾಲರಿಗೆ ಮಾಹಿತಿ

ಕೋವಿಡ್ ನಿಯಂತ್ರಣ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಕುರಿತು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ ಮತ್ತು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರು ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ರಾಜಭವನದಲ್ಲಿ ಭೇಟಿ ಮಾಡಿ ಮಾಹಿತಿ ನೀಡಿದರು.

ಕೊರೊನಾ ಸೋಂಕಿತರಿಗೆ ಆಮ್ಲಜನಕ ಪೂರೈಕೆ, ಔಷಧ ಹಾಗೂ ಹಾಸಿಗೆ ವ್ಯವಸ್ಥೆಯನ್ನು ಯಾವುದೇ ಲೋಪವಿಲ್ಲದಂತೆ ಕಲ್ಪಿಸಲು ಅಧಿಕಾರಿಗಳಿಗೆ ರಾಜ್ಯಪಾಲರು ಸೂಚಿಸಿದ್ದಾರೆ. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ರಾಜ್ಯಪಾಲರನ್ನು ಶನಿವಾರ ಭೇಟಿ ಮಾಡಿದ್ದರು.

ಊರಿನತ್ತ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವ ಕಾರಣ ಜನರು ತಮ್ಮ ಊರುಗಳಿಗೆ ತೆರಳಲು ಜಾರ್ಖಂಡ್‌ನ ರಾಂಚಿಯ ಹಟಿಯಾ ರೈಲು ನಿಲ್ದಾಣದಲ್ಲಿ ಭಾನುವಾರ ಸರದಿಯಲ್ಲಿ ನಿಂತಿದ್ದರು –ಪಿಟಿಐ ಚಿತ್ರ

ಗೈರಾದ ನೌಕರರ ವಿರುದ್ಧ ಕ್ರಮಕ್ಕೆ ಸಿದ್ಧತೆ

ಬಸ್ ಸಂಚಾರ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆಗೆ ಆಗ್ರಹಿಸಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರು ನಡೆಸುತ್ತಿರುವ ಮುಷ್ಕರ 12 ದಿನ ಪೂರೈಸಿದೆ. ಹೋರಾಟದ ನಡುವೆಯೇ ಭಾನುವಾರ ನಾಲ್ಕೂ ನಿಗಮಗಳ ಸುಮಾರು 7,500 ಬಸ್‌ಗಳು ಸಂಚಾರ ನಡೆಸಿವೆ.

ದಿನದಿಂದ ದಿನಕ್ಕೆ ಕರ್ತವ್ಯಕ್ಕೆ ಹಾಜರಾಗುತ್ತಿರುವ ನೌಕರರ ಸಂಖ್ಯೆ ಹೆಚ್ಚುತ್ತಿದೆ. ನಾಲ್ಕೂ ನಿಗಮಗಳಲ್ಲಿ ಒಟ್ಟು 1,000 ಕ್ಕೂ ಹೆಚ್ಚು ನೌಕರರು ಭಾನುವಾರ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಕೆಎಸ್‌ಆರ್‌ಟಿಸಿಯಲ್ಲಿ ನಿಗದಿಯಾಗಿದ್ದ ಟ್ರಿಪ್‌ಗಳ ಪೈಕಿ ಶೇಕಡ 50ರಷ್ಟನ್ನು ಪೂರ್ಣಗೊಳಿಸಿದೆ. ಬಿಎಂಟಿಸಿ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕದ ರಸ್ತೆ ಸಾರಿಗೆ ಸಂಸ್ಥೆಗಳ ಒಟ್ಟು ನಿಗದಿತ ಟ್ರಿಪ್‌ಗಳ ಪೈಕಿ ಶೇ 40ರಷ್ಟು ಬಸ್‌ಗಳ ಸಂಚಾರ ನಡೆದಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ಮತ್ತಷ್ಟು ನೌಕರರು ಕರ್ತವ್ಯಕ್ಕೆ ಹಾಜರಾಗುವ ನಿರೀಕ್ಷೆ ಇದೆ. ಕೆಲವು ನೌಕರರು ತಾವು ಕೆಲಸಕ್ಕೆ ಹಾಜರಾಗದಂತೆ ಒತ್ತಡ, ಬೆದರಿಕೆ ಇದೆ ಎಂಬ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಕರ್ತವ್ಯಕ್ಕೆ ಹಾಜರಾದರೆ ಸೂಕ್ತ ಭದ್ರತೆ ಒದಗಿಸುವುದಾಗಿ ಭರವಸೆ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮುಷ್ಕರದಲ್ಲಿ ಪಾಲ್ಗೊಂಡಿದ್ದ 2,443 ನೌಕರರನ್ನು ಅಮಾನತುಗೊಳಿಸಿ ಶನಿವಾರ ಆದೇಶ ಹೊರಡಿಸಲಾಗಿತ್ತು.

'ಸೋಮವಾರ ಮಧ್ಯಾಹ್ನದವರೆಗೂ ಕಾದು ನೋಡಲಾಗುವುದು. ಆ ಬಳಿಕವೂ ಕರ್ತವ್ಯಕ್ಕೆ ಹಾಜರಾಗದ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಪ್ರಕ್ರಿಯೆ ಮತ್ತೆ ಆರಂಭವಾಗಲಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ತಿಳಿಸಿದರು.

ಮತ್ತಷ್ಟು ಬಸ್‌ಗಳಿಗೆ ಹಾನಿ: ಮುಷ್ಕರದ ನಡುವೆಯೂ ಸಂಚರಿಸುತ್ತಿರುವ ಸರ್ಕಾರಿ ಬಸ್‌ಗಳಿಗೆ ಹಾನಿ ಉಂಟುಮಾಡುತ್ತಿರುವ ಪ್ರಕರಣಗಳೂ ಮುಂದುವರಿದಿವೆ. ಮುಷ್ಕರ ಆರಂಭವಾದ ದಿನದಿಂದ ಭಾನುವಾರ ಸಂಜೆಯವರೆಗೆ 105 ಬಸ್‌ಗಳಿಗೆ ಹಾನಿ ಮಾಡಲಾಗಿದೆ ಎಂಬ ಮಾಹಿತಿಯನ್ನು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಂಚಿಕೊಂಡಿದ್ದಾರೆ.

ಬಸ್‌ಗಳಿಗೆ ಹಾನಿ ಉಂಟುಮಾಡಿದ ಆರೋಪದಡಿ 394 ಜನರ ವಿರುದ್ಧ 176 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಈವರೆಗೆ 88 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಬಸ್ ಸಂಚಾರಕ್ಕೆ ಅಡ್ಡಿಪಡಿಸುತ್ತಿರುವವರು ಮತ್ತು ಕರ್ತವ್ಯಕ್ಕೆ ಹಾಜರಾಗದಂತೆ ನೌಕರರ ಮೇಲೆ ಒತ್ತಡ ಹೇರುತ್ತಿರುವವರ ವಿರುದ್ಧ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಎಸ್ಮಾ) ಅಡಿಯಲ್ಲಿ ಪ್ರಕರಣ ದಾಖಲಿಸುವುದೂ ಮುಂದುವರಿದಿದೆ. ಭಾನುವಾರ ಸಂಜೆಯವರೆಗೆ 207 ನೌಕರರ ವಿರುದ್ಧ 43 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಈ ಪೈಕಿ 50 ಮಂದಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇಂದು ಉಪವಾಸ ಸತ್ಯಾಗ್ರಹ

'ಸಾರಿಗೆ ನಿಗಮಗಳ ನೌಕರರ ಬೇಡಿಕೆ ಇತ್ಯರ್ಥಕ್ಕೆ ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ಸ್ಪಂದಿಸುತ್ತಿಲ್ಲ. ಈ ಧೋರಣೆಯನ್ನು ಖಂಡಿಸಿ ಸೋಮವಾರ ರಾಜ್ಯದಾದ್ಯಂತ ಸಾರಿಗೆ ನಿಗಮಗಳ ನೌಕರರು ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ' ಎಂದು ರಾಜ್ಯ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ.

ಭಾನುವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೋಮವಾರ ಬೆಳಿಗ್ಗೆ ಬೆಂಗಳೂರಿನ ಆನಂದರಾವ್ ವೃತ್ತದ ಮಹಾತ್ಮ ಗಾಂಧಿ ಪ್ರತಿಮೆ ಎದುರಿನಲ್ಲಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ಅದೇ ರೀತಿ ರಾಜ್ಯದ ಹಲವು ಕಡೆಗಳಲ್ಲಿ ಸಾರಿಗೆ ನೌಕರರು ಗಾಂಧಿ ಪ್ರತಿಮೆಗಳ ಬಳಿಯಲ್ಲೇ ಉಪವಾಸ ಸತ್ಯಾಗ್ರಹ ನಡೆಸುತ್ತಾರೆ' ಎಂದರು.

ಸಾರಿಗೆ ನೌಕರರ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಮಾತುಕತೆ ನಡೆಸಬೇಕಿತ್ತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಕೋವಿಡ್ ಸೋಂಕು ತಗುಲಿದೆ. ಉಳಿದ ಸಚಿವರು ಮಾತುಕತೆ ನಡೆಸಬಹುದಿತ್ತು. ಸರ್ಕಾರ ಸಾರಿಗೆ ನೌಕರರ ಬೇಡಿಕೆಗಳ ಕುರಿತು ತಿರಸ್ಕಾರದ ಭಾವನೆ ಹೊಂದಿದೆ. ಸೋಮವಾರದಿಂದ ಹೋರಾಟ ತೀವ್ರ ಸ್ವರೂಪ ಪಡೆಯಲಿದ್ದು, ಜೈಲ್ ಭರೋ ಚಳವಳಿಗೂ ನೌಕರರು ಸಜ್ಜಾಗಿದ್ದಾರೆ ಎಂದು ಹೇಳಿದರು.

ಭಾನುವಾರ ರಸ್ತೆಗಿಳಿದ ಬಸ್‌ಗಳು	
ಕೆಎಸ್‌ಆರ್‌ಟಿಸಿ	3,445
ಬಿಎಂಟಿಸಿ	1,406
ಎನ್‌ಇಕೆಆರ್‌ಟಿಸಿ	1,503
ಎನ್‌ಡಬ್ಲ್ಯುಕೆಆರ್‌ಟಿಸಿ	1,148
ಒಟ್ಟು	7,502

'ಬೆಳಗಾವಿಯಲ್ಲಿ ಮಹಾರಾಷ್ಟ್ರ ಸರ್ಕಾರ ಕಚೇರಿ ಸ್ಥಾಪಿಸಲಿ'

ಮುಂಬೈ (ಪಿಟಿಐ): ಮರಾಠಿ ಭಾಷಿಕರ ಅಭಿವೃದ್ಧಿಗಾಗಿ ಮಹಾರಾಷ್ಟ್ರ ಸರ್ಕಾರ ಬೆಳಗಾವಿಯಲ್ಲಿ ಕಚೇರಿಯನ್ನು ಸ್ಥಾಪಿಸಬೇಕು ಎಂದು ಶಿವಸೇನಾ ಮುಖಂಡ, ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಭಾನುವಾರ ಹೇಳಿದ್ದಾರೆ.

ಪಕ್ಷದ ಮುಖವಾಣಿ 'ಸಾಮ್ನಾ'ದಲ್ಲಿ ಪ್ರಕಟವಾಗುವ ತಮ್ಮ ವಾರದ ಅಂಕಣದಲ್ಲಿ ಈ ಕುರಿತು ಬರೆದಿರುವ ಅವರು, 'ಗಡಿ ಪ್ರದೇಶಗಳಿಗೆ ಸಂಬಂಧಿಸಿ ಸಮನ್ವಯ ಸಚಿವರಾಗಿರುವ ಏಕನಾಥ್ ಶಿಂಧೆ ಅವರು ಬೆಳಗಾವಿ ಜಿಲ್ಲೆಗೆ ಮೇಲಿಂದ ಮೇಲೆ ಭೇಟಿ ನೀಡಬೇಕು' ಎಂದು ಸಲಹೆ ನೀಡಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಮನ್ವಯ ಸಚಿವರಾಗಿದ್ದ ಚಂದ್ರಕಾಂತ ಪಾಟೀಲ ವಿವಾದಿತ ಗಡಿ ಪ್ರದೇಶಗಳಿಗೆ ಯಾವತ್ತೂ ಭೇಟಿ ನೀಡಲೇ ಇಲ್ಲ. ಗಡಿ ವಿವಾದಕ್ಕೆ ಸಂಬಂಧಿಸಿ ಅವರು ನೀಡಿದ್ದ ಹೇಳಿಕೆಗಳು ಸಾಕಷ್ಟು ಗೊಂದಲಕ್ಕೆ ಕಾರಣವಾಗಿದ್ದವು ಎಂದು ಟೀಕಿಸಿದ್ದಾರೆ.

ಗಡಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿದ್ದು, ಕರ್ನಾಟಕದ ವಾದದ ವಿರುದ್ಧ ಮಹಾರಾಷ್ಟ್ರ ಸರ್ಕಾರ ತನ್ನ ನಿಲುವನ್ನು ಮತ್ತಷ್ಟೂ ಗಟ್ಟಿಗೊಳಿಸಬೇಕು. ರಾಜ್ಯದ ಅಡ್ವೊಕೇಟ್ ಜನರಲ್ ಅವರು ಬೆಳಗಾವಿ ಸೇರಿದಂತೆ ಗಡಿ ಪ್ರದೇಶಗಳಿಗೆ ಭೇಟಿ ನೀಡಿ, ಗಡಿ ವಿವಾದದ ಬಗ್ಗೆ ಅಲ್ಲಿನ ಜನರಿಗೆ ಸಮಗ್ರ ಮಾಹಿತಿ ನೀಡಬೇಕು ಎಂದು ರಾವುತ್ ಹೇಳಿದ್ದಾರೆ.

'ಮುಂಬೈನಲ್ಲಿ ವ್ಯಾಪಾರ ನಡೆಸುವುದು ಕನ್ನಡಿಗರಿಗೆ ಕಷ್ಟವಾಗಲಿದೆ'

ಬೆಳಗಾವಿಯಲ್ಲಿ ಮರಾಠಿ ಭಾಷಿಕರ ಮೇಲೆ ಕನ್ನಡಿಗರು ದಾಳಿ ನಡೆಸಿದರು. ಹೀಗಾಗಿ ಕರ್ನಾಟಕ ಸಾರಿಗೆ ಸಂಸ್ಥೆಗಳಿಗೆ ಸೇರಿದ ಬಸ್‌ಗಳನ್ನು ಜಖಂಗೊಳಿಸುವ ಮೂಲಕ ಶಿವಸೈನಿಕರು ತಕ್ಕ ಪ್ರತ್ಯುತ್ತರ ನೀಡಿದರು ಎಂದು ರಾವುತ್ ಹೇಳಿದ್ದಾರೆ.

'ಒಂದು ವೇಳೆ ಇಂಥ ಘಟನೆಗಳು ಮುಂಬೈನಲ್ಲಿ ನಡೆದರೆ, ಇಲ್ಲಿರುವ ಕನ್ನಡಿಗರಿಗೆ ತಮ್ಮ ವ್ಯಾಪಾರ–ವಹಿವಾಟು ನಡೆಸುವುದು ಕಷ್ಟವಾಗುವುದು' ಎಂದು ಎಚ್ಚರಿಸಿರುವ ಅವರು, 'ಆ ಮಟ್ಟಕ್ಕೆ ಯಾರೂ ಹೋಗಬಾರದು' ಎಂದಿದ್ದಾರೆ.

'ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ, ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಅವರು ಮಹಾರಾಷ್ಟ್ರ ಏಕೀಕರಣ ಸಮಿತಿ ಅಭ್ಯರ್ಥಿ ಶುಭಂ ಶೇಳಕೆ ವಿರುದ್ಧ ಪ್ರಚಾರ ಮಾಡಿದರು' ಎಂದು ಟೀಕಿಸಿದ್ದಾರೆ.

'ಶೇಳಕೆ ಅವರು ಬೆಳಗಾವಿಯಲ್ಲಿರುವ ಮರಾಠಿ ಭಾಷಿಕರ ಏಕತೆಯನ್ನು ಪ್ರತಿನಿಧಿಸುವ ಅಭ್ಯರ್ಥಿಯಾಗಿದ್ದರು. ಹೀಗಾಗಿ ಫಡಣವೀಸ್ ಅವರು ಶೇಳಕೆ ವಿರುದ್ಧ ಚುನಾವಣಾ ಪ್ರಚಾರ ಕೈಗೊಳ್ಳಬಾರದಿತ್ತು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಎಂ.ಎ. ಹೆಗಡೆ ನಿಧನ

ಬೆಂಗಳೂರು: ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎಂ.ಎ. ಹೆಗಡೆ (73) ಅವರು ಭಾನುವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಹೆಗಡೆ ಅವರಿಗೆ ಏ.12ರಂದು ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಸೋಂಕಿನ ಲಕ್ಷಣಗಳು ಅಷ್ಟಾಗಿ ಗೋಚರಿಸದ ಕಾರಣ ಅವರು ವಿದ್ಯಾರಣ್ಯಪುರದಲ್ಲಿರುವ ಪುತ್ರನ ಮನೆಯಲ್ಲಿ ಆರೈಕೆಗೆ ಒಳಗಾಗಿದ್ದರು. ಭಾನುವಾರ ಬೆಳಿಗ್ಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅವರನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಯಿತು. ಆದರೆ, ಆಸ್ಪತ್ರೆಗೆ ದಾಖಲಾಗುವ ಮೊದಲೇ ಮಾರ್ಗಮಧ್ಯದಲ್ಲಿ ಮೃತಪಟ್ಟರು. ಮರಣೋತ್ತರ ಕೋವಿಡ್ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದಿದೆ.

ಅವರ ಪತ್ನಿ ಹಾಗೂ ಪುತ್ರನಿಗೆ ಕೂಡ ಕೊರೊನಾ ಸೋಂಕು ತಗುಲಿದ್ದು, ಅವರು ಮನೆ ಆರೈಕೆಗೆ ಒಳಗಾಗಿದ್ದಾರೆ. ಸಂಜೆ 4.30ಕ್ಕೆ ಯಲಹಂಕದ ರುದ್ರಭೂಮಿಯಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ಅಂತ್ಯಸಂಸ್ಕಾರ ನಡೆಯಿತು.

4ನೇ ಪುಟ ನೋಡಿ | ನುಡಿನಮನ 4

ಕೋವಿಡ್: ಜೆಇಇ (ಮೇನ್) ಮುಂದೂಡಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಏಪ್ರಿಲ್ 27–30ಕ್ಕೆ ನಿಗದಿಯಾಗಿದ್ದ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ಜೆಇಇ (ಮೇನ್)ಅನ್ನು ಮುಂದೂಡಲಾಗಿದೆ ಎಂದು ಕೇಂದ್ರದ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಭಾನುವಾರ ತಿಳಿಸಿದ್ದಾರೆ.

'ಈಗಿನ ಕೋವಿಡ್–19 ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಏಪ್ರಿಲ್ 2021ರ ಜೆಇಇ ಮೇನ್ ಪರೀಕ್ಷೆಯನ್ನು ಮುಂದೂಡುವಂತೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ (ಎನ್‌ಟಿಎ) ಸಲಹೆ ನೀಡಿದ್ದೇನೆ. ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಅವರ ಶೈಕ್ಷಣಿಕ ಜೀವನವನ್ನು ನಿಭಾಯಿಸುವಂತೆ ಮಾಡುವುದು ನಮ್ಮ ಪ್ರಮುಖ ಕಾಳಜಿಯಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ಪ್ರಸ್ತುತ ಪರಿಸ್ಥಿತಿ ಮತ್ತು ವಿದ್ಯಾರ್ಥಿಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಏಪ್ರಿಲ್‌ನಲ್ಲಿ ನಡೆಯಬೇಕಿದ್ದ ಜೆಇಇ(ಮೇನ್) ಪರೀಕ್ಷೆಯನ್ನು ಮುಂದೂಡಲಾಗಿದೆ' ಎಂದು ಎನ್‌ಟಿಎ ಸಹ ಅಧಿಕೃತ ಆದೇಶ ಹೊರಡಿಸಿದೆ.

'ಪರಿಷ್ಕೃತ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು. ಪರೀಕ್ಷೆಗಿಂತ 15 ದಿನ ಮುಂಚಿತವಾಗಿ ದಿನಾಂಕವನ್ನು ತಿಳಿಸಲಾಗುವುದು' ಎಂದು ಎನ್‌ಟಿಎ ತಿಳಿಸಿದೆ.

ಒಳ ಪುಟಗಳು

ಮತ್ತೆ ಏರುಗತಿಯಲ್ಲಿ ಚಿನ್ನದ ದರ 8
ಜಿಡಿಪಿ ವೃದ್ಧಿ: ಅಂದಾಜು ತಗ್ಗಿಸಿದ ಬ್ರೋಕರೇಜ್ ಸಂಸ್ಥೆಗಳು 8
ಲಸಿಕೆ ನೀಡುವಿಕೆಗೆ ವೇಗ ತುಂಬಿ: ಮನಮೋಹನ್ ಸಿಂಗ್ 9

ಎಸ್ಸೆಸ್ಸೆಲ್ಸಿ- ಪಿಯುಸಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ವೈದ್ಯ– ಆರೋಗ್ಯ ಸಿಬ್ಬಂದಿ ಕುಟುಂಬಗಳಿಗೆ ತಲುಪದ ವಿಮೆ!

• ಅಕ್ರಂ ಮೊಹಮ್ಮದ್

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ ಕೋವಿಡ್ ಮೊದಲನೇ ಅಲೆಯ ವೇಳೆ ಸೋಂಕಿಗೆ ಬಲಿಯಾದ ವೈದ್ಯರು, ಆಶಾ ಕಾರ್ಯಕರ್ತೆಯರು, ಮತ್ತಿತರ ಆರೋಗ್ಯ ಸಿಬ್ಬಂದಿಯ ಬಹುತೇಕ ಕುಟುಂಬಗಳಿಗೆ ಕೇಂದ್ರ ಸರ್ಕಾರ ಘೋಷಿಸಿದ್ದ ₹ 50 ಲಕ್ಷ ಮೊತ್ತದ ವಿಮೆ ಇನ್ನೂ ತಲುಪಿಲ್ಲ.

'ಕೋವಿಡ್ ಮೊದಲನೇ ಅಲೆಯ ಸಮಯದಲ್ಲಿ 55 ವೈದ್ಯರು ಸೋಂಕಿನಿಂದ ಮೃತಪಟ್ಟಿದ್ದು, 10 ಮಂದಿಯ ಕುಟುಂಬಗಳಿಗೆ ಮಾತ್ರ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ (ಪಿಎಂಕೆಜಿಪಿ) ಪರಿಹಾರ ತಲುಪಿದೆ. 11 ಮಂದಿ ಆಶಾ ಕಾರ್ಯಕರ್ತೆಯರು ಸೋಂಕಿಗೆ ಬಲಿಯಾಗಿದ್ದು, ಒಬ್ಬರ ಕುಟುಂಬಕ್ಕೆ ಮಾತ್ರ ವಿಮಾ ಪರಿಹಾರ ಸಂದಾಯವಾಗಿದೆ' ಎಂದು ಭಾರತೀಯ ವೈದ್ಯರ ಸಂಘದ (ಐಎಂಎ) ರಾಜ್ಯ ಘಟಕ ತಿಳಿಸಿದೆ.

ಕೋವಿಡ್‌ನಿಂದ ಮೃತಪಟ್ಟ 55 ವೈದ್ಯರ ಪಟ್ಟಿಯನ್ನು ಹಂಚಿಕೊಂಡಿರುವ ಐಎಂಎ ಕರ್ನಾಟಕದ ಸದಸ್ಯರಾಗಿರುವ ಡಾ. ಶ್ರೀನಿವಾಸ್ ಎಸ್ ಅವರು 'ಪ್ರಜಾವಾಣಿ' ಜತೆ ಮಾತನಾಡಿ, 'ಕ್ಲಿನಿಕ್‌ಗಳಲ್ಲಿ ರೋಗಿಗಳ ಆರೋಗ್ಯ ತಪಾಸಣೆ ಮಾಡಿ, ಚಿಕಿತ್ಸೆ ನೀಡಿದ ವೈದ್ಯರು ನಿಜವಾಗಿಯೂ ಕೋವಿಡ್‌ನ ಪರಿಣಾಮಗಳನ್ನು ಎದುರಿಸಿದವರು. ಆದರೆ, ಸೋಂಕಿಗೆ ಬಲಿಯಾದ ವೈದ್ಯರಲ್ಲಿ ಬೆರಳೆಣಿಕೆಯಷ್ಟು ವೈದ್ಯರ ಕುಟುಂಬಗಳಿಗೆ ಮಾತ್ರ ಪರಿಹಾರ ದೊರಕಿದೆ' ಎಂದರು.

'ಕೋವಿಡ್‌ನಿಂದ ಮೃತಪಟ್ಟ 11 ಆಶಾ ಕಾರ್ಯಕರ್ತೆಯರ ವಿವರಗಳನ್ನು ದಾಖಲೆಗಳೊಂದಿಗೆ ಸಲ್ಲಿಸಲಾಗಿತ್ತು. ಒಬ್ಬರ ಕುಟುಂಬಕ್ಕೆ ಮಾತ್ರ ಪರಿಹಾರ ನೀಡಲಾಗಿದೆ' ಎಂದು ರಾಜ್ಯ ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ನಾಗಲಕ್ಷ್ಮಿ ಮಾಹಿತಿ ನೀಡಿದರು.

'ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರಲ್ಲಿ ಸುಮಾರು 25 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಯಾದಗಿರಿಯ ಒಂದು ಕುಟುಂಬಕ್ಕೆ ಮಾತ್ರ ಪರಿಹಾರ ಸಂದಾಯವಾಗಿದೆ' ಎಂದು ರಾಜ್ಯ ಆರೋಗ್ಯ ಇಲಾಖೆಯ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ವಿಶ್ವಾರಾಧ್ಯ ಎಚ್ ಹೇಳಿದರು.

ಆರೋಗ್ಯ ಕಾರ್ಯಕರ್ತರ ವಿಮೆ ರದ್ದು

ನವದೆಹಲಿ: ಕೋವಿಡ್ ಬಾಧಿತರ ಆರೈಕೆಯ ಸಂದರ್ಭದಲ್ಲಿ ಮೃತಪಟ್ಟ ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಪ್ರಕಟಿಸಲಾಗಿದ್ದ ₹50 ಲಕ್ಷದ ವಿಮಾ ಸೌಲಭ್ಯವನ್ನು ಕೇಂದ್ರ ಸರ್ಕಾರವು ಹಿಂದಕ್ಕೆ ಪಡೆದಿದೆ.

ಮಾರ್ಚ್ 24ರಂದೇ ಈ ಯೋಜನೆ ಕೊನೆಯಾಗಿದೆ. ಈ ದಿನಾಂಕಕ್ಕೆ ಮೊದಲೇ ಮೃತಪಟ್ಟ ಆರೋಗ್ಯ ಕಾರ್ಯಕರ್ತರ ಕುಟುಂಬಗಳು ಈ ಸೌಲಭ್ಯ ಪಡೆಯುವ ಪ್ರಕ್ರಿಯೆ ಪೂರ್ಣಗೊಳಿಸಲು ಒಂದು ತಿಂಗಳು ಅವಕಾಶ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ರಾಜ್ಯಗಳಿಗೆ ಪತ್ರ ಬರೆದು ತಿಳಿಸಿದ್ದಾರೆ.

ದೇಶದಲ್ಲಿ ಲಾಕ್‌ಡೌನ್ ಹೇರಿದ ಕೆಲವೇ ದಿನಗಳಲ್ಲಿ ಅಂದರೆ, 2020ರ ಮಾರ್ಚ್ 30ರಂದು ಈ ಯೋಜನೆ ಘೋಷಣೆಯಾಗಿತ್ತು. ಈವರೆಗೆ 287 ಕುಟುಂಬಗಳಿಗೆ ವಿಮಾ ಹಣ ಸಂದಾಯವಾಗಿದೆ ಅಥವಾ ಅನುಮೋದನೆ ಆಗಿದೆ.

ಖಾಸಗಿ ಕಂಪನಿ ಸಹಭಾಗಿತ್ವ: ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಂದ ಅಧ್ಯಯನ

ಪ್ಲಾಸ್ಟಿಕ್ ಕಸದಿಂದ ಡೀಸೆಲ್ ಉತ್ಪಾದನೆ

• ಆರ್.ಜಿತೇಂದ್ರ

ರಾಮನಗರ: ಪ್ಲಾಸ್ಟಿಕ್ ಕಸದಿಂದ ಇಂಧನ ಉತ್ಪಾದಿಸುವ ಮಾದರಿ ಯೋಜನೆ ಜಾರಿಗೆ ಇಲ್ಲಿನ ಜಿಲ್ಲಾ ಪಂಚಾಯಿತಿ ಮುಂದಾಗಿದ್ದು, ಈ ಸಂಬಂಧ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕರ ತಂಡ ಅಧ್ಯಯನ ನಡೆಸಿದೆ.

ಗ್ರಾಮೀಣ ಭಾಗದಲ್ಲಿನ ಕಸ ವಿಲೇವಾರಿ ಘಟಕಗಳನ್ನು ಇದಕ್ಕೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಮೊದಲಿಗೆ ನಾಲ್ಕೈದು ಘಟಕಗಳಲ್ಲಿ ಯಂತ್ರೋಪಕರಣ ಅಳವಡಿಸಿ ಡೀಸೆಲ್ ಮಾದರಿಯ ಇಂಧನ ಉತ್ಪಾದನೆ ಮಾಡಲು ಯೋಜಿಸಲಾಗಿದೆ. ಇದಕ್ಕಾಗಿ ಖಾಸಗಿ ಕಂಪನಿ ಜೊತೆ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ. ಇದರಿಂದ ಸುಲಭವಾಗಿ ಪ್ಲಾಸ್ಟಿಕ್ ವಿಲೇವಾರಿ, ಮರುಬಳಕೆ ಸಾಧ್ಯವಾಗಲಿದೆ ಎನ್ನುತ್ತಾರೆ ಅಧಿಕಾರಿಗಳು.

ಉತ್ಪಾದನೆ ಹೇಗೆ?: ಕನಕಪುರ ತಾಲ್ಲೂಕಿನ ದೊಡ್ಡಮರಳವಾಡಿ ಬಳಿಯ ಭೀಮಸಂದ್ರದೊಡ್ಡಿ ಬಳಿ ಕಂಪನಿಯೊಂದು ಸಣ್ಣ ಪ್ರಮಾಣದಲ್ಲಿ ಪ್ಲಾಸ್ಟಿಕ್‌ನಿಂದ ಇಂಧನ ಉತ್ಪಾದನೆ ಘಟಕ ನಡೆಸುತ್ತಿದೆ. ಇಲ್ಲಿ ಏಕಕಾಲದಲ್ಲಿ 5 ಕೆ.ಜಿ ಪ್ಲಾಸ್ಟಿಕ್ ಬಳಸಿ ಇಂಧನ ತಯಾರಿಸಲಾಗುತ್ತಿದೆ.

ಹಾಲಿನ ಕವರ್, ಟೆಟ್ರಾ ಪ್ಯಾಕ್ ಮೊದಲಾದ ಪ್ಲಾಸ್ಟಿಕ್ ಕಸವನ್ನು ಸಂಗ್ರಹಿಸಿ ನಿರ್ದಿಷ್ಟ ಉಷ್ಣಾಂಶದಲ್ಲಿ ಕುದಿಸಿದಾಗ ಹೊರಹೊಮ್ಮುವ ಆವಿಯಿಂದ ಇಂಧನ ಶೇಖರಣೆ ಮಾಡಲಾಗುತ್ತಿದೆ. ಈ ಇಂಧನವನ್ನು ಫಿಲ್ಟರ್ ಮಾಡಿದಾಗ ಪ್ರತಿ ಕೆ.ಜಿ. ಪ್ಲಾಸ್ಟಿಕ್‌ಗೆ 400–600 ಎಂ.ಎಲ್. ಡೀಸೆಲ್ ಸಿಗುತ್ತಿದೆ.

ಇದನ್ನು ಸದ್ಯ ಕಾರ್ಖಾನೆಗಳ ಜನರೇಟರ್, ಬಾಯ್ಲರ್ ಮೊದಲಾದವುಗಳಿಗೆ ಬಳಸಲಾಗುತ್ತಿದೆ. ವಾಹನಗಳ ಬಳಕೆಗೆ ಇನ್ನೂ ಸರ್ಕಾರದಿಂದ ಅನುಮತಿ ಸಿಕ್ಕಿಲ್ಲ.

ಪ್ಲಾಸ್ಟಿಕ್ ಕಾಯಿಸುವ ಪ್ರಕ್ರಿಯೆಯಲ್ಲಿ ಶೇ 15–20 ಪ್ರಮಾಣ ಆವಿ ಆಗುತ್ತಿದ್ದು, ಇದನ್ನೂ ಬಯೋ ಗ್ಯಾಸ್ ಮಾದರಿಯಲ್ಲಿ ಸಂಗ್ರಹಿಸಬಹುದಾಗಿದೆ. ಕಡೆಗೆ ಉಳಿಯುವ ಶೇ 40ರಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ರಸ್ತೆ ನಿರ್ಮಾಣ, ಮತ್ತಿತರ ಕಾಮಗಾರಿಗೆ ಡಾಂಬರ್ ರೂಪದಲ್ಲಿ ಬಳಸಬಹುದಾಗಿದೆ. ಇದರಿಂದ ಶೇಕಡ 100ರಷ್ಟು ಪ್ಲಾಸ್ಟಿಕ್ ಮರುಬಳಕೆ ಸಾಧ್ಯವಿದೆ ಎನ್ನುತ್ತಾರೆ ಕಾರ್ಖಾನೆಯ ಸಿಬ್ಬಂದಿ.

ಭೀಮಸಂದ್ರದೊಡ್ಡಿಯಲ್ಲಿನ ಈ ಕಾರ್ಖಾನೆಯ ಕಾರ್ಯವೈಖರಿಯನ್ನು ಅಧಿಕಾರಿಗಳ ತಂಡ ಅಧ್ಯಯನ ಮಾಡಿದ್ದು, ಇದನ್ನೇ ಖಾಸಗಿ ಸಹಭಾಗಿತ್ವದಲ್ಲಿ ದೊಡ್ಡಮಟ್ಟದಲ್ಲಿ ನಡೆಸಲು ಯೋಜಿಸುತ್ತಿದೆ. 10–15 ಕೆ.ಜಿ ಸಾಮರ್ಥ್ಯದ ಘಟಕದ ನಿರ್ಮಾಣಕ್ಕೆ ₹ 5 ಲಕ್ಷದಿಂದ ₹10 ಲಕ್ಷ ವೆಚ್ಚ ಆಗಬಹುದು ಎಂದು ಅಂದಾಜಿಸಲಾಗಿದೆ. ಜಿಲ್ಲೆಯಲ್ಲಿ ಸದ್ಯ ಪ್ರತಿ ಕ್ಲಸ್ಟರ್‌ಗೆ ಒಂದರಂತೆ 14 ಘನತ್ಯಾಜ್ಯ ವಿಲೇವಾರಿ ಘಟಕಗಳು ಇವೆ. ಇವುಗಳ ಆವರಣದಲ್ಲೇ ಈ ಯೋಜನೆ ಅನುಷ್ಠಾನಕ್ಕೆ ಉದ್ದೇಶಿಸಲಾಗಿದೆ.

ಭೀಮಸಂದ್ರದೊಡ್ಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಕಂಪನಿ ಘಟಕ

ಪ್ರಜಾವಾಣಿ ವಿಶೇಷ

ಪ್ರತಿ ಕೆ.ಜಿ ಪ್ಲಾಸ್ಟಿಕ್‌ನಿಂದ 400–600 ಎಂ.ಎಲ್ ಡೀಸೆಲ್ ಉತ್ಪಾದನೆ ಮಾಡಬಹುದು. ಈ ಯೋಜನೆ ಅಡಿ ಶೇ 100ರಷ್ಟು ಪ್ಲಾಸ್ಟಿಕ್ ಮರುಬಳಕೆ ಸಾಧ್ಯವಿದೆ
ಭರತ್, ಮಾಲೀಕ, ಲ್ಯಾನ್ಸನ್ ಕಂಪನಿ

ಪ್ಲಾಸ್ಟಿಕ್‌ನಿಂದ ಡೀಸೆಲ್ ಉತ್ಪಾದಿಸುವ ಘಟಕವನ್ನು ಅಧ್ಯಯನ ಮಾಡಿದ್ದೇವೆ. ಜಿ.ಪಂ.ನ ಕಸ ವಿಲೇವಾರಿ ಘಟಕಗಳಲ್ಲಿ ದೊಡ್ಡ ಮಟ್ಟದಲ್ಲಿ ಇದನ್ನು ಅಳವಡಿಸುವ ಚಿಂತನೆ ಇದೆ
ಶಿವಕುಮಾರ್
ಯೋಜನಾ ನಿರ್ದೇಶಕ, ರಾಮನಗರ ಜಿ.ಪಂ.

ತೀವ್ರ ಉಸಿರಾಟ ಸಮಸ್ಯೆ ಇರುವ ರೋಗಿಗಳಿಗೆ ಸಿಗದ ತುರ್ತು ಚಿಕಿತ್ಸೆ • ಸ್ಪಂದಿಸದ ಬಿಬಿಎಂಪಿ ಸಹಾಯವಾಣಿ

ನೀಗದ ಹಾಸಿಗೆ ಬವಣೆ: ತಪ್ಪದ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಏಕಾಏಕಿ ಉಸಿರಾಟದ ಸಮಸ್ಯೆ ಕಾಣಿಸಿಕೊಂಡು ತುರ್ತು ಚಿಕಿತ್ಸೆಯ ಅಗತ್ಯ ಇರುವ ರೋಗಿಗಳು ಆಮ್ಲಜನಕ ಪೂರಣ ವ್ಯವಸ್ಥೆ ಇರುವ ಹಾಸಿಗೆಗಳನ್ನು ಪಡೆಯಲು ಸಮಸ್ಯೆ ಎದುರಿಸುತ್ತಿದ್ದಾರೆ.

ರೋಗ ಲಕ್ಷಣ ಇಲ್ಲದ ಕೋವಿಡ್ ಸೋಂಕಿತರು ಮನೆಯಲ್ಲೇ ಚಿಕಿತ್ಸೆಗೆ ಒಳಗಾಗುವಂತೆ ಬಿಬಿಎಂಪಿ ಅಧಿಕಾರಿಗಳು ಹೇಳುತ್ತಿದ್ದಾರೆ. ಮನೆಯಲ್ಲೇ ಆರೈಕೆಗೆ ಒಳಗಾಗುತ್ತಿರುವ ಅನೇಕರಲ್ಲಿ ಉಸಿರಾಟ ಸಮಸ್ಯೆ ಹಾಗೂ ರಕ್ತದಲ್ಲಿ ಆಮ್ಲಜನಕದ ಪ್ರಮಾಣದ ತೀವ್ರ ಕುಸಿತ ಕಾಣುವ ಪ್ರಕರಣಗಳು ಹೆಚ್ಚುತ್ತಿವೆ. ಇಂತಹ ಸಂದರ್ಭದಲ್ಲಿ ರೋಗಿಗಳ ಬಂಧುಗಳು ಬಿಬಿಎಂಪಿ ಗೊತ್ತುಪಡಿಸಿರುವ ಸಹಾಯವಾಣಿ 1912ಕ್ಕೆ ಕರೆ ಮಾಡುತ್ತಿದ್ದಾರೆ. ಈ ಸಹಾಯವಾಣಿಗೆ ಕರೆ ಮಾಡಿದರೂ ತಕ್ಷಣ ಹಾಸಿಗೆ ವ್ಯವಸ್ಥೆ ಕಲ್ಪಿಸಲು ಬಿಬಿಎಂಪಿ ಪಡಿಪಾಟಲು ಅನುಭವಿಸುತ್ತಿದೆ. ಸಕಾಲದಲ್ಲಿ ಹಾಸಿಗೆ ಸೌಕರ್ಯ ಸಿಗದೆಯೇ ಸೋಂಕಿತರು ಕೊನೆಯುಸಿರೆಳೆಯುತ್ತಿದ್ದಾರೆ.

ಬಿಬಿಎಂಪಿ ಹಾಸಿಗೆ ಹಂಚಿಕೆಗೆ ರೂಪಿಸಿರುವ ಕೇಂದ್ರೀಕೃತ ಪೋರ್ಟಲ್‌ನ ಅಂಕಿ ಅಂಶಗಳನ್ನು ಭಾನುವಾರ ರಾತ್ರಿ 9.45ರ ವೇಳೆಗೆ 'ಪ್ರಜಾವಾಣಿ' ಪರಿಶೀಲಿಸಿತು. ಆಮ್ಲಜನಕ ಪೂರೈಕೆ ಇರುವ 411 ಹಾಸಿಗೆಗಳಷ್ಟೇ ಖಾಲಿ ಇದ್ದವು. ಇವುಗಳಲ್ಲಿ 394 ಎಚ್‌ಡಿ ಘಟಕಗಳದ್ದು. ಐಸಿಯುಗಳಲ್ಲಿ 11 ಹಾಗೂ ವೆಂಟಿಲೇಟರ್ ಸೌಕರ್ಯ ಇರುವ ಐಸಿಯುಗಳಲ್ಲಿ 6 ಹಾಸಿಗೆಗಳು ಮಾತ್ರ ಖಾಲಿ ಇದ್ದವು.

ಕೆಲವು ಪ್ರಕರಣಗಳಲ್ಲಿ ಜನ ಬಿಬಿಎಂಪಿ ಸಹಾಯವಾಣಿಯ ಮೊರೆ ಹೋಗದೆ ನೇರವಾಗಿ ಆಸ್ಪತ್ರೆಗಳಿಗೆ ತೆರಳಿ ದಾಖಲಾಗಲು ಪ್ರಯತ್ನಿಸುತ್ತಿದ್ದಾರೆ. ಕೋವಿಡ್ ರೋಗಿಗಳ ಚಿಕಿತ್ಸೆಗೆ ಆಸ್ಪತ್ರೆಗಳು ಶೇ 50ರಷ್ಟು ಹಾಸಿಗೆಗಳನ್ನು ಕಾಯ್ದಿರಿಸಬೇಕು. ಬಿಬಿಎಂಪಿ ಸೂಚಿಸುವ ರೋಗಿಗಳಿಗೆ ಆಸ್ಪತ್ರೆ ಸಿಗದಿದ್ದರೆ ಸಮಸ್ಯೆ ಆಗುತ್ತದೆ ಎಂಬ ಕಾರಣಕ್ಕೆ ಕೆಲ ಆಸ್ಪತ್ರೆಗಳು ನೇರವಾಗಿ ಬರುವ ರೋಗಿಗಳನ್ನು ದಾಖಲಿಸಿಕೊಳ್ಳಲು ಹಿಂದೇಟು ಹಾಕುತ್ತಿವೆ. ಇದರಿಂದಾಗಿ ಕೋವಿಡ್ ರೋಗಿಗಳು ಹಾಸಿಗೆ ಸಿಗದೇ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವ ಸ್ಥಿತಿ ನಿರ್ಮಾಣವಾಗಿದೆ.

'ಆಸ್ಪತ್ರೆಗಳಲ್ಲಿ ಹಾಸಿಗೆ ಕೊರತೆ ಇಲ್ಲ. ಯಾರೇ ಆದರೂ ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಬೇಕಾದರೆ 1912 ಸಹಾಯವಾಣಿಗೆ ಕರೆ ಮಾಡಿ ಹಾಸಿಗೆ ಕಾಯ್ದಿರಿಸಬೇಕು. ಎಲ್ಲರೂ ಸಹಾಯವಾಣಿ ಮೂಲಕ ಹಾಸಿಗೆ ಕಾಯ್ದಿರಿಸಿದರೆ ಸಮಸ್ಯೆ ಉಂಟಾಗಲು ಸಾಧ್ಯವಿಲ್ಲ' ಎನ್ನುತ್ತಾರೆ ಬಿಬಿಎಂಪಿ ಅಧಿಕಾರಿಗಳು.

'ಬಿಬಿಎಂಪಿ ಸೂಚಿಸಿರುವ ಸಹಾಯವಾಣಿಗೆ ಕರೆ ಮಾಡಿದರೆ ಸ್ವೀಕರಿಸುವುದೇ ಇಲ್ಲ. ಏಕೆಂದರೆ ಹಂಚಿಕೆ ಮಾಡಲು ಬಿಬಿಎಂಪಿ ಬಳಿ ಹಾಸಿಗೆಗಳೇ ಇಲ್ಲ' ಎನ್ನುತ್ತಾರೆ ಪಾಲಿಕೆಯ ಮಾಜಿ ಸದಸ್ಯ ಅಬ್ದುಲ್ ವಾಜಿದ್.

ನಗರದಲ್ಲಿ ಹತ್ತು ದಿನಗಳಲ್ಲಿ 1 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಾಗಿದ್ದಾರೆ. ಕಳೆದ ವರ್ಷ ಸೋಂಕು ಹರಡುವಿಕೆ ತೀವ್ರಗತಿ ತಲುಪಿದ ಸಂದರ್ಭಕ್ಕೆ ಹೋಲಿಸಿದರೆ ಇದು ಹತ್ತು ಪಟ್ಟು ಹೆಚ್ಚು.

'ಸೋಂಕು ತೀವ್ರಗತಿ ಯಲ್ಲಿ ಹರಡುತ್ತಿರುವಾಗ ಮುಂದಿನ ಒಂದು ತಿಂಗಳ ಪರಿಸ್ಥಿತಿಯನ್ನು ಮುಂದಾಲೋಚನೆ ಮಾಡಿ ಸೌಕರ್ಯ ಕಲ್ಪಿಸಬೇಕು. ಆದರೆ, ಬಿಬಿಎಂಪಿ ಈಗ ಸೋಂಕು ದೃಢಪಡುತ್ತಿರುವವರಿಗೇ ಹಾಸಿಗೆಗಾಗಿ ಹರಸಾಹಸ ಪಡುತ್ತಿದೆ. ಭವಿಷ್ಯದ ದಿನ ನೆನದರೆ ದಿಗಿಲಾಗುತ್ತದೆ' ಎಂದರು ವಾಜಿದ್.

ಸಾಂದರ್ಭಿಕ ಚಿತ್ರ

ಕೋವಿಡ್ ನಿಯಂತ್ರಣ: ಬಿಬಿಎಂಪಿಗೆ ₹ 300 ಕೋಟಿ ಬಿಡುಗಡೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕು ನಿಯಂತ್ರಣ ಕಾರ್ಯಕ್ಕೆ ನೇಮಿಸಿಕೊಂಡಿರುವ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ವೇತನ, ಆಂಬುಲೆನ್ಸ್ ವಾಹನಗಳ ಬಾಡಿಗೆ ಮತ್ತು ತುರ್ತು ಖರೀದಿಸಿದ ಸಾಮಾಗ್ರಿಗಳು ಮತ್ತು ಬಾಕಿ ಬಿಲ್ಲುಗಳ ಪಾವತಿ ಉದ್ದೇಶಕ್ಕೆ ರಾಜ್ಯ ಸರ್ಕಾರ ₹ 300 ಕೋಟಿ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಬಿಡುಗಡೆಯಾದ ಮೊತ್ತದಲ್ಲಿ ಹೊರಗುತ್ತಿಗೆ, ಗುತ್ತಿಗೆ ಸಿಬ್ಬಂದಿಯ ಸಂಭಾವನೆ ಪಾವತಿಸಲು ಆದ್ಯತೆ ನೀಡಬೇಕು. ಖರೀದಿಸುವ ಪರಿಕರಗಳ ದರ, ರಾಜ್ಯ ಡ್ರಗ್ಸ್ ಆ್ಯಂಡ್ ಲಾಜಿಸ್ಟಿಕ್ಸ್ ಮತ್ತು ವೇರ್ ಹೌಸಿಂಗ್ ಸೊಸೈಟಿ ಅಂಥಹದ್ದೇ ಪರಿಕರಗಳಿಗೆ ನೀಡಿದ ದರಕ್ಕಿಂತ ಹೆಚ್ಚು ಇರಬಾರದು ಎಂದೂ ಷರತ್ತು ವಿಧಿಸಲಾಗಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,46,635 ಒಟ್ಟು ಸೋಂಕಿತರು

4,43,614 ಗುಣಮುಖರಾದವರು

97,897 ಸಕ್ರಿಯ ಪ್ರಕರಣ

5,123 ಸಾವು

ಭಾನುವಾರದ ಏರಿಕೆ

12,793 ದೃಢಪಟ್ಟ ಪ್ರಕರಣ

2,560 ಗುಣಮುಖ

60 ಸಾವು

ಪತ್ನಿಯ ಮರಣ ಕಂಡು ಪ್ರಾಣ ಬಿಟ್ಟ ಪತಿ

ಪತ್ನಿಯ ಸಾವನ್ನು ಕಂಡು ಪತಿಯೂ ಕೊನೆಯುಸಿರೆಳೆದ ಘಟನೆ ರಾಜಾಜಿನಗರದಲ್ಲಿ ನಡೆದಿದೆ.

ಗೃಹಲಕ್ಷ್ಮಿ ಬಡಾವಣೆಯ ನಿವಾಸಿ ಶ್ರೀನಿವಾಸ (59) ಹಾಗೂ ಅವರ ಪತ್ನಿ ವತ್ಸಲಾ (55) ಇಬ್ಬರಿಗೂ ಕೋವಿಡ್ ದೃಢಪಟ್ಟಿತ್ತು. ಅವರಿಬ್ಬರೂ ರಾಜಾಜಿನಗರದ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ವತ್ಸಲಾ ಅವರು ಶನಿವಾರ ಕೊನೆಯುಸಿರೆಳೆದಿದ್ದರು. ಪತ್ನಿಯ ಅಗಲುವಿಕೆಯಿಂದ ತೀವ್ರವಾಗಿ ನೊಂದಿದ್ದ ಶ್ರೀನಿವಾಸ ಅವರು ಭಾನುವಾರ ಮೃತಪಟ್ಟರು.

'ತಂದೆ ತಾಯಿ ಇಬ್ಬರ ಅಂತ್ಯಕ್ರಿಯೆಯನ್ನು ಮಗನೊಬ್ಬನೇ ನಿಭಾಯಿಸಬೇಕಾಗಿ ಬಂದಿದೆ. ತಾಯಿಯ ಅಂತ್ಯಕ್ರಿಯೆಯನ್ನು ಮಗ ಭಾನುವಾರ ನಡೆಸಿದ್ದಾರೆ. ತಂದೆಯ ಅಂತ್ಯಕ್ರಿಯೆಯನ್ನು ಸೋಮವಾರ ನಡೆಸಬೇಕಾಗಿದೆ. ನಾನು ಅಂತ್ಯಕ್ರಿಯೆಗೆ ಬೇಕಾದ ವ್ಯವಸ್ಥೆ ಕಲ್ಪಿಸಿ ಅವರಿಗೆ ಆತ್ಮಸ್ಥೈರ್ಯ ತುಂಬಿದೆ' ಎಂದು ಶಂಕರಮಠ ವಾರ್ಡ್‌ನ ನಿಕಟಪೂರ್ವ ಪಾಲಿಕೆ ಸದಸ್ಯ ಎಂ.ಶಿವರಾಜು ತಿಳಿಸಿದರು.

'ಶ್ರೀನಿವಾಸ ಅವರ ತಂದೆ ಕೃಷ್ಣ ಷಾ ಶಂಕರಮಠ ವಾರ್ಡ್‌ನ ಪಾಲಿಕೆ ಸದಸ್ಯರಾಗಿದ್ದವರು. ಅವರಿಗೆ 85 ವರ್ಷ. ಹಾಸಿಗೆ ಹಿಡಿದಿರುವ ಅವರೊಬ್ಬರನ್ನು ಹೊರತುಪಡಿಸಿ ಅವರ ಮನೆಯಲ್ಲಿ ಐವರಿಗೆ ಕೋವಿಡ್ ದೃಢಪಟ್ಟಿದೆ. ಅವರ ಕುಟುಂಬ ದಿಕ್ಕೇ ತೋಚದ ಸ್ಥಿತಿಯನ್ನು ತಲುಪಿದೆ. ಇಂತಹ ಕುಟುಂಬಗಳ ಬವಣೆಗಳನ್ನು ಸರ್ಕಾರ ಇನ್ನಾದರೂ ಅರ್ಥ ಮಾಡಿಕೊಳ್ಳಬೇಕು. ಕೋವಿಡ್ ಸೋಂಕು ನಿಯಂತ್ರಣಕ್ಕೆ ಕ್ರಮಕೈಗೊಳ್ಳಬೇಕು' ಎಂದು ಅವರು ಕೋರಿದರು.

ಹೆಬ್ಬಾಳದಲ್ಲಿ ಕೋವಿಡ್ ಆರೈಕೆ ಕೇಂದ್ರ

ಹೆಬ್ಬಾಳದ ಪಶುವೈದ್ಯ ಕಾಲೇಜಿನ ಆವರಣದಲ್ಲಿ ತುರ್ತಾಗಿ ಕೋವಿಡ್ ಆರೈಕೆ ಕೇಂದ್ರವನ್ನು ಆರಂಭಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಪೂರ್ವ ವಲಯದ ಅಧಿಕಾರಿಗಳಿಗೆ ಸೂಚಿಸಿದರು.

ಪೂರ್ವ ವಲಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಕೈಗೊಂಡಿರುವ ಸಿದ್ಧತೆಗಳನ್ನು ಅವರು ಭಾನುವಾರ ಪರಿಶೀಲಿಸಿದರು.

'60 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರವನ್ನು ಸೋಮವಾರ ಸಂಜೆ ಒಳಗೆ ಸಿದ್ಧಪಡಿಸಬೇಕು. ಇಲ್ಲಿ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಪೂರ್ವ ವಲಯ ಆಯುಕ್ತ ಮನೋಜ್ ಜೈನ್ ಹಾಗೂ ಜಂಟಿ ಆಯುಕ್ತೆ ಪಲ್ಲವಿ ಅವರಿಗೆ ಮುಖ್ಯ ಆಯುಕ್ತರು ನಿರ್ದೇಶನ ನೀಡಿದರು.

ಕೋವಿಡ್ ಚಿಕಿತ್ಸೆಗೆ ಹಾಸಿಗೆ ಲಭ್ಯತೆ ವಿವರ (ಭಾನುವಾರ ರಾತ್ರಿ 9.45ಕ್ಕೆ)

ಆಸ್ಪತ್ರೆ ವಿಧ	ಸಾಮಾನ್ಯ ಹಾಸಿಗೆ	ಎಚ್‌ಡಿಯು	ಐಸಿಯು	ಐಸಿಯು–ವಿ	ಒಟ್ಟು
ಸರ್ಕಾರಿ ವೈದ್ಯಕೀಯ ಕಾಲೇಜು	0	34	2	2	38
ಸರ್ಕಾರಿ ಆಸ್ಪತ್ರೆಗಳು	59	2	0	1	62
ಖಾಸಗಿ ವೈದ್ಯಕೀಯ ಕಾಲೇಜುಗಳು	915	211	0	1	1,127
ಖಾಸಗಿ ಆಸ್ಪತ್ರೆಗಳು	353	147	9	2	511
ಒಟ್ಟು	1,327	394	11	6	1,738

ಕೋವಿಡ್ ಚಿಕಿತ್ಸೆಗೆ ಹಾಸಿಗೆ ಹಂಚಿಕೆ ವಿವರ

ಆಸ್ಪತ್ರೆ ವಿಧ	ಸಾಮಾನ್ಯ ಹಾಸಿಗೆ	ಎಚ್‌ಡಿಯು	ಐಸಿಯು	ಐಸಿಯು–ವಿ	ಒಟ್ಟು
ಸರ್ಕಾರಿ ವೈದ್ಯಕೀಯ ಕಾಲೇಜು	30	370	73	47	520
ಸರ್ಕಾರಿ ಆಸ್ಪತ್ರೆ	603	88	60	70	821
ಖಾಸಗಿ ವೈದ್ಯಕೀಯ ಕಾಲೇಜುಗಳು	1604	1444	87	84	3,219
ಖಾಸಗಿ ಆಸ್ಪತ್ರೆಗಳು	777	772	116	85	1,750
ಒಟ್ಟು	3014	2674	336	286	6,310

ಸುದ್ದಿ 2 ನಿಮಿಷ

ರೋಗಿಗಳ ಚಿಕಿತ್ಸೆಗೆ ಸಹಕಾರ ನೀಡಿ: ತೇಜಸ್ವಿ ಸೂಚನೆ

ಬೆಂಗಳೂರು: ತಮ್ಮ ಕ್ಷೇತ್ರದ ವ್ಯಾಪ್ತಿಯ 40 ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳ ಜತೆ ಭಾನುವಾರ ಸಭೆ ನಡೆಸಿದ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಕೋವಿಡ್ ರೋಗಿಗಳ ಚಿಕಿತ್ಸೆಗೆ ಸಂಪೂರ್ಣ ಸಹಕಾರ ನೀಡುವಂತೆ ಸೂಚಿಸಿದ್ದಾರೆ.

ವರ್ಚ್ಯುವಲ್ ಮೂಲಕ ನಡೆಸಿದ ಸಭೆಯ ವಿವರಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ತೇಜಸ್ವಿ, 'ಸರ್ಕಾರದ ಆದೇಶದಂತೆ ಎಲ್ಲ ಆಸ್ಪತ್ರೆಗಳೂ ಶೇಕಡ 50ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಕಾಯ್ದಿರಿಸುವುದನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. ಇಂತಹ ಕ್ಲಿಷ್ಟಕರ ಸನ್ನಿವೇಶದ ಲಾಭ ಪಡೆಯಲು ಯತ್ನಿಸುವ ಖಾಸಗಿ ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಆಕ್ಸಿಜನ್ ಸಿಲಿಂಡರ್‌ನೊಂದಿಗೆ ಆಟೊದಲ್ಲಿ ಅಲೆದ ಮಹಿಳೆ!

ಕಲಬುರ್ಗಿ: ಜಿಲ್ಲೆಯಲ್ಲಿ ಕೋವಿಡ್ ತೀವ್ರವಾಗಿ ವ್ಯಾಪಿಸುತ್ತಿದ್ದು, ಇತರೆ ಕಾಯಿಲೆಯಿಂದ ಬಳಲುತ್ತಿರುವವರೂ ಚಿಕಿತ್ಸೆಗಾಗಿ ಪರದಾಡುವಂತಾಗಿದೆ. ಹಾಸಿಗೆ ಸಿಗದ ಕಾರಣ ಭಾನುವಾರ ಮಹಿಳೆಯೊಬ್ಬರು ಆಟೊದಲ್ಲಿ ಆಕ್ಸಿಜನ್ ಸಿಲಿಂಡರ್‌ನೊಂದಿಗೆ ಆಸ್ಪತ್ರೆಗಳಿಗೆ ಅಲೆದಾಡಿದ್ದಾರೆ.

ಇಲ್ಲಿನ ಬಸವ ನಗರದ 55 ವರ್ಷದ ಮಹಿಳೆ ಕೆಮ್ಮು ಮತ್ತು ಉಸಿರಾಟದ ಸಮಸ್ಯೆಯಿಂದ ಅಸ್ವಸ್ಥಗೊಂಡ ಕಾರಣ ಅವರನ್ನು ಕುಟುಂಬದವರು ಖಾಸಗಿ ಆಸ್ಪತ್ರೆಯೊಂದಕ್ಕೆ ಕರೆದೊಯ್ದರು. 'ಐಸಿಯು ಹಾಸಿಗೆ ಖಾಲಿ ಇಲ್ಲ' ಎಂದು ಹೇಳಿ ಆಸ್ಪತ್ರೆಯವರು ಆಕ್ಸಿಜನ್ ಸಿಲಿಂಡರ್ ಅಳವಡಿಸಿ ಕೃತಕ ಉಸಿರಾಟದ ವ್ಯವಸ್ಥೆ ಮಾಡಿದರು.

'ಐಸಿಯು ಹಾಸಿಗೆಗಾಗಿ ಆಕ್ಸಿಜನ್ ಸಿಲಿಂಡರ್‌ನೊಂದಿಗೆ ಆಟೊದಲ್ಲಿ ನಾಲ್ಕು ಖಾಸಗಿ ಆಸ್ಪತ್ರೆಗಳು ಮತ್ತು ಇಎಸ್‌ಐ ಆಸ್ಪತ್ರೆಗೆ ಅಲೆದು ಜಿಮ್ಸ್ ಆಸ್ಪತ್ರೆಗೆ ಹೋದೆವು. ಆದರೆ, ಎಲ್ಲಿಯೂ ಹಾಸಿಗೆ ಸೌಲಭ್ಯವಾಗಲಿಲ್ಲ. ಮೂರು ಗಂಟೆಯವರೆಗೆ ಆಸ್ಪತ್ರೆ ಹೊರಗಡೆಯೇ ಉಳಿಯಬೇಕಾಯಿತು' ಎಂದು ಕುಟುಂಬದವರು ತಿಳಿಸಿದ್ದಾರೆ. ಮಧ್ಯಾಹ್ನದ ವೇಳೆಗೆ ಜಿಮ್ಸ್ ಆಸ್ಪತ್ರೆಯವರೇ ಐಸಿಯು ಘಟಕದಲ್ಲಿ ಮತ್ತೊಂದು ಹಾಸಿಗೆ ವ್ಯವಸ್ಥೆ ಮಾಡಿ, ಒಂದೇ ಯಂತ್ರಕ್ಕೆ ಎರಡು 'ಫ್ಲೋ ಮೀಟರ್' ಅಳವಡಿಸಿ ಚಿಕಿತ್ಸೆ ನೀಡಿದರು.

ಈ ಕುರಿತು ಪ್ರತಿಕ್ರಿಯೆ ನೀಡಿದ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಂಬಾರಾಯ ರುದ್ರವಾಡಿ, 'ಆಕ್ಸಿಜನ್ ಸಿಲಿಂಡರ್‌ನೊಂದಿಗೆ ಮಹಿಳೆ ಆಸ್ಪತ್ರೆಗೆ ಬಂದಿರುವ ಮಾಹಿತಿ ತಿಳಿಯುತ್ತಿದ್ದಂತೆ ಹಾಸಿಗೆ ಇಲ್ಲದಿದ್ದರೂ ಐಸಿಯುನಲ್ಲಿ ಮತ್ತೊಂದು ಹಾಸಿಗೆ ವ್ಯವಸ್ಥೆ ಮಾಡಿದೆವು. ಕೊರೊನಾ ತಪಾಸಣೆಯನ್ನೂ ಮಾಡಿಸಲಾಗಿದ್ದು, ವರದಿಗಾಗಿ ಕಾಯುತ್ತಿದ್ದೇವೆ' ಎಂದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Agricultural Land

General

REQUIRED **AGRICULTURAL LAND** Measuring 5 to 10 Acres Located between Kadur - Bangalore Doddaballapur - Bangalore Gauribidnur-Chikkaballapur Close to Railway Station Call from 11am - 6pm Ph: 9880033770

RENTAL PROPERTIES

Accommodation Wanted

Godown

REPUTED COMPANY want 8000 -10000 SFT warehouse/ godown (Ground Floor) on Rent Yeswanthpur / Peenya First Stage. Contact Sharif 9886335522

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Sites

Jakkur

SITE FOR SALE- TELECOM LAYOUT: 40x60 site West Facing 7,600/- p.sft. Genuine Buyers- 8197971761/ 9916006002

JOB OPPORTUNITIES

Engg/ Production Technical

WANTED EX BESCOM KPTCL ENGINEER TO WORK FOR BUSINESS DEVELOPMENT CONTACT MUNDHRA, 9341823353, 9341833353, 26713802

WANTED: WORLD Largest & Most Successful EMS-MNC Company. Whitefield Road, Bangalore. *******FRESHER'S****** ITI or DIPLOMA Electrician, Fitter, Electronics, Electro Mach, 10th,PUC, Degree Attractive Salary, Food, Incentive ESI,PF, Available. Contact: 9901351208 8497801868 9986246788. resume@shabari.co.in

General

EXCELLENT WORK Offer for Sr.Citizens/ VRS/ Educated Housewives. Fixed Salary, Incentives>1 Lac p.m. Details Call:- 7411088997 /9741416855.

Multiple Vacancy

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS - 7676760299/ 7676760399

BUSINESS

Business Offers

Finance

NRI'S INVESTMENT And Finance Available OnLow Interest Against Properties,Land& Buildings,Sites, Flats (Also)Assist For Yojana Loans Call:7411265189

Business to Business

Shares

WAT_R_U DOING AFTER WORK? Share Market, Deposit 2Lac earn 10% monthly Demat account Call: 8088665724

PERSONAL

Lost

DOCUMENT LOST
My Client **Harish Kumar J** is owning a property at Devarachikanahalli and his earlier sale deed between Gopal through GPA holder P N Venugopal to P V Sudhir (Sale Deed Doc No. 8040/2004-05) is being lost. If found please hand over to **Sh. Subraya Kharvi,** Advocate No. 231, 1st Floor, 37th Cross, 11th Main, 4th 'T' Block, Jayanagar, Bangalore - 560 041

PUBLIC NOTICE

PUBLIC NOTICE
The Public are hereby informed that, my client Sri. B S Nagaraj son of Late B Shamarao, residing at No:33, 7th Cross Road, 1st Block, Jayanagar, Bangalore – 560 011, has lost the Original Sale Deed dated 17.09.1956 relating to Sy. No. 166/1 situated at Sanneammanikere village, Devanahalli Taluk, Bengaluru Rural District bearing Document No: 1329/1956-57 registered in the office of the Sub-registrar, Devanahalli, Bangalore, executed by Sri. Lakshmaiah and others in favour of Sri. Basappa , and has lodged a Complaint to the jurisdictional Police Station. If anybody found this Document please handover to me to the following address:
B. SUBRAYA KHARVI, Advocate, No. 231, 11th Main, 37th Cross, 4th 'T' Block, Jayanagar, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿದ ಕೋವಿಡ್ ಪೀಡಿತರು

ಮುಂದುವರಿದ ಆಮ್ಲಜನಕದ ಅಭಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕದ (ಆಕ್ಸಿಜನ್) ಕೊರತೆ ಮುಂದುವರಿದಿದ್ದು, ಕೋವಿಡ್ ಪೀಡಿತರು ಆಮ್ಲಜನಕ ಸಹಿತ ಹಾಸಿಗೆಗಾಗಿ ಭಾನುವಾರ ಕೂಡ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಬಹುತೇಕ ಹಾಸಿಗೆಗಳು ಭರ್ತಿಯಾಗಿರುವ ಕಾರಣ ನೇರವಾಗಿ ಖಾಸಗಿ ಆಸ್ಪತ್ರೆಗೆ ತೆರಳುವವರ ಸಂಖ್ಯೆ ಕೂಡ ಏರಿಕೆಯಾಗಿದೆ.

ಅದೇ ರೀತಿ, ಸರ್ಕಾರಿ ಆಸ್ಪತ್ರೆಗಳು ಆಮ್ಲಜನಕ ಸಂಪರ್ಕ ಸಹಿತ ಹಾಸಿಗೆಯಿಲ್ಲ ಎಂಬ ಕಾರಣ ನೀಡಿ, ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾರಂಭಿಸಿವೆ. ಸದ್ಯ ನಗರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1 ಲಕ್ಷದ ಗಡಿ (97,897) ಸಮೀಪಿಸಿದೆ. ಅದೇ ರೀತಿ, ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಸದ್ಯ 134 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸರ್ಕಾರಿ ಆಸ್ಪತ್ರೆಗಳು ಶಿಫಾರಸು ಮಾಡುವ ಸೋಂಕಿತರಿಗಾಗಿ ಖಾಸಗಿ ಆಸ್ಪತ್ರೆಗಳು ಮೀಸಲಿಟ್ಟಿದ್ದ 1,749 ಹಾಸಿಗೆಗಳಲ್ಲಿ 1,239 ಹಾಸಿಗೆಗಳು ಭರ್ತಿಯಾಗಿವೆ. ಸದ್ಯ 510 ಹಾಸಿಗೆಗಳು ಮಾತ್ರ ಖಾಲಿಯಿವೆ.

ಅದೇ ರೀತಿ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ 2,084 ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅಲ್ಲಿ 1,135 ಹಾಸಿಗೆಗಳು ಖಾಲಿಯಿವೆ. ಈಗ ಆಕ್ಸಿಜನ್ ಕೊರತೆ ಉದ್ಭವವಾದ ಕಾರಣ ಕೆಲ ಖಾಸಗಿ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳು ಸೋಂಕಿತರನ್ನು ದಾಖಲಿಸಿಕೊಳ್ಳಲು ಹಿಂದೇಟು ಹಾಕಲಾರಂಭಿಸಿವೆ. ಇನ್ನೂ ಕೆಲವರು ಆಸ್ಪತ್ರೆಗಳು ಅಗತ್ಯತೆಗೆ ಅನುಸಾರ ಆಮ್ಲಜನಕ ಪೂರೈಕೆಯಾಗದ ಕಾರಣ ರೋಗಿಗಳನ್ನು ಸ್ಥಳಾಂತರಿಸಲು ಮುಂದಾಗುತ್ತಿವೆ.

ಪೂರೈಕೆಯಾಗದಿದ್ದಲ್ಲಿ ಸಮಸ್ಯೆ: 'ಆಮ್ಲಜನಕ ಪೂರೈಕೆ ಒಂದು ದಿನದ ಕಾರ್ಯಕ್ರಮ ವಲ್ಲ. ಪ್ರತಿನಿತ್ಯ ಅಗತ್ಯ ಪ್ರಮಾಣದಲ್ಲಿ ದೊರೆಯದಿದ್ದಲ್ಲಿ ರೋಗಿಗಳಿಗೆ ಸಮಸ್ಯೆಯಾಗಲಿದೆ. ಭಾನುವಾರ ಪೂರೈಕೆ ಆಗಿರುವ ಆಮ್ಲಜನಕವು ಸೋಮವಾರ ಮಧ್ಯಾಹ್ನದವರೆಗೆ ಸಾಕಾಗಲಿದೆ. ಮತ್ತೆ ಪೂರೈಕೆಯಲ್ಲಿ ವ್ಯತ್ಯಾಸವಾದಲ್ಲಿ ಚಿಕಿತ್ಸೆ ಒದಗಿಸುವುದು ಕಷ್ಟವಾಗಲಿದೆ. ದೊಡ್ಡ ಗಾತ್ರದ 8–10 ಆಸ್ಪತ್ರೆಗಳು ಮಾತ್ರ ಆಕ್ಸಿಜನ್ ಘಟಕ ಹೊಂದಿವೆ. ಉಳಿದವು ದೈನಂದಿನ ಪೂರೈಕೆಯನ್ನೇ ಅವಲಂಬಿಸಿವೆ. ಎಲ್ಲ ಖಾಸಗಿ ಆಸ್ಪತ್ರೆಗಳೂ ಪೂರೈಕೆದಾರರಿಗೆ ಹಣ ಪಾವತಿಸಿದ್ದಾರೆ. ಈ ಸಂದರ್ಭದಲ್ಲಿ ಯಾವುದೇ ಆಸ್ಪತ್ರೆ ಪೂರೈಕೆದಾರರಿಗೆ ಬಾಕಿ ಇರಿಸಿಕೊಳ್ಳುವುದಿಲ್ಲ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

'ಕೋವಿಡ್ ಪೀಡಿತರ ಸಂಖ್ಯೇ ವೇಗವಾಗಿ ಹೆಚ್ಚಳವಾಗುತ್ತಿದೆ. ಇದರಿಂದಾಗಿ ಐಸಿಯು ದಾಖಲಾತಿ ಕೂಡ ಹೆಚ್ಚಳವಾಗಿದೆ. ಈಗಾಗಲೇ ಆಕ್ಸಿಜನ್ ಸಮಸ್ಯೆಯಿಂದ ಹಾಗೂ ಐಸಿಯು ಹಾಸಿಗೆ ಸಿಗದೆ ಕೋವಿಡ್ ಪೀಡಿತರ ಸಮಸ್ಯೆ ಎದುರಿಸುತ್ತಿದ್ದಾರೆ. ಸರ್ಕಾರವು ಅಗತ್ಯ ಪ್ರಮಾಣದಲ್ಲಿ ಆಕ್ಸಿಜನ್ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು' ಎಂದು ಹೆಬ್ಬಾಳದ ರೈನ್ ಬೋ ಮಕ್ಕಳ ಆಸ್ಪತ್ರೆಯ ಡಾ. ಶ್ರೀಧರ್ ಎಂ.ಎಸ್. ಆಗ್ರಹಿಸಿದ್ದಾರೆ.

'ಸರ್ಕಾರಿ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆಯಿಲ್ಲ. ಖಾಸಗಿ ಆಸ್ಪತ್ರೆಗಳು ಅಗತ್ಯಕ್ಕೆ ಅನುಗುಣವಾಗಿ ಆಕ್ಸಿಜನ್ ಸಿಲಿಂಡರ್‌ಗಳನ್ನು ಇರಿಸಿಕೊಂಡಿಲ್ಲ. ಸರ್ಕಾರದಿಂದ ಆಕ್ಸಿಜನ್ ಪೂರೈಕೆ ಮಾಡುವ ಪ್ರಸ್ತಾಪವಿಲ್ಲ' ಎಂದು ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

'ಆರೋಗ್ಯ ಕ್ಷೇತ್ರದಲ್ಲಿ ತುರ್ತು ಪರಿಸ್ಥಿತಿ'

'ಬೇಡಿಕೆಗೆ ಅನುಸಾರ ಆಮ್ಲಜನಕ ಪೂರೈಕೆ ಆಗುತ್ತಿಲ್ಲ. ಇದರಿಂದಾಗಿ ಚಿಕಿತ್ಸೆ ಒದಗಿಸುವುದು ಹೇಗೆ ಎಂಬ ಆತಂಕ ಶುರುವಾಗಿದೆ. ಸಮಯಕ್ಕೆ ಸರಿಯಾಗಿ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆಯಾಗದಿದ್ದಲ್ಲಿ ರೋಗಿಗಳಿಗೆ ಸಮಸ್ಯೆಯಾಗಲಿದೆ. ಈ ಸಂದರ್ಭದಲ್ಲಿ ಆಸ್ಪತ್ರೆಗಳು ಪೂರೈಕೆದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಬಾಕಿ ಇರಿಸಿಕೊಳ್ಳುವುದಿಲ್ಲ. ನಾವು ಸಮಯಕ್ಕೆ ಸರಿಯಾಗಿ ಪೂರೈಕೆದಾರರಿಗೆ ಹಣ ಪಾವತಿಸಿದ್ದೇವೆ. ಆದರೆ, ನಮಗೆ ಕೊರತೆ ಎದುರಾಗಿದೆ. ಆಮ್ಲಜನಕ ಬಳಕೆಯು ಮೂರುಪಟ್ಟು ಜಾಸ್ತಿಯಾಗಿದೆ. ನಮಗೆ ದಿನಕ್ಕೆ 4 ಸಿಲಿಂಡರ್ ಬೇಕಾಗಿತ್ತು. ಆದರೆ, ಈಗ 11 ಸಿಲಿಂಡರ್ ಬೇಕಾಗುತ್ತಿದೆ' ಎಂದು ಸುಗುಣ ಆಸ್ಪತ್ರೆಯ ಮುಖ್ಯಸ್ಥ ಡಾ.ಆರ್. ರವೀಂದ್ರ ತಿಳಿಸಿದರು.

'ಸಣ್ಣ ಆಸ್ಪತ್ರೆಗಳಿಗೆ ಆಮ್ಲಜನಕದ ಸಮಸ್ಯೆ ಎದುರಾಗಿದೆ. ಇದರಿಂದಾಗಿ ಚಿಕಿತ್ಸೆ ಒದಗಿಸಲು ಅವರಿಗೆ ಸಮಸ್ಯೆಯಾಗುತ್ತಿದೆ. ನಮ್ಮ ಆಸ್ಪತ್ರೆಯಲ್ಲಿ ಆಮ್ಲಜನಕ ಘಟಕ ಹೊಂದಿದ್ದ ಕಾರಣ ಸದ್ಯಕ್ಕೆ ಕೊರತೆ ಕಾಣಿಸಿಲ್ಲ' ಎಂದು ಜಯನಗರದ ಅಪೋಲೊ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಗೋವಿಂದಯ್ಯ ಯತೀಶ್ ಹೇಳಿದರು.

ಆಕ್ಸಿಜನ್ ಕೊರತೆ: ಖಾಸಗಿ ಆಸ್ಪತ್ರೆಗಳ ಅಳಲು

ಬೊಮ್ಮನಹಳ್ಳಿ: 'ಆಸ್ಪತ್ರೆಗಳಿಗೆ ಆಕ್ಸಿಜನ್ ಪೂರೈಕೆ ಆಗುತ್ತಿಲ್ಲ, ಪೂರೈಸಲೂ ಸಾಧ್ಯವಿಲ್ಲ ಎಂದು ಪೂರೈಕೆದಾರರು ಹೇಳುತ್ತಿದ್ದಾರೆ. ಹೀಗಿರುವಾಗ ಕೊರೊನಾ ಪೀಡಿತರಿಗೆ ಚಿಕಿತ್ಸೆ ಕೊಡುವುದಾದರೂ ಹೇಗೆ?' ಎಂದು ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು ಅಳಲು ತೋಡಿಕೊಂಡರು.

ಕೊರೊನಾ ನಿಯಂತ್ರಣ ಮತ್ತು ನಿರ್ವಹಣೆ ಕುರಿತು ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರೊಂದಿಗೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಕಚೇರಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಕೆಲವರು ಅಸಮಾಧಾನ ಹೊರಹಾಕಿದರು.

'ಕೊರೊನಾ ಪೀಡಿತರಿಗೆ ಗುಣಮಟ್ಟದ ಚಿಕಿತ್ಸೆ ಕೊಡಲು ನಾವು ಸಿದ್ಧರಿದ್ದೇವೆ. ಈಗಾಗಲೇ ಶೇಕಡ 50ರಷ್ಟು ಹಾಸಿಗೆ ಮೀಸಲಿಟ್ಟಿದ್ದೇವೆ. ಈ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತೇವೆ. ಆದರೆ, ಆಕ್ಸಿಜನ್ ಇಲ್ಲದೇ ಹಾಸಿಗೆ ಕಾಯ್ದಿರಿಸಿ ಪ್ರಯೋಜನವೇನು?' ಎಂದು ಹಲವರು ಪ್ರಶ್ನಿಸಿದರು.

ಆತ್ರೇಯ ಆಸ್ಪತ್ರೆಯ ಡಾ.ನಾರಾಯಣಸ್ವಾಮಿ, 'ಈ ಹಿಂದೆ ಚಿಕಿತ್ಸೆ ನೀಡಿದ ಬಿಲ್ ಇನ್ನೂ ಪಾವತಿಯಾಗಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಎಲ್ಲರೂ ಅವರ ಮೇಲಿನವರನ್ನು ತೋರಿಸುತ್ತಾರೆ, 'ಸರ್ಕಾರವನ್ನು ಕೇಳಿ' ಎಂದು ಉತ್ತರಿಸುತ್ತಾರೆ. ಹಾಗಿದ್ದಲ್ಲಿ ಸರ್ಕಾರ ಎಂದರೆ ಯಾರು? ಎಲ್ಲಿದೆ ಸರ್ಕಾರ?' ಎಂದು ಸಚಿವರಿಗೆ ಪ್ರಶ್ನೆಗಳ ಸುರಿಮಳೆಗೈಯ್ದರು.

'ಖಾಸಗಿ ಆಸ್ಪತ್ರೆಯವರು ಸೇವೆಗೆ ಸಿದ್ಧರಿದ್ದೇವೆ. ಆದರೆ, ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಅಧಿಕೃತ ಅಧಿಕಾರಿ ಅಂತ ಯಾರೂ ಇಲ್ಲ. ಆಕ್ಸಿಜನ್ ಪೂರೈಕೆ, ಬಿಲ್ ಪಾವತಿ, ಇತರೆ ಮಾಹಿತಿಗಳನ್ನು ನೀಡುವವರು ಯಾರು ಎಂದು ನಮಗೆ ಗೊತ್ತಿಲ್ಲ. ಹೀಗಾದಲ್ಲಿ ರೋಗಿಗಳಿಗೆ ಚಿಕಿತ್ಸೆ ಕೊಡುವುದಾದರೂ ಹೇಗೆ?' ಎಂದು ಖಾಸಗಿ ಆಸ್ಪತ್ರೆಯೊಂದರ ವೈದ್ಯೆ ಡಾ.ದೀಪಶ್ರೀ ಪ್ರಶ್ನಿಸಿದರು.

ರೆಮ್‌ಡಿಸಿವಿರ್ ಚುಚ್ಚುಮದ್ದು ಕಾಳಸಂತೆಯಲ್ಲಿ ಮಾರಾಟ!

ರೆಮ್‌ಡಿಸಿವಿರ್ ಚುಚ್ಚುಮದ್ದು ಕೊರತೆ ಇದೆ. ಆದರೆ, ಇದು ₹12,500ಕ್ಕೆ ಕಾಳಸಂತೆಯಲ್ಲಿ ಸಿಗುತ್ತಿದೆ ಎಂದು ವೈದ್ಯರೊಬ್ಬರು ಆರೋಪಿಸಿದರು. ಸರ್ಕಾರ ಇದಕ್ಕೆ ಕಡಿವಾಣ ಹಾಕಿ ಅಗತ್ಯ ಇರುವಷ್ಟು ಚುಚ್ಚುಮದ್ದು ಪೂರೈಸಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಎಸ್. ಸುರೇಶ್ ಕುಮಾರ್, 'ಬಿಲ್ ಪಾವತಿಯಲ್ಲಿ ಆಗಿರುವ ಲೋಪ ಸರಿಪಡಿಸಲಾಗುವುದು' ಎಂದರು. 'ಆಕ್ಸಿಜನ್ ಕೊರತೆಯನ್ನು ನೀಗಿಸಲು ಶೀಘ್ರವೇ ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜತೆ ಮಾತನಾಡಿ ಕೊರತೆ ಆಗದಂತೆ ನೋಡಿಕೊಳ್ಳಲಾಗುವುದು' ಎಂದು ಹೇಳಿದರು.

ಚುಚ್ಚುಮದ್ದು ಕಾಳಸಂತೆ ದುಬಾರಿ ಬೆಲೆಗೆ ಮಾರಾಟವಾಗುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದಾಗಿ ಹಾಗೂ ಪರ್ಯಾಯ ಚುಚ್ಚುಮದ್ದುಗಳು ಮಾರುಕಟ್ಟೆಗೆ ಬಂದಿವೆ. ಅವುಗಳನ್ನು ಬಳಸಿಕೊಳ್ಳಲಾಗುವುದು ಎಂದರು.

ಇದಕ್ಕೂ ಮೊದಲು ಕಲ್ಯಾಣ ಮಂಟಪ ಹಾಗೂ ಸಮುದಾಯ ಭವನಗಳ ಮಾಲೀಕರೊಂದಿಗೆ ನಡೆಸಿದ ಸಭೆಯಲ್ಲಿ, 'ಮದುವೆ ಸಮಾರಂಭದಲ್ಲಿ 100ಕ್ಕಿಂತ ಹೆಚ್ಚು ಜನ ಸೇರದಂತೆ ನೋಡಿಕೊಳ್ಳಬೇಕು' ಎಂದು ಸಚಿವ ಸುರೇಶ್ ಕುಮಾರ್ ಮನವಿ ಮಾಡಿದರು. ಸಭೆಯಲ್ಲಿ ಹಿರಿಯ ಐಎಎಸ್ ಅಧಿಕಾರಿ ರಾಜೇಂದ್ರ ಕುಮಾರ್ ಕಟಾರಿಯಾ, ಆಗ್ನೇಯ ವಲಯದ ಡಿಸಿಪಿ ಶ್ರೀನಾಥ್ ಜೋಶಿ, ಐಎಎಸ್ ಅಧಿಕಾರಿ ಯಶವಂತ್, ಜಂಟಿ ಆಯುಕ್ತ ಎಂ.ರಾಮಕೃಷ್ಣ, ಎಸಿಪಿ ಕರಿಬಸವನಗೌಡ ಇದ್ದರು.

ಚಿಕಿತ್ಸೆ ನೀಡದ ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ: ಪ್ರವೀಣ್ ಸೂದ್

ಬೆಂಗಳೂರು: ಪೊಲೀಸರಲ್ಲಿ ಕೊರೊನಾ ಸೋಂಕು ಹರಡುವಿಕೆ ತಡೆಯುವುದಕ್ಕಾಗಿ ಕೆಲ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ- ಐಜಿಪಿ) ಪ್ರವೀಣ್ ಸೂದ್ ಸೂಚನೆ ನೀಡಿದ್ದಾರೆ.

ಈ ಬಗ್ಗೆ ರಾಜ್ಯದ ಎಲ್ಲ ಕಮಿಷನರ್ ಹಾಗೂ ಜಿಲ್ಲಾ ಎಸ್ಪಿಗಳಿಗೆ ತುರ್ತು ಸಂದೇಶ ಕಳುಹಿಸಿದ್ದಾರೆ.

'ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅವರ ಕುಟುಂಬದವರು ಜಾಗೃತಿ ವಹಿಸಬೇಕು. 45 ವರ್ಷ ಮೇಲ್ಪಟ್ಟ ಕುಟುಂಬದ ಸದಸ್ಯರಿಗೆ ಮೊದಲನೇ ಹಾಗೂ ಎರಡನೇ ಲಸಿಕೆಯನ್ನು ತಪ್ಪದೇ ಹಾಕಿಸಬೇಕು. ಪೊಲೀಸರಿಗೆ ಹಾಗೂ ಅವರ ಕುಟುಂಬದವರಿಗೆ ಆರೋಗ್ಯ ಭಾಗ್ಯ ಯೋಜನೆಯಡಿ ಚಿಕಿತ್ಸೆ ನೀಡಲು ನಿರಾಕರಿಸುವ ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದೂ ಅವರು ಹೇಳಿದ್ದಾರೆ.

ಬಿಎಂಟಿಸಿ ಬಸ್ಸಿಗೆ ಕಲ್ಲು: ಚಾಲಕನ ತಲೆಗೆ ಪೆಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ ಮೇಲೆ ಕಲ್ಲು ತೂರಾಟ ನಡೆಸಿದ್ದು, ಚಾಲಕ ನಂಜುಂಡೇಗೌಡ (43) ತಲೆಗೆ ತೀವ್ರ ಪೆಟ್ಟು ಬಿದ್ದಿದೆ.

'ಕಾಮಾಕ್ಷಿಪಾಳ್ಯದ ವಿಘ್ನೇಶ್ವರ್ ನಗರದ ಬಸ್ ತಂಗುದಾಣ ಬಳಿ ಭಾನುವಾರ ಸಂಜೆ 4 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಗಾಯಗೊಂಡಿರುವ ನಂಜುಂಡೇಗೌಡ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಸಿಟಿ ಮಾರುಕಟ್ಟೆಯಿಂದ ಜಾಲಹಳ್ಳಿ ಕಡೆಗೆ (ನಂ. 248/6) ಬಿಎಂಟಿಸಿ ಬಸ್ ಹೊರಟಿತ್ತು. ಇದೇ ಸಂದರ್ಭದಲ್ಲೇ ಮೂವರು ದುಷ್ಕರ್ಮಿಗಳು, ಬಸ್ಸಿನ ಮುಂಭಾಗದ ಗಾಜಿಗೆ ಕಲ್ಲು ಹೊಡೆದಿದ್ದಾರೆ. ಒಂದು ಕಲ್ಲು ಚಾಲಕನ ತಲೆಗೆ ಬಿದ್ದಿದೆ' ಎಂದೂ ತಿಳಿಸಿದರು.

'ಕಲ್ಲು ತೂರಾಟದ ನಂತರ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳ ಪತ್ತೆಗಾಗಿ ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದರು.

ನೀರಿನ ಅಭಾವದಿಂದ ಪಕ್ಷಿಗಳ ಸಾವು • ಪ್ರಾಣಿ–ಪಕ್ಷಿಗಳಿಗೆ ಮಾರಕವಾಗುತ್ತಿದೆ ಹೆಚ್ಚುತ್ತಿರುವ ಬಿಸಿಲು

ಬೇಸಿಗೆಯ ಬೇಗೆ– ನೀಗಬೇಕಿದೆ ನಗರದ ವನ್ಯಜೀವಿಗಳ ದಾಹ

• ಮನೋಹರ್ ಎಂ.

ಬೆಂಗಳೂರು: ಬೇಸಿಗೆ ಬಂತೆಂದರೆ ಎಲ್ಲೆಲ್ಲೂ ನೀರಿಗಾಗಿ ಹಾಹಾಕಾರ. ಬಾಯಾರಿದೊಡನೆ ಜನರು ನೀರಿಗಾಗಿ ಹಾತೊರೆಯುತ್ತಾರೆ. ಎಲ್ಲೂ ನೀರು ಸಿಗದಿದ್ದರೆ ದುಡ್ಡುಕೊಟ್ಟು ಖರೀದಿಸಿಯಾದರೂ ದಾಹ ದೂರ ಮಾಡಿಕೊಳ್ಳುತ್ತಾರೆ. ಆದರೆ, ಮೂಕ ವನ್ಯಜೀವಿಗಳೇನು ಮಾಡಬೇಕು. ಜನರಿಗೆ ಸಿಗುವಷ್ಟು ಸುಲಭವಾಗಿ ವನ್ಯಜೀವಿಗಳಿಗೆ ಈ ಕಾಂಕ್ರೀಟ್ ಕಾಡಿನಲ್ಲಿ ನೀರು ಲಭಿಸುವುದಿಲ್ಲ. ನೀರಿನ ಅಭಾವದಿಂದ ಅವು ಪ್ರಾಣವನ್ನೇ ಕಳೆದುಕೊಳ್ಳಬೇಕಾಗುತ್ತದೆ.

ಉದ್ಯಾನನಗರಿ ವೈವಿಧ್ಯಮಯ ವನ್ಯಜೀವಿಗಳ ಆವಾಸ ಸ್ಥಾನವೂ ಹೌದು. ಈ ನಗರದಲ್ಲಿರುವ ಪರಿಸರ ವ್ಯವಸ್ಥೆ ಈಗಲೂ ಹಲವಾರು ಜೀವಿಗಳಿಗೆ ನೆಲೆ ಕಲ್ಪಿಸಿದೆ. ಚಳಿಗಾಲ ಹಾಗೂ ಮಳೆಗಾಲಕ್ಕೆ ಹೋಲಿಸಿದರೆ, ನಗರದಲ್ಲಿ ಬೇಸಿಗೆಯಲ್ಲೇ ವನ್ಯಜೀವಿಗಳು ಹೆಚ್ಚು ಅಪಾಯಕ್ಕೆ ಸಿಲುಕುತ್ತವೆ. ಈ ರೀತಿ ಸಂಕಷ್ಟ ಎದುರಿಸುವ ಜೀವಿಗಳಲ್ಲಿ ಪಕ್ಷಿಗಳೇ ಹೆಚ್ಚು.

ಬೇಸಿಗೆಯಲ್ಲಿ ಪಕ್ಷಿಗಳು ಬಹುಬೇಗನೆ ದಾಹದಿಂದ ಪರಿತಪಿಸುತ್ತವೆ. ಅವುಗಳ ಬಾಯಾರಿಕೆ ನೀಗುವಂತಹ ಶುದ್ಧ ನೀರು ಈ ನಗರದಲ್ಲಿ ಮರೀಚಿಕೆಯಾಗಿದೆ. ಇರುವ ಜಲಮೂಲಗಳೆಲ್ಲ ನಗರೀಕರಣದ ದವಡೆಗೆ ಸಿಲುಕಿ ಕಲುಷಿತಗೊಂಡು, ವಿಷಕಾರಿಯಾಗಿ ಪರಿಣಮಿಸಿವೆ. ಇಂತಹ ನೀರನ್ನು ಕುಡಿಯುವ ಪಕ್ಷಿಗಳು ವಿವಿಧ ಸಮಸ್ಯೆಯಿಂದ ಪ್ರಾಣ ಬಿಡುತ್ತಿವೆ ಎಂದು ಕಳವಳ ವ್ಯಕ್ತಪಡಿಸುತ್ತಾರೆ ನಗರದಲ್ಲಿರುವ ವನ್ಯಜೀವಿ ಸಂರಕ್ಷಕರು.

ಬೇಸಿಗೆಯ ತಾಪ ಹಾಗೂ ನೀರಿನ ಕೊರತೆಯಿಂದ ಪಕ್ಷಿಗಳ ಮಾರಣ ಹೋಮವೇ ನಡೆಯುತ್ತದೆ. ಆದರೆ, ಅದು ಬಹುತೇಕ ಜನರ ಕಣ್ಣಿಗೆ ಬೀಳುವುದಿಲ್ಲ. ಜನರೆಲ್ಲ ಕೈಜೋಡಿಸಿ ಮಾಡಲು ಸಾಧ್ಯವಿರುವ ಕೆಲ ಸಣ್ಣ ಪ್ರಯತ್ನಗಳಿಂದ ಪ್ರಾಣಿ ಹಾಗೂ ಪಕ್ಷಿ ಸಂಕುಲವನ್ನು ಸಂರಕ್ಷಿಸಬಹುದು ಎಂಬುದು ವನ್ಯಜೀವಿ ಸಂರಕ್ಷಕರ ವಾದ.

‘ಬೇಸಿಗೆ ಅವಧಿಯಲ್ಲಿ ಹಾನಿಗೆ ಒಳಗಾಗುವ ವನ್ಯಜೀವಿಗಳ ಕುರಿತು ಬಿಬಿಎಂಪಿ ವನ್ಯಜೀವಿ ಸಹಾಯವಾಣಿಗೆ ಪ್ರತಿನಿತ್ಯ ಹಲವು ಕರೆಗಳು ಬರುತ್ತವೆ. ಈ ಪೈಕಿ 30ಕ್ಕೂ ಹೆಚ್ಚಿನ ಕರೆಗಳು ಪಕ್ಷಿಗಳಿಗೆ ಸಂಬಂಧಿಸಿದ ದೂರುಗಳಾಗಿರುತ್ತವೆ. ಇವುಗಳ ಸಂಖ್ಯೆ ಬೇಸಿಗೆಯಲ್ಲಿ ಇನ್ನೂ ಹೆಚ್ಚು. ಇವು ಜನರಿಂದ ಬೆಳಕಿಗೆ ಬರುವ ಪ್ರಕರಣಗಳಷ್ಟೇ. ಇವುಗಳನ್ನು ಹೊರತುಪಡಿಸಿ ಅಸಂಖ್ಯಾತ ಪಕ್ಷಿಗಳು ಪ್ರತಿನಿತ್ಯ ಸಾಯುತ್ತವೆ’ ಎಂದು ಬಿಬಿಎಂಪಿ ವನ್ಯಜೀವಿ ಸಂರಕ್ಷಣಾ ತಂಡದ ಮುಖ್ಯಸ್ಥ ಎ.ಪ್ರಸನ್ನ ಕುಮಾರ್ ‘ಪ್ರಜಾವಾಣಿ’ಗೆ ವಿವರಿಸಿದರು.

‘ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಬೆಂಗಳೂರು ವಿಭಿನ್ನ ಪರಿಸರ ವ್ಯವಸ್ಥೆ ಹೊಂದಿರುವ ನಗರ. ಇಲ್ಲಿ ಕಾಡೂ ಇದೆ, ಹುಲ್ಲುಗಾವಲೂ ಇದೆ. ಒಟ್ಟಾರೆ ಈ ನಗರ ಕುರುಚಲು ಅರಣ್ಯ ಪ್ರದೇಶಕ್ಕೆ ಸೇರುತ್ತದೆ. ಆದರೆ, ಈಗಿನ ಅಭಿವೃದ್ಧಿ ಯೋಜನೆಗಳಿಂದ ಈ ಪ್ರಾಕೃತಿಕ ವ್ಯವಸ್ಥೆಯ ಸ್ವರೂಪ ರೂಪಾಂತರಗೊಳ್ಳುತ್ತಿದೆ. ಕಾಂಕ್ರೀಟೀಕರಣದಿಂದ ಜೀವಿಗಳ ಆವಾಸ ಸ್ಥಾನಗಳ ಮೇಲೆ ದಾಳಿ ನಡೆಯುತ್ತಿದೆ’ ಎಂದರು.

‘ಕೆಲವರು ವನ್ಯಜೀವಿಗಳ ಮೇಲೆ ಅತಿಯಾದ ವ್ಯಾಮೋಹದಿಂದ ಅವುಗಳಿಗೆ ಆಹಾರ ನೀಡುತ್ತಾರೆ. ನಗರ ನಿವಾಸಿಗಳು ನೀಡುವ ಆಹಾರವು ವನ್ಯಜೀವಿಗಳ ಮೂಲ ಆಹಾರ ಪದ್ಧತಿಗೆ ವಿರುದ್ಧವಾಗಿರುತ್ತದೆ. ಜೀವಿಗಳಿಗೆ ತಾತ್ಕಾಲಿಕವಾಗುವ ನಗರ ಆಹಾರ ಪದ್ಧತಿಯು ಮತ್ತೆ ನೈಜ ಆಹಾರ ಪದ್ಧತಿಗೆ ಹೊಂದಿಕೊಳ್ಳದಂತೆ ತಡೆಯುತ್ತದೆ. ಈ ಕಾರಣದಿಂದಲೇ ವನ್ಯ ಜೀವಿಗಳು ನಾಡಿನಲ್ಲೇ ಉಳಿಯುತ್ತವೆ. ಹಾಗಾಗಿ, ಅವುಗಳಿಗೆ ವಿರುದ್ಧವಾದ ಆಹಾರಗಳನ್ನು ಜನ ನೀಡಬಾರದು’ ಎಂದೂ ಸಲಹೆ ನೀಡಿದರು.

‘ಬೇಸಿಗೆಯಲ್ಲಿ ವನ್ಯಜೀವಿಗಳ ಸಂರಕ್ಷಣೆಗೆ ನೀರು ಅತ್ಯವಶ್ಯಕ. ಪ್ರತಿದಿನ ಎರಡು ಅಥವಾ ಮೂರು ಬಾರಿ ನೀರು ಕುಡಿಯುತ್ತವೆ.



ಹಡ್ಸನ್ ವೃತ್ತದ ರಸ್ತೆ ಬದಿ ಬಟ್ಟಲಿನಲ್ಲಿ ಇಟ್ಟಿದ್ದ ನೀರನ್ನು ಪಾರಿವಾಳಗಳು ಕುಡಿಯುತ್ತಿರುವುದು –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಹಾಗಾಗಿ, ನಗರ ವಾಸಿಗಳು ತಮ್ಮ ಮನೆಗಳ ಮೇಲೆ ಒಂದು ಬಟ್ಟಲು ಅಥವಾ ಇತರ ಪಾತ್ರೆಗಳಲ್ಲಿ ಪ್ರತಿ ದಿನ ನೀರು ಇಡುವುದರಿಂದ ಸಾವಿರಾರು ಪ್ರಾಣಿ ಪಕ್ಷಿಗಳ ಜೀವ ಉಳಿಯಲಿದೆ. ಪ್ರಾಣಿಗಳೂ ನಮ್ಮಂತೆ ಜೀವಿಸಲು ಅವಕಾಶ ಮಾಡಿಕೊಡಬೇಕು’ ಎಂದು ಮನವಿ ಮಾಡಿದರು.

ಕಬ್ಬನ್ ಉದ್ಯಾನದಲ್ಲಿ ನೀರಿನ ಬಟ್ಟಲು ಅಳವಡಿಕೆ: ಬೇಸಿಗೆಯಲ್ಲಿ ವನ್ಯಜೀವಿಗಳ ದಾಹ ನೀಗಿಸುವ ಉದ್ದೇಶದಿಂದ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘವು ಕಬ್ಬನ್ ಉದ್ಯಾನದ ಹಲವೆಡೆ 50 ನೀರಿನ ಬಟ್ಟಲುಗಳನ್ನು ಅಳವಡಿಸಿ, ನೀರು ತುಂಬಿಸುವ ಕೆಲಸ ಮಾಡಿದೆ.

‘ಬೇಸಿಗೆಯ ತಾಪಕ್ಕೆ ಜನರೇ ತತ್ತರಿಸುತ್ತಾರೆ. ಇನ್ನು ಜೀವಿಗಳ ಗತಿಯೇನು? ಹಾಗಾಗಿ, ಸಂಘದ ವತಿಯಿಂದ ನೀರಿನ ಬಟ್ಟಲುಗಳನ್ನು ಉದ್ಯಾನದಲ್ಲಿ ಇಟ್ಟಿದ್ದೇವೆ. ಇದರಿಂದ ಪಕ್ಷಿಗಳು ಬಾಯಾರಿಕೆಯಾದಾಗ ಬಂದು ನೀರು ಕುಡಿಯುತ್ತಿವೆ. ಈ ಕೆಲಸ ಎಲ್ಲ ಉದ್ಯಾನಗಳಲ್ಲಿ ಹಾಗೂ ಮನೆಗಳಲ್ಲಿ ಮಾಡಿದರೆ ಇನ್ನೂ ಅನುಕೂಲ’ ಎಂದು ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ್ ತಿಳಿಸಿದರು.

ಗುಬ್ಬಿ ಕ್ಷೀಣಿಸಲು ಪಾರಿವಾಳ ಕಾರಣ: ನಗರದಲ್ಲಿ ಗುಬ್ಬಚ್ಚಿ ಸಂಖ್ಯೆ ಕ್ಷೀಣಿಸಲು ಮೊಬೈಲ್ ವಿಕಿರಣಗಳು ಕಾರಣ ಎಂದು ಹೇಳಲಾಗುತ್ತಿದೆ. ಇದು, ವೈಜ್ಞಾನಿಕವಾಗಿ ಇನ್ನೂ ದೃಢವಾಗಿಲ್ಲ. ಪಕ್ಷಿಗಳೂ ಸಂಘರ್ಷಕ್ಕೆ ಒಳಪಡುತ್ತವೆ. ಗುಬ್ಬಿ ಸಂತತಿ ಕಡಿಮೆಯಾಗಲು ಪಾರಿವಾಳಗಳು ಪರೋಕ್ಷ ಕಾರಣ’ ಎನ್ನುತ್ತಾರೆ ಪ್ರಸನ್ನ ಕುಮಾರ್.

‘ಗುಬ್ಬಚ್ಚಿ ಹೆಚ್ಚಾಗಿ ಮನೆಗಳಲ್ಲಿ ಗೂಡು ನಿರ್ಮಿಸಿಕೊಳ್ಳುತ್ತವೆ. ಆದರೆ, ಇತ್ತೀಚಿನ ದಿನಗಳಲ್ಲಿ ಪಾರಿವಾಳಗಳನ್ನು ಸಾಕುವ ಪ್ರವೃತ್ತಿ ಬೆಂಗಳೂರಿನಲ್ಲಿ ಹೆಚ್ಚಾಗಿದೆ. ಪಾರಿವಾಳಗಳು ಬೇರೆ ಪಕ್ಷಿಗಳನ್ನು ತನ್ನೊಂದಿಗೆ ಸೇರಿಸಿಕೊಳ್ಳುವುದಿಲ್ಲ. ಹಾಗಾಗಿ, ಗುಬ್ಬಿಯ ಮೇಲೆ ಪಾರಿವಾಳದ ದಾಳಿ ಹೆಚ್ಚು. ಈ ಕಾರಣದಿಂದಲೂ ಗುಬ್ಬಿ ಸಂತತಿ ಕಡಿಮೆಯಾಗಿದೆ’ ಎಂದು ಮಾಹಿತಿ ನೀಡಿದರು.

ಅಭಿವೃದ್ಧಿಯ ಹಾದಿಯಲ್ಲಿ ಮುನ್ನುಗ್ಗುತ್ತಿರುವ ಬೆಂಗಳೂರಿನಲ್ಲಿ ವನ್ಯಜೀವಿಗಳ ಆವಾಸ ಸ್ಥಳಗಳೆಲ್ಲ ಅತಿಕ್ರಮಣವಾಗುತ್ತಿವೆ. ಇದರಿಂದ ಸಹಜವಾಗಿ ಜೀವಿಗಳು ಹೊಸ ಸ್ಥಳವನ್ನಾಶ್ರಯಿಸಿ ಹೊರ ಬರುತ್ತವೆ. ಅಂತಹ ಜೀವಿಗಳ ಮೇಲೆ ದಾಳಿ ನಡೆಯುತ್ತಿವೆ. ಅವುಗಳ ಜೀವಿಸುವ ಹಕ್ಕನ್ನು ಮಾನವ ದರ್ಪದಿಂದ ಕಸಿಯುತ್ತಿದ್ದಾನೆ’ ಎಂದು ವನ್ಯಜೀವಿ ಪ್ರೇಮಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ನಿರ್ಜಲೀಕರಣದಿಂದ ವನ್ಯಜೀವಿಗಳ ಸಾವು

ಯೋಗಾನಂದ ಚಂದ್ರಯ್ಯ

‘ಬೇಸಿಗೆಯಲ್ಲಿ ನಿರ್ಜಲೀಕರಣ ಸಮಸ್ಯೆಯಿಂದಲೇ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣ ಕಳೆದುಕೊಳ್ಳುತ್ತವೆ. ದೊಡ್ಡ ಪಕ್ಷಿಗಳಿಗೆ ಹೋಲಿಸಿದರೆ, ಗುಬ್ಬಿಯಂತಹ ಪುಟ್ಟ ಪಕ್ಷಿಗಳು ಬಲು ಬೇಗನೆ ನಿರ್ಜಲೀಕರಣಕ್ಕೆ ಒಳಗಾಗುತ್ತವೆ. ಇವುಗಳ ಗಾತ್ರ ಸಣ್ಣದಿರುವುದಿಂದ ರೆಕ್ಕೆಯ ಬಡಿತ ದೊಡ್ಡ ಪಕ್ಷಿಗಳಿಗಿಂತ ಅಧಿಕವಾಗಿರುತ್ತವೆ. ಸೂಕ್ತ ಸಮಯಕ್ಕೆ ನೀರು ಸಿಗದಿದ್ದಾಗ ಅವು ಉಸಿರಾಟ ಸಮಸ್ಯೆಯಿಂದ ನರಳುತ್ತವೆ’ ಎಂದು ಪ್ರಾಣಿ ಅರಿವು ಸಂಶೋಧಕ ಯೋಗಾನಂದ್ ಚಂದ್ರಯ್ಯ ವಿವರಿಸಿದರು.

‘ಅಳಿಲುಗಳು ಮರದಲ್ಲಿ ವಾಸವಿರುತ್ತವೆ. ಬೇಸಿಗೆಯಲ್ಲಿ ಮರಗಳಲ್ಲಿ ಎಲೆ ಉದುರಿ, ಸೂರ್ಯನ ಶಾಖ ಅವುಗಳ ಮೇಲೆ ನೇರವಾಗಿ ಬೀಳುತ್ತದೆ. ಅಳಿಲುಗಳು ತಾಪಕ್ಕೆ ತಡೆದುಕೊಳ್ಳದ ಸೂಕ್ಷ್ಮಜೀವಿ ಹಾಗೂ ಹೆಚ್ಚು ಕ್ರಿಯಾಶೀಲ ಚಟುವಟಿಕೆಯ ಜೀವಿ. ಇವೂ ಸಹ ಬೇಸಿಗೆಯಲ್ಲಿ ನೀರಿಗಾಗಿ ಪರದಾಡುತ್ತವೆ. ಇನ್ನೂ ಬಿಸಿಲಿನ ತಾಪಕ್ಕೆ ಕಾಡ್ಗಿಚ್ಚು ಸಂಭವಿಸಿ, ಅರಣ್ಯ ಪ್ರದೇಶ ಸುಡುತ್ತದೆ. ಈ ವೇಳೆಯೂ ಸಾವಿರಾರು ಜೀವಿಗಳು ಮೃತಪಡುವ ಸಾಧ್ಯತೆ ಹೆಚ್ಚು’ ಎಂದು ಮಾಹಿತಿ ನೀಡಿದರು.

‘ಬೀದಿ ನಾಯಿಗಳು, ದನಕರುಗಳು, ಮಂಗಗಳಿಗೂ ಬೇಸಿಗೆ ದಿನಗಳು ತೀವ್ರ ಸಂಕಷ್ಟದಾಯಕ. ಬೀಡಾಡಿ ದನಗಳು ಬೆಂಗಳೂರಿನಲ್ಲಿ ಹೆಚ್ಚಾಗಿ ರಸ್ತೆಗಳಲ್ಲಿ ತಿರುಗುತ್ತವೆ. ಹುಲ್ಲಿಗಿಂತ ತ್ಯಾಜ್ಯವನ್ನೇ ಹೆಚ್ಚಾಗಿ ತಿನ್ನುತ್ತವೆ. ಆದರೆ, ಕುಡಿಯಲು ನೀರೇ ಸಿಗುವುದಿಲ್ಲ. ಜನರು ಹಾಗೂ ಸಂಸ್ಥೆಗಳು ರಸ್ತೆಗಳಲ್ಲಿ ಬೃಹತ್ ಹೊಂಡಗಳಲ್ಲಿ ನೀರಿನ ವ್ಯವಸ್ಥೆ ಮಾಡಿದರೆ ಬೇಸಿಗೆಯಲ್ಲಿ ವನ್ಯಜೀವಿಗಳು ಪ್ರಾಣ ಉಳಿಸಿಕೊಳ್ಳಲು ನೆರವಾಗುತ್ತದೆ’ ಎಂದೂ ಸಲಹೆ ನೀಡಿದರು.

ವನ್ಯಜೀವಿ–ಮಾನವ ಸಂಘರ್ಷ ಬೇಸಿಗೆಯಲ್ಲಿ ಅಧಿಕ

‘ವನ್ಯಜೀವಿಗಳಿಗೆ ಬೇಸಿಗೆಯಲ್ಲಿ ಆಹಾರ ಹಾಗೂ ನೀರಿನ ಅಭಾವ ಹೆಚ್ಚು. ಹಾಗಾಗಿ, ಆಹಾರ ಹುಡುಕುತ್ತಾ ತಮ್ಮ ಆವಾಸ ಸ್ಥಾನಗಳಿಂದ ಹೊರಬರುತ್ತವೆ. ಈ ವೇಳೆ ಮಾನವ ಸಂಘರ್ಷಕ್ಕೆ ಒಳಗಾಗುತ್ತವೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಬೇಸಿಗೆಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ ವನ್ಯಜೀವಿ–ಮಾನವ ಸಂಘರ್ಷ ಕಾಣಬಹುದು.

‘ಬೇಸಿಗೆಯ ಬೇಗೆ ತಾಳಲಾರದೆ ಹಾವುಗಳು ಹೆಚ್ಚಾಗಿ ಹೊರಬರುತ್ತವೆ. ಅಷ್ಟೇ ವೇಗದಲ್ಲಿ ಸಂರಕ್ಷಕರಿಂದ ವನ್ಯಜೀವಿಗಳ ಸಮಸ್ಯೆಗೆ ಸ್ಪಂದನೆಯೂ ಸಿಗುತ್ತದೆ. ನಗರದಲ್ಲಿ ಯಾವುದೇ ವನ್ಯಜೀವಿಗಳ ಬಗ್ಗೆ ದೂರು ಬಂದ ಗರಿಷ್ಠ ಎರಡು ಗಂಟೆಯೊಳಗೆ ಅವುಗಳ ಸಂರಕ್ಷಣೆ ನಡೆಯುತ್ತಿದೆ. ಬೇರೆ ಜಿಲ್ಲೆಗಳಲ್ಲಿ ಇಷ್ಟು ವೇಗವಾದ ಕಾರ್ಯಾಚರಣೆ ಸಾಧ್ಯವಾಗಿಲ್ಲ’ ಎನ್ನುವುದು ಬಿಬಿಎಂಪಿ ವನ್ಯಜೀವಿ ಸಂರಕ್ಷಣಾ ತಂಡದ ಹೆಮ್ಮೆಯ ಮಾತು.

ವನ್ಯಜೀವಿ ಸಂರಕ್ಷಣೆಗೆ ಯಾರನ್ನು ಸಂಪರ್ಕಿಸಬಹುದು?

ಬಿಬಿಎಂಪಿ ಸಹಾಯವಾಣಿ
080-2221188

ಎ.ಪ್ರಸನ್ನ ಕುಮಾರ್ (ವನ್ಯಜೀವಿ ಸಂರಕ್ಷಕ)
9902794711

ಅರಣ್ಯ ಇಲಾಖೆ ಸಹಾಯವಾಣಿ
1926

ಪೀಪಲ್ ಫಾರ್ ಅನಿಮಲ್ (ಪಿಎಫ್‌ಎ)
9900025370

ಪ್ರಾಣಿಗಳ ಪುನರ್ವಸತಿ ಮತ್ತು ರಕ್ಷಣಾ ಕೇಂದ್ರ (ಎಆರ್‌ಆರ್‌ಸಿ)
94489642222

ಸಹಾಯವಾಣಿಗೆ ಬರುವ ದೂರುಗಳು (ಪ್ರತಿದಿನ)

ವನ್ಯಜೀವಿ	ಕರೆಗಳು	ಸಂರಕ್ಷಣೆ
ಪಕ್ಷಿ	30	20
ಹಾವು	30	15
ಕೋತಿ, ಇತ್ಯಾದಿ	10	3

ಬೆಂಗಳೂರಿನಲ್ಲಿರುವ ವನ್ಯಜೀವಿಗಳು	ಪ್ರಭೇದ
ಪಕ್ಷಿಗಳು	69
ಹಾವು	28
ಸಸ್ತನಿಗಳು	10

ಬೇಸಿಗೆಯಲ್ಲಿ ವನ್ಯಜೀವಿಗಳು ಅಪಾಯಕ್ಕೆ ಸಿಲುಕುತ್ತವೆ. ಈ ಬಗ್ಗೆ ನಾಗರಿಕರು ಸಹಾಯವಾಣಿಗಳಿಗೆ ಕೂಡಲೇ ಮಾಹಿತಿ ನೀಡುವುದರಿಂದ ವನ್ಯಜೀವಿಗಳನ್ನು ಸಂರಕ್ಷಿಸಬಹುದು.
ಪ್ರಸನ್ನ ಕುಮಾರ್, ಬಿಬಿಎಂಪಿ ವನ್ಯಜೀವಿ ಸಂರಕ್ಷಣಾ ತಂಡದ ಮುಖ್ಯಸ್ಥ

ಮಡಿವಾಳ ಕೆರೆಯಲ್ಲಿ ಓರಿಯೆಂಟಲ್ ವೈಟ್ ಇಬಿಸ್ ಪಕ್ಷಿಗಳ ಕಲರವ

ದೈನಂದಿನ ಬಳಕೆಗೆ ನೀರನ್ನು ಅತಿಯಾಗಿ ಪೋಲು ಮಾಡುತ್ತೇವೆ. ಅದರ ಒಂದು ಭಾಗವನ್ನು ಪ್ರಾಣಿ–ಪಕ್ಷಿಗಳಿಗೆ ನೀಡುವುದರಿಂದ ಜೀವದಾನ ಮಾಡಬಹುದು.
ಅನಿಲ್, ಪಕ್ಷಿ ಪ್ರೇಮಿ

ವನ್ಯಜೀವಿಗಳಿಗೂ ನೀರಿಗೆ ಹಾಹಾಕಾರ

ಬೇಸಿಗೆ ಬಂತೆಂದರೆ ಉದ್ಯಾನ ನಗರಿ ಬೆಂಗಳೂರಿನಲ್ಲೂ ನೀರಿಗೆ ಬರ. ಬುದ್ಧಿವಂತ ಮನುಷ್ಯ ನೀರನ್ನು ಖರೀದಿಸಿಯಾದರೂ ದಾಹ ತೀರಿಸಿಕೊಳ್ಳುತ್ತಾನೆ. ಆದರೆ, ಮೂಕ ವನ್ಯಜೀವಿಗಳು ನೀರಿನ ಅಭಾವದಿಂದ ಬೇಸಿಗೆಯಲ್ಲೇ ಹೆಚ್ಚಾಗಿ ಸಾಯುತ್ತಿವೆ. ಬತ್ತುವ ಕೆರೆಗಳು ಹಾಗೂ ಕಲುಷಿತ ಜಲಮೂಲಗಳಿಂದ ವನ್ಯಜೀವಿಗಳಿಗೂ ನೀರಿಗೆ ಹಾಹಾಕಾರ. ಈ ಬೇಸಿಗೆ ಅವಧಿಯಲ್ಲಿ ವನ್ಯಜೀವಿಗಳ ಸಂರಕ್ಷಣೆಗೆ ನಾವೇನು ಮಾಡಬಹುದು? ನಮ್ಮಿಂದ ಸಾಧ್ಯವಿರುವ ಸಣ್ಣ ಪ್ರಯತ್ನಗಳಿಂದ ವನ್ಯಜೀವಿಗಳ ಪ್ರಾಣ ಹೇಗೆ ಉಳಿಯುತ್ತದೆ ಎಂಬುದನ್ನು ಇಂದಿನ ಬ್ರ್ಯಾಂಡ್ ಬೆಂಗಳೂರು ಸರಣಿಯಲ್ಲಿ ವಿವರವಾಗಿ ತಿಳಿಯಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ.

ಪ್ರಜಾವಾಣಿ ನೋಡಿಯೊ

ಬಿಬಿಎಂಪಿ ಮುಖ್ಯ ಆಯುಕ್ತರಿಂದ ಆಸ್ಪತ್ರೆಗಳ ದಿಢೀರ್ ತಪಾಸಣೆ

5 ಆಸ್ಪತ್ರೆಗಳಿಗೆ ಸ್ಥಳದಲ್ಲೇ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಗಳಲ್ಲಿ ಸರ್ಕಾರಿ ಆದೇಶದಂತೆ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಡಲಾಗಿದೆಯೇ ಇಲ್ಲವೇ ಎಂದು ಪರಿಶೀಲಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಅವರು ಭಾನುವಾರ ನಗರದ ಕೆಲವು ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿ ತಪಾಸಣೆ ನಡೆಸಿದರು.

ವಿಕ್ರಂ, ಫೋರ್ಟಿಸ್, ಆಸ್ಟರ್ ಸಿಎಂಐ, ಕೊಲಂಬಿಯಾ ಏಷಿಯಾ ಹಾಗೂ ಬ್ಯಾಪ್ಟಿಸ್ಟ್ ಆಸ್ಪತ್ರೆಗಳು ಸರ್ಕಾರದ ಮಾರ್ಗಸೂಚಿ ಪ್ರಕಾರ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಟ್ಟಿರಲಿಲ್ಲ. ಈ ಐದು ಆಸ್ಪತ್ರೆಗಳಿಗೆ ಮುಖ್ಯ ಆಯುಕ್ತರು ಸ್ಥಳದಲ್ಲೇ ನೋಟಿಸ್ ಜಾರಿಗೊಳಿಸಿ ಸಮಜಾಯಿಷಿ ನೀಡುವಂತೆ ಸೂಚಿಸಿದರು. 24 ಗಂಟೆಗಳ ಒಳಗೆ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಒದಗಿಸದಿದ್ದರೆ ಕೆಪಿಎಂಇ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ವಿಕ್ರಂ ಆಸ್ಪತ್ರೆಯಲ್ಲಿ 39 ಹಾಸಿಗೆಗಳು ಹಾಗೂ ಫೋರ್ಟಿಸ್ ಆಸ್ಪತ್ರೆ 30 ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಟ್ಟು ಈ ಕುರಿತ ಸೂಚನಾ ಫಲಕವನ್ನು ಪ್ರವೇಶದ್ವಾರದ ಮುಂದೆ ಅಳವಡಿಸಬೇಕಿದೆ. ಆದರೆ ಈ ಎರಡು ಆಸ್ಪತ್ರೆಗಳೂ ಸರಿಯಾದ ಮಾಹಿತಿ ನೀಡಿರದೇ ಇರುವುದು ತಪಾಸಣೆ ವೇಳೆ ಕಂಡುಬಂತು.

ಆಸ್ಟರ್ ಸಿ.ಎಂ.ಐ ಆಸ್ಪತ್ರೆ 112 ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಡಬೇಕಿರುತ್ತದೆ. ಆದರೆ ಶೇ. 20ರಷ್ಟು ಸಾಮಾನ್ಯ ಹಾಸಿಗೆಗಳು, ಐಸಿಯು, ವೆಂಟಿಲೇಟರ್ ವ್ಯವಸ್ಥೆಯವು ಸೇರಿ ಒಟ್ಟು 45 ಹಾಸಿಗೆಗಳನ್ನು ಮಾತ್ರ ಮೀಸಲಿಡಲಾಗಿತ್ತು. ಕೊಲಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ 30 ಹಾಸಿಗೆಗಳ ಬದಲು 15 ಹಾಸಿಗೆಗಳನ್ನು ಮಾತ್ರ ಮೀಸಲಿಡಲಾಗಿತ್ತು. ಬ್ಯಾಪ್ಟಿಸ್ಟ್ ಆಸ್ಪತ್ರೆಯು 124 ಹಾಸಿಗೆಗಳ ಬದಲು 63 ಹಾಸಿಗೆಗಳನ್ನು ಮಾತ್ರ ಮೀಸಲಿಟ್ಟಿತ್ತು.

‘ಇಂದು ಸಾಂಕೇತಿಕವಾಗಿ 5 ಆಸ್ಪತ್ರೆಗಳಿಗೆ ಭೇಟಿ ನೀಡಿ ತಪಾಸಣೆ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಲಿದ್ದೇನೆ’ ಎಂದು ಗೌರವ ಗುಪ್ತ ತಿಳಿಸಿದರು.

ವಲಯ ಆಯುಕ್ತ ಡಿ.ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜಯೇಂದ್ರ ಜೊತೆಯಲ್ಲಿದ್ದರು.

ಖಾಸಗಿ ಆಸ್ಪತ್ರೆಗಳ ಮೇಲೆ ದಾಳಿ: ಆರ್. ಅಶೋಕ

ಬೆಂಗಳೂರು: ‘ಶೇ 50ರಷ್ಟು ಹಾಸಿಗೆ ನೀಡುವುದಾಗಿ ಭರವಸೆ ನೀಡಿದ್ದ ಕೆಲವು ದೊಡ್ಡ ಆಸ್ಪತ್ರೆಗಳು ಕೇವಲ ಶೇ 10ರಿಂದ 15ರಷ್ಟು ಹಾಸಿಗೆಗಳನ್ನು ನೀಡಿವೆ. ಹಾಸಿಗೆಗಳನ್ನು ನೀಡದ ಖಾಸಗಿ ಆಸ್ಪತ್ರೆಗಳಿಗೆ ಮೂರನೇ ಬಾರಿ ನೋಟಿಸ್ ನೀಡುವಂತೆ ಮತ್ತು ದಾಳಿ ನಡೆಸುವಂತೆ ಸೂಚಿಸಿದ್ದೇನೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ನಗರದ ಹಲವು ಆಸ್ಪತ್ರೆಗಳು ಕೋವಿಡ್ ರೋಗಿಗಳಿಗೆ ಹಾಸಿಗೆ ನೀಡಲು ನಿರಾಕರಿಸುತ್ತಿವೆ’ ಎಂದರು.

‘ಚಿತಾಗಾರಗಳಲ್ಲಿ ಕ್ಯೂ ತಪ್ಪಿಸಲು ಮೃತದೇಹಗಳನ್ನು ತಕ್ಷಣ ಬಿಟ್ಟುಕೊಡುವಂತೆ ಆಸ್ಪತ್ರೆಗಳಿಗೆ ಸೂಚನೆ ನೀಡಲಾಗಿದೆ. ಮೃತದೇಹಗಳ ಅಂತ್ಯಸಂಸ್ಕಾರಕ್ಕೆ ಬೆಂಗಳೂರು ನಗರದ ಸುತ್ತ 4ರಿಂದ 5 ಜಾಗಗಳನ್ನು ಸರ್ಕಾರ ಗುರುತಿಸಿದೆ. ಶವ ಸಂಸ್ಕಾರಕ್ಕೆ ತಾತ್ಕಾಲಿಕ ಜಾಗ ಗುರುತಿಸುವ ಹೊಣೆಯನ್ನು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಅವರಿಗೆ ನೀಡಲಾಗಿದೆ. ದಿನವೊಂದಕ್ಕೆ 200 ಮೃತದೇಹಗಳ ಅಂತ್ಯಸಂಸ್ಕಾರಕ್ಕೆ ಚಿತಾಗಾರಗಳಲ್ಲಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ’ ಎಂದೂ ಅಶೋಕ ಹೇಳಿದರು.

ಮೇಡಿ ಅಗ್ರಹಾರ ಚಿತಾಗಾರಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ಭೇಟಿ

ಚಿತಾಗಾರ ಸಿಬ್ಬಂದಿಗೆ ಪಾಳಿ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಸಾಯುತ್ತಿರುವವರ ಸಂಖ್ಯೆ ದಿಢೀರ್ ಹೆಚ್ಚಳ ಕಂಡಿದ್ದರಿಂದ ನಗರದ ವಿದ್ಯುತ್ ಚಿತಾಗಾರಗಳ ಮೇಲೆ ಹೆಚ್ಚಿನ ಒತ್ತಡ ಬಿದ್ದಿದೆ. ಇಲ್ಲಿನ ಸಿಬ್ಬಂದಿ ಹಗಲೂ ರಾತ್ರಿ ಶವಗಳ ಅಂತ್ಯಸಂಸ್ಕಾರ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಿಬ್ಬಂದಿಯ ಒತ್ತಡ ಕಡಿಮೆ ಮಾಡಲು ಪಾಳಿ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚಿಸಿದರು.

ಯಲಹಂಕ ವಲಯದ ಎಂ.ಎಸ್. ಪಾಳ್ಯದ ಹತ್ತಿರದ ಮೇಡಿ ಅಗ್ರಹಾರದ ವಿದ್ಯುತ್ ಚಿತಾಗಾರಕ್ಕೆ ಭಾನುವಾರ ದಿಢೀರ್ ಭೇಟಿ ನೀಡಿ ಅವರು ಪರಿಸ್ಥಿತಿಯನ್ನು ಅವಲೋಕಿಸಿದರು.

ಈ ಚಿತಾಗಾರದಲ್ಲಿ ಇತ್ತೀಚೆಗೆ ನಿತ್ಯ ಸುಮಾರು 20-25 ಶವಗಳ ಅಂತ್ಯಕ್ರಿಯೆ ನಡೆಯುತ್ತಿದೆ. ಹೆಚ್ಚಾಗಿ ಬೆಂಗಳೂರು ಗ್ರಾಮಾಂತರ ಪ್ರದೇಶಗಳ ಮೃತದೇಹಗಳು ಈ ಚಿತಾಗಾರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಆಸ್ಪತ್ರೆಗಳು ತಡ ರಾತ್ರಿಯಲ್ಲೂ ಶವಗಳನ್ನು ಕಳುಹಿಸುತ್ತಿರುವುದರಿಂದಾಗಿ ಇಲ್ಲಿನ ಸಿಬ್ಬಂದಿ ಮಧ್ಯರಾತ್ರಿವರೆಗೂ ಅಂತ್ಯಕ್ರಿಯೆ ಮುಂದುವರಿಸಬೇಕಾದ ಸ್ಥಿತಿ ಇಲ್ಲಿದೆ ಎಂದು ಸಿಬ್ಬಂದಿ ವಿವರಿಸಿದರು.

ಈ ಚಿತಾಗಾರದಲ್ಲಿ ಹೆಚ್ಚಾಗಿ ಖಾಸಗಿ ಆಂಬುಲೆನ್ಸ್‌ಗಳ ಮೂಲಕ ಶವಗಳನ್ನು ತರಲಾಗುತ್ತಿದೆ. ಏಕಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೃತದೇಹಗಳನ್ನು ಅಂತ್ಯಕ್ರಿಯೆಗಾಗಿ ಇಲ್ಲಿಗೆ ಕರೆತಂದಾಗ ಇಲ್ಲಿ ಜನ ಜಂಗುಳಿಯೂ ಉಂಟಾಗುತ್ತಿದೆ.

ಕೋವಿಡ್ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ನೋಡಿಕೊಳ್ಳುವ ಸಲುವಾಗಿ ಚಿತಾಗಾರದ ಬಳಿ ಕೂಡಲೇ ಮಾರ್ಷಲ್‌ಗಳನ್ನು ನಿಯೋಜಿಸಬೇಕು. ಪೊಲೀಸ್ ಸಿಬ್ಬಂದಿಯೂ ಆಗಾಗ ಭೇಟಿ ನೀಡಿ ಇಲ್ಲಿ ಜನರ ಅಂತರ ಕಾಪಾಡುವಂತೆ ವ್ಯವಸ್ಥೆಗೊಳಿಸಲು ಅಗತ್ಯ ಕ್ರಮವಹಿಸಬೇಕು ಎಂದು ಜಂಟಿ ಆಯುಕ್ತ ಅಶೋಕ್ ಅವರಿಗೆ ಮುಖ್ಯ ಆಯುಕ್ತರು ಸೂಚಿಸಿದರು.

ನಗರದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆ ನಡೆಸಲು ಗೊತ್ತುಪಡಿಸಲಾದ ಚಿತಾಗಾರಗಳಿಗೆ ನಿತ್ಯವು 20ಕ್ಕೂ ಅಧಿಕ ಮೃತದೇಹಗಳು ಬರುತ್ತಿರುವುದರಿಂದ ಅಲ್ಲಿನ ಸಿಬ್ಬಂದಿ ಮಧ್ಯರಾತ್ರಿವರೆಗೂ ಅಂತ್ಯಕ್ರಿಯೆ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ‘ಪ್ರಜಾವಾಣಿ’ ಭಾನುವಾರದ ಸಂಚಿಕೆಯಲ್ಲಿ ‘ತಡರಾತ್ರಿವರೆಗೂ ಶವ ಸುಡುವ ಚಿತಾಗಾರ ಕಾರ್ಮಿಕರು’ ಎಂಬ ವಿಶೇಷ ವರದಿಯನ್ನು ಪ್ರಕಟಿಸಿತ್ತು. ಇವರ ಬವಣೆಗಳ ಬಗ್ಗೆ ಬೆಳಕು ಚೆಲ್ಲಿತ್ತು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮೇಡಿ ಅಗ್ರಹಾರದ ವಿದ್ಯುತ್ ಚಿತಾಗಾರಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು.

ಸಂಜಯನಗರ ಪಿಎಚ್‌ಸಿಗೆ ಭೇಟಿ

ಸಂಜಯನಗರದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮುಖ್ಯ ಆಯುಕ್ತರು ಭಾನುವಾರ ದಿಢೀರ್ ಭೇಟಿ ನೀಡಿದರು. ಕೋವಿಡ್ ಮುಂಜಾಗ್ರತಾ ಕ್ರಮವಾಗಿ ಕೈಗೊಂಡಿರುವ ಕಾರ್ಯಗಳನ್ನು ಅವರು ಪರಿಶೀಲಿಸಿದರು.

ಈ ಆರೋಗ್ಯ ಕೇಂದ್ರವು ಲಯನ್ಸ್ ಸಂಸ್ಥೆಯ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಲಯನ್ಸ್ ಸಂಸ್ಥೆಯ ಸಹಕಾರದೊಂದಿಗೆ ಇನ್ನೂ ಹೆಚ್ಚಿನ ಸ್ಥಳಗಳಲ್ಲಿ ಕೋವಿಡ್ ಪರೀಕ್ಷೆ ಹಾಗೂ ಲಸಿಕಾ ಕೇಂದ್ರಗಳನ್ನು ಸ್ಥಾಪಿಸುವಂತೆ ಮುಖ್ಯ ಆಯುಕ್ತರು ಸೂಚಿಸಿದರು.

ಸಾರ್ವಜನಿಕರು ಕೋವಿಡ್ ಪರೀಕ್ಷೆಗೆ ಸರದಿಯಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಬಾರದು. ಇದನ್ನು ತಪ್ಪಿಸಲು ಹೆಚ್ಚುವರಿ ಕೇಂದ್ರಗಳನ್ನು ತೆರೆಯಬೇಕು ಎಂದು ಆಯುಕ್ತರು ಸೂಚಿಸಿದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಜನಜಂಗುಳಿ ನಿರ್ಮಾಣವಾಗುತ್ತಿರುವ ಬಗ್ಗೆ ‘ಪ್ರಜಾವಾಣಿ’ ಭಾನುವಾರದ ಸಂಚಿಕೆಯಲ್ಲಿ ‘ಕೋವಿಡ್ ಪರೀಕ್ಷೆಗೆ ಕಾದು ಹೈರಾಣಾಗುತ್ತಿರುವ ಜನ’ ಎಂಬ ವರದಿ ಪ್ರಕಟಿಸಿತ್ತು.

ಬೆಂಗಳೂರು ಉತ್ತರ ವಿ.ವಿ ಪರೀಕ್ಷೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದಿಂದ ಮುಂದೂಡಿದ್ದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳು ಏ.19ರಿಂದ ಮತ್ತೆ ಆರಂಭಗೊಳ್ಳಲಿವೆ ಎಂದು ಪ್ರಕಟಣೆ ತಿಳಿಸಿದೆ.

‘ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮುಂದೂಡಿದ್ದ ವಿವಿಧ ಕೋರ್ಸ್‌ಗಳ ಒಂದು, ಮೂರು ಹಾಗೂ ಐದನೇ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಸೋಮವಾರದಿಂದ (ಏ.19) ನಡೆಸಲು ಇತ್ತೀಚಿನ ಸಭೆಯಲ್ಲಿ ನಿರ್ಧರಿಸಲಾಯಿತು. ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿಯನ್ನು ಈಗಾಗಲೇ ಕಾಲೇಜುಗಳ ಪ್ರಾಂಶುಪಾಲರಿಗೆ ರವಾನಿಸಲಾಗಿದೆ’.

‘ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ www.bnu.ac.in ಹಾಗೂ ಕಾಲೇಜುಗಳ ವೆಬ್‌ಸೈಟ್‌ಗಳಿಂದಲೂ ವೇಳಾಪಟ್ಟಿ ಪಡೆಯಬಹುದು’ ಎಂದು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

10ರಿಂದ 12ವರೆಗೆ ನೇರ ತರಗತಿ: ಪೋಷಕರು, ಉಪನ್ಯಾಸಕರ ಆಕ್ಷೇಪ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆಯ ತೀವ್ರಗೊಂಡಿದ್ದರೂ ಎಸ್ಸೆಸ್ಸೆಲ್ಸಿ, ಪ್ರಥಮ, ದ್ವಿತೀಯ ಪಿಯುಸಿಗಳಿಗೆ ಶಿಕ್ಷಣ ಇಲಾಖೆ ಶಾಲೆ– ಕಾಲೇಜುಗಳಲ್ಲಿ ನೇರ ತರಗತಿ (ಆಫ್‌ಲೈನ್) ಮುಂದುವರಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಪದವಿಪೂರ್ವ ಕಾಲೇಜುಗಳ ನೇರ ತರಗತಿಗಳನ್ನು ಸ್ಥಗಿತಗೊಳಿಸಿ ಆನ್‌ಲೈನ್ ತರಗತಿಗೆ ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಸೋಮವಾರ ಮನವಿ ಸಲ್ಲಿಸಲು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ನಿರ್ಧರಿಸಿದೆ.

‘ರಾಜ್ಯದ ವಿವಿಧ ಭಾಗಗಳಲ್ಲಿ ಹತ್ತಾರು ಶಿಕ್ಷಕರು ಕೋವಿಡ್‌ಗೆ ಬಲಿಯಾಗಿದ್ದಾರೆ. ಈಗಾಗಲೇ ತಜ್ಞರ ಸಮಿತಿ ಕೂಡಾ ಶಾಲಾ ಕಾಲೇಜುಗಳಲ್ಲಿ ಆಫ್‌ಲೈನ್ ತರಗತಿಗಳನ್ನು ನಡೆಸದಂತೆ ಸಲಹೆ ನೀಡಿದೆ. ವಿವಿಧ ಇಲಾಖೆಗಳಲ್ಲಿ ಸಭೆಯನ್ನೇ ಮಾಡಬೇಡಿ ಎಂದು ಸರ್ಕಾರ ಆದೇಶ ಹೊರಡಿಸಿದೆ. ಇಂಥ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ ತರಗತಿಗಳನ್ನು ಶಾಲೆಗಳಲ್ಲಿ ನಡೆಸುವುದು ಅಪಾಯಕಾರಿ’ ಎಂದೂ ಮನವಿ ಮಾಡಲು ಸಂಘ ತೀರ್ಮಾನಿಸಿದೆ.

‘ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದರೂ ರಾಜ್ಯ ಸರ್ಕಾರ ಇನ್ನೂ ಎಚ್ಚೆತ್ತುಕೊಂಡಿಲ್ಲ. ಮಕ್ಕಳು ಮತ್ತು ಶಿಕ್ಷಕರ ಜೀವದ ಜೊತೆಗೆ ಸರ್ಕಾರ ಚೆಲ್ಲಾಟವಾಡುತ್ತಿದೆ’ ಎಂದು ಪೋಷಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ರೈತರು ಪ್ರತಿಭಟನೆ ಅಂತ್ಯಗೊಳಿಸುವುದಿಲ್ಲ’

ನವದೆಹಲಿ: ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿದ್ದರೂ ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆಸುತ್ತಿರುವ ಪ್ರತಿಭಟನೆಯನ್ನು ಬೇಡಿಕೆಗಳು ಈಡೇರದೆ ರೈತರು ಅಂತ್ಯಗೊಳಿಸುವುದಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ತಿಳಿಸಿದೆ.

ಸರ್ಕಾರ ಕೊರೊನಾ ವೈರಸ್ ವಿರುದ್ಧ ಹೋರಾಟ ನಡೆಸಲಿ. ರೈತರ ವಿರುದ್ಧ ಅಲ್ಲ. ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳಗಳಲ್ಲಿ ಲಸಿಕಾ ಕೇಂದ್ರಗಳನ್ನು ಸ್ಥಾಪಿಸಬೇಕು. ಜತೆಗೆ, ವೈರಸ್‌ನಿಂದ ರಕ್ಷಿಸಿಕೊಳ್ಳಲು ಅಗತ್ಯ ಉಪಕರಣಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದೆ.

ವಿಮಾನಗಳ ಹಾರಾಟ ರದ್ದು

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ವ್ಯಾಪಕವಾಗುತ್ತಿರುವುದರಿಂದ ಭಾರತಕ್ಕೆ ಬರುವ ಎಲ್ಲ ವಿಮಾನಗಳ ಹಾರಾಟವನ್ನು ಹಾಂಕಾಂಗ್ ಸರ್ಕಾರವು ಮಂಗಳವಾರದಿಂದ (ಏಪ್ರಿಲ್ 20) ಮೇ 3ರ ತನಕ ನಿಷೇಧಿಸಿದೆ ಎಂದು ವಿಮಾನಯಾನ ಸಚಿವಾಲಯದ ಮೂಲಗಳು ತಿಳಿಸಿವೆ. ಹಾಂಕಾಂಗ್ ಸರ್ಕಾರವು ಭಾರತ, ಪಾಕಿಸ್ತಾನ– ಫಿಲಿಪ್ಪೀನ್ಸ್‌ನಿಂದ ತೆರಳುವ ಹಾಗೂ ಬರುವ ಎಲ್ಲಾ ವಿಮಾನಗಳ ಹಾರಾಟವನ್ನು ಮೇ 3ರವರೆಗೆ ರದ್ದುಗೊಳಿಸಿದೆ.

ಜೆಡಿಎಸ್ ಮಾಜಿ ಶಾಸಕ ಕೆ. ರಾಜು ಮತ್ತು ಅವರ ಬೆಂಬಲಿಗರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡರು

‘ಕೈ’ ಹಿಡಿದ ಮಾಜಿ ಶಾಸಕ ರಾಜು

ಬೆಂಗಳೂರು: ಜೆಡಿಎಸ್‌ನ ಮಾಜಿ ಶಾಸಕ, ರಾಮನಗರದ ಕೆ. ರಾಜು ಅವರು ತಮ್ಮ ಬೆಂಬಲಿಗರ ಜತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಭಾನುವಾರ ಕಾಂಗ್ರೆಸ್ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಶಾಲು ಹೊದಿಸಿ ರಾಜು ಅವರನ್ನು ಶಿವಕುಮಾರ್ ಪಕ್ಷಕ್ಕೆ ಬರಮಾಡಿಕೊಂಡರು. ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್, ವಿಧಾನಪರಿಷತ್ ಸದಸ್ಯರಾದ ಸಿ.ಎಂ. ಲಿಂಗಪ್ಪ, ಎಸ್. ರವಿ, ಮಾಜಿ ಶಾಸಕ ಬಾಲಕೃಷ್ಣ ಇದ್ದರು.

ಶಿವಕುಮಾರ್ ಮಾತನಾಡಿ, ‘ರಾಜು ಅವರು ಯಾವುದೇ ಷರತ್ತಿಲ್ಲದೆ ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದಾರೆ. ಪಕ್ಷಕ್ಕೆ ಬರುವವರಿಗೆ ಮುಕ್ತ ಆಹ್ವಾನ ನೀಡಿದ್ದೇವೆ. ಯಾರು ಬೇಕಾದರೂ ಸಿದ್ಧಾಂತ ಒಪ್ಪಿ ಬರಬಹುದು. ಕಾಂಗ್ರೆಸ್ ಪಕ್ಷಕ್ಕೆ ಬಲ ತುಂಬಬೇಕು ಎಂದು ವಿವಿಧ ಪಕ್ಷಗಳಿಂದ ಹಲವರು ಬರುತ್ತಿದ್ದಾರೆ. ನಾವೇನು ಬಲವಂತವಾಗಿ ಕರೆತರುತ್ತಿಲ್ಲ’ ಎಂದರು.

‘ಕುಮಾರಸ್ವಾಮಿ ನನ್ನನ್ನು ಶಾಸಕರನ್ನಾಗಿ ಮಾಡಿದ್ದರು. ನಾನು ಪ್ರಾಮಾಣಿಕವಾಗಿ ಪಕ್ಷಕ್ಕೆ ಕೆಲಸ ಮಾಡಿದ್ದೆ. ಶಾಸಕನಾದ ಒಂದು ವರ್ಷದ ಬಳಿಕ ಮಾನಸಿಕ ಹಿಂಸೆ ಕೊಟ್ಟರು. ಅದನ್ನು ನಾನು ಇಲ್ಲಿ ಹೇಳಲು ಆಗುವುದಿಲ್ಲ. ಆಗ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಹೊರಟಿದ್ದೆ. ನಂತರ ಸಾಮಾನ್ಯ ಕಾರ್ಯಕರ್ತನಾಗಿಯೂ ಇದ್ದೆ. ಆದರೂ ನನಗೆ ಕಿರಿಕಿರಿ ಕೊಡಲು ಹೊರಟರು. ಹೀಗಾಗಿ, ನಾನು ಕಾಂಗ್ರೆಸ್ ಸೇರಿದ್ದೇನೆ’ ಎಂದು ರಾಜು ಹೇಳಿದರು.

ನಗರದಲ್ಲಿ ಇಂದು

ಕೋವಿಡ್ ಲಸಿಕೆ ಅಭಿಯಾನ: ಆಯೋಜನೆ–ಶೇಷಾದ್ರಿಪುರ ಕಾಲೇಜು, ಸಹಯೋಗ–ಬಿಬಿಎಂಪಿ ಶೇಷಾದ್ರಿಪುರ, ಸ್ಥಳ–ಕ್ವಾಡ್ರಾಂಗಲ್, ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

‘ಬೆಂಗಳೂರು ಗ್ರಾಮೀಣ-ನಗರ ಅಂತರ ಸಂಪರ್ಕ ಸಾಧನ: ಕೃಷಿ ಆರ್ಥಿಕತೆ ಮತ್ತು ಸಮಾಜದಲ್ಲಿ ಪರಿವರ್ತನೆ’ ಕುರಿತು ಇಂಡೋ-ಜರ್ಮನ್ ಸಹಭಾಗಿತ್ವ ಯೋಜನೆ:ಉದ್ಘಾಟನೆ ಮತ್ತು ಅಧ್ಯಕ್ಷತೆ-ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್, ಸ್ಥಳ–ಕುಲಪತಿಗಳ ಕಚೇರಿ, ಜಿಕೆವಿಕೆ, ಕೃಷಿ ವಿಶ್ವವಿದ್ಯಾನಿಲಯ, ಮಧ್ಯಾಹ್ನ 2

ಕೇಂದ್ರ ಸರ್ಕಾರದಿಂದ ರಂಗಭೂಮಿ ಕಲಾವಿದರಿಗೆ ದೊರೆಯುವ ಸೌಲಭ್ಯಗಳ ಮಾಹಿತಿ ಹಂಚಿಕೆ: (ಸಂಜೆ 4)– ಮಿಶನ್ ಮೋದಿ ಮತ್ತು ಪಿ.ಎಂ. ಡೆಮೊಕ್ರಸಿ ಅಭಿವೃದ್ಧಿ ಟ್ರಸ್ಟ್, ಸಂಜೆ 5ಕ್ಕೆ ‘ರಂಗಭೂಮಿಯ ವರ್ತಮಾನದ ಸಾಂಸ್ಕೃತಿಕ ತಲ್ಲಣಗಳು’ ಚರ್ಚೆ, ಸಂಜೆ 6ಕ್ಕೆ ಬಸವರಾಜ್ ಸಬರದ ರಚಿಸಿರುವ ‘ಮತ್ತೊಬ್ಬ ರಾಧೆ’ (ಗಲಗಲಿ ಅವ್ವಾ) ನಾಟಕ ಪ್ರದರ್ಶನ, ನಿರ್ದೇಶನ–ಜೀಶೇಶ್ ಲಗಲಿ, ಅತಿಥಿಗಳು–ಮಿಷನ್ ಮೋದಿ ರಾಜ್ಯ ಘಟಕದ ಅಧ್ಯಕ್ಷ ಜಿ.ಕೆ. ಕುಲಕರ್ಣಿ, ಕಾರ್ಯಾಧ್ಯಕ್ಷ ವೀರಣ್ಣ ಶೆಟ್ಟರ್, ಪ್ರಧಾನ ಕಾರ್ಯದರ್ಶಿ ವಿ.ಕೆ. ದೀಕ್ಷಿತ್, ಮಹಿಳಾ ಅಧ್ಯಕ್ಷೆ ಪ್ರೇಮಾ ಸೌಮ್ಯಲತಾ, ಆಯೋಜನೆ–ಕರ್ನಾಟಕ ನಾಟಕ ಜಾನಪದ ಕಲಾವಿದರ ಸಂಘ, ಹುಬ್ಬಳ್ಳಿ, ಸಹಕಾರ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ

83ನೇ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಜೆ 6ಕ್ಕೆ ಬೆಂಗಳೂರು ಎಸ್.ಶಂಕರ್ ಅವರಿಂದ ಕರ್ನಾಟಕ ಸಂಗೀತ, ಪಿಟೀಲು–ಮೈಸೂರು ಕಾರ್ತಿಕ್, ಮೃದಂಗ–ತುಮಕೂರು ರವಿಶಂಕರ್, ಆಯೋಜನೆ:ಶ್ರೀ ರಾಮಸೇವಾ ಮಂಡಳಿ, (ಆನ್‌ಲೈನ್ ಕಾರ್ಯಕ್ರಮ-live.ramanavami.org)

ಪ್ರಜಾವಾಣಿ facebook LIVE fb.com/prajavani.net

ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ



ಮಂದಾರ್ ಹುಕ್ಕೇರಿ,
ಗಣಿತಶಾಸ್ತ್ರ ಉಪನ್ಯಾಸಕರು,
ಆರ್. ಜೆ. ಪದವಿಪೂರ್ವ ಕಾಲೇಜು, ಕಲಬುರಗಿ.
ಇವರಿಂದ ಟಿಪ್ಸ್
ವಿಷಯ
ಗಣಿತಶಾಸ್ತ್ರ
ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ
ಇಂದು 4.30 ರಿಂದ 6.00

‘ಕೇಂದ್ರದ ಸೂಚನೆ ವಿರುದ್ಧ ಆದೇಶ ಹೊರಡಿಸಿಲ್ಲ’

ಬೆಂಗಳೂರು: ದಾಸ್ತಾನು ಇರುವ ರಸಗೊಬ್ಬರವನ್ನು ಹಳೆಯ ದರದಲ್ಲೇ ಮಾರಾಟ ಮಾಡಬೇಕು ಎಂಬ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡರ ಸೂಚನೆಯ ವಿರುದ್ಧ ರಾಜ್ಯದ ಕೃಷಿ ಇಲಾಖೆ ಯಾವುದೇ ಆದೇಶ ಹೊರಡಿಸಿಲ್ಲ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಸ್ಪಷ್ಟಪಡಿಸಿದ್ದಾರೆ.

‘ಕೇಂದ್ರದ ಸೂಚನೆಯ ವಿರುದ್ಧವೇ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ’ ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಚಿವರು, ‘ಸಿದ್ದರಾಮಯ್ಯ ಆರೋಪದಲ್ಲಿ ಹುರುಳಿಲ್ಲ. ಅವರು ಇಲ್ಲಸಲ್ಲದ ಹೇಳಿಕೆಗಳ ಮೂಲಕ ರಾಜ್ಯದ ರೈತರ ದಿಕ್ಕು ತಪ್ಪಿಸುತ್ತಿದ್ದಾರೆ’ ಎಂದು ದೂರಿದ್ದಾರೆ.

ದಾಸ್ತಾನು ಇರುವ ಹಳೆಯ ರಸಗೊಬ್ಬರವನ್ನು ಹಳೆಯ ದರದಲ್ಲೇ ಮಾರಾಟ ಮಾಡಬೇಕು ಎಂಬುದಾಗಿ ಮಾರಾಟಗಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ಬಗ್ಗೆ ಕೃಷಿ ಇಲಾಖೆಯಿಂದ ವ್ಯಾಪಕವಾಗಿ ಪ್ರಚಾರವನ್ನೂ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಅವರ ಹೇಳಿಕೆ ಶುದ್ಧ ಸುಳ್ಳುಗಳಿಂದ ಕೂಡಿದೆ ಎಂದಿದ್ದಾರೆ.

ಅಭ್ಯರ್ಥಿಗಳಿಂದ ತೀವ್ರ ಅಸಮಾಧಾನ

ಅರಣ್ಯ ರಕ್ಷಕರ ಹುದ್ದೆ: ದೈಹಿಕ ಪರೀಕ್ಷೆಯಲ್ಲಿ ಗೊಂದಲ

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ಆಹ್ವಾನಿಸಿದ್ದ ಅರಣ್ಯ ರಕ್ಷಕ ಹುದ್ದೆಗೆ ಶುಕ್ರವಾರ ನಡೆದ ದೈಹಿಕ ಪರೀಕ್ಷೆಯಲ್ಲಿ ಗೊಂದಲ ಉಂಟಾಗಿರುವ ಕುರಿತು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಿಗಮವು 32 ಅರಣ್ಯ ರಕ್ಷಕ ಹುದ್ದೆಗೆ 2016ರಲ್ಲಿ ಅರ್ಜಿ ಆಹ್ವಾನಿಸಿತ್ತು. ಆದರೆ 2018ರಲ್ಲಿ ನಿಗಮ ಮರು ಅಧಿಸೂಚನೆ ಪ್ರಕಟಿಸಿ ಹುದ್ದೆಯ ಸಂಖ್ಯೆಯನ್ನು 22ಕ್ಕೆ ಇಳಿಸಿತ್ತು. ಇದಕ್ಕೆ ಶುಕ್ರವಾರ ದೈಹಿಕ ಪರೀಕ್ಷೆ ನಡೆಸಿತ್ತು.

ಅರ್ಜಿ ಸಲ್ಲಿಸಿದ್ದವರಲ್ಲಿ ಅರ್ಹತೆ ಗಿಟ್ಟಿಸಿಕೊಂಡಿದ್ದ 431 ಅಭ್ಯರ್ಥಿಗಳಲ್ಲಿ 170 ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಿದ್ದರು. ದೈಹಿಕ ಪರೀಕ್ಷೆಯಲ್ಲಿ 1600 ಮೀಟರ್ ಓಟವನ್ನು 6 ನಿಮಿಷದಲ್ಲೇ ಕ್ರಮಿಸಬೇಕು ಎಂಬ ದಿಢೀರ್ ಷರತ್ತು ಅಭ್ಯರ್ಥಿಗಳನ್ನು ಗೊಂದಲಕ್ಕೀಡು ಮಾಡಿತ್ತು. ಆದರೆ ಇವರಲ್ಲಿ ಕೇವಲ 16 ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಅರ್ಹತೆ ಗಿಟ್ಟಿಸಿದ್ದು ಉಳಿದ ಅಭ್ಯರ್ಥಿಗಳಲ್ಲಿ ತೀವ್ರ ಅಸಮಾಧಾನ ಉಂಟು ಮಾಡಿದೆ.

ಮುಖ್ಯಾಂಶಗಳು

- ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅರಣ್ಯ ರಕ್ಷಕ ಹುದ್ದೆ
- 1600 ಮೀ. ಕ್ರಮಿಸಲು 7 ನಿಮಿಷದ ಬದಲು 6 ನಿಮಿಷಕ್ಕೆ ನಿಗದಿ
- 22 ಹುದ್ದೆಗೆ 16 ಅಭ್ಯರ್ಥಿಗಳು ಮಾತ್ರ ಲಿಖಿತ ಪರೀಕ್ಷೆಗೆ ಆಯ್ಕೆ

ಈ ಕುರಿತು ಪ್ರತಿಕ್ರಿಯಿಸಿದ ಅಭ್ಯರ್ಥಿಯೊಬ್ಬರು, ‘ಈ ಮೊದಲು ಅರಣ್ಯ ಇಲಾಖೆಯು 339 ಹುದ್ದೆಗಳಿಗೆ ನಡೆಸಿದ್ದ ದೈಹಿಕ ಪರೀಕ್ಷೆಯನ್ನು 7 ನಿಮಿಷಗಳಿಗೆ ನಿಗದಿಪಡಿಸಿತ್ತು. ಪೊಲೀಸ್ ಸಿಬ್ಬಂದಿ ನೇಮಕದಲ್ಲೂ ಇದೇ ಸಮಯವನ್ನು ಪಾಲಿಸಲಾಗುತ್ತದೆ. ಆದರೆ ಅರಣ್ಯ ಅಭಿವೃದ್ಧಿ ನಿಗಮ ನಡೆಸಿದ ಈ ನೇಮಕಾತಿಯಲ್ಲಿ ಸಮಯವನ್ನು 6 ನಿಮಿಷಗಳಿಗೆ ನಿಗದಿಪಡಿಸಿದ್ದರ ಹಿಂದಿನ ಉದ್ದೇಶವೇನು ಎಂಬುದು ಅರ್ಥವಾಗಲಿಲ್ಲ’ ಎಂದರು.

‘ಕೋವಿಡ್–19 ಭೀತಿ ಮತ್ತು ಸಾರಿಗೆ ಸಂಸ್ಥೆ ನೌಕರರ ಮುಷ್ಕರದಿಂದಾಗಿ ಬಸ್ಸುಗಳು ಇಲ್ಲದ್ದರಿಂದ ರಾಜ್ಯದ ನಾನಾ ಕಡೆಯಿಂದ ಅಭ್ಯರ್ಥಿಗಳಿಗೆ ಧಾರವಾಡಕ್ಕೆ ಬರಲು ಸಾಧ್ಯವಾಗಿಲ್ಲ. ವಿಶ್ವವಿದ್ಯಾಲಯ, ಕೆ-ಸೆಟ್ ಪರೀಕ್ಷೆಗಳನ್ನು ಮುಂದೂಡಿರುವಾಗ ಈ ಪರೀಕ್ಷೆಯನ್ನೂ ಮುಂದೂಡ ಬಹುದಿತ್ತು’ ಎಂದು ಹೇಳಿದರು.

ಐದು ವರ್ಷಗಳಿಂದ ಪರೀಕ್ಷೆ ನಡೆಸದ ನಿಗಮ, ಈಗ ಕೆಲವೇ ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸಿದೆ. ಅದರಲ್ಲೂ ಆರು ಹುದ್ದೆಗಳನ್ನು ಬ್ಯಾಕ್‌ಲಾಗ್ ಆಗಿ ಉಳಿಸಿರುವುದಕ್ಕೆ ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆಗೆ ನಿಗಮದ ಹಿರಿಯ ಅಧಿಕಾರಿಗಳಿಗೆ ಕರೆ ಮಾಡಿದರೆ, ಅವರು ಕರೆ ಸ್ವೀಕರಿಸಲಿಲ್ಲ.

ಮಲ್ಲಳ್ಳಿ ಜಲಪಾತದಲ್ಲಿ ಮುಳುಗಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಶಶಿಕುಮಾರ್

ದಿವ್ಯಾ

ಸೋಮವಾರಪೇಟೆ (ಕೊಡಗು): ಸಮೀಪದ ಮಲ್ಲಳ್ಳಿ ಜಲಪಾತ ವೀಕ್ಷಿಸಲು ಭಾನುವಾರ ಬಂದಿದ್ದ ಒಂದೇ ಕುಟುಂಬದ ಇಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮಾರುತಿ ಕಾರಿನಲ್ಲಿ 6 ಮಂದಿ ಜಲಪಾತ ವೀಕ್ಷಣೆಗೆ ಬಂದಿದ್ದರು. ಅದರಲ್ಲಿ ಸುಂಟಿಕೊಪ್ಪದ ರಾಮನ್ ಅವರ ಪುತ್ರ, ಬೆಂಗಳೂರಿನ ಇನ್ಫೊಸಿಸ್ ಉದ್ಯೋಗಿ ಶಶಿಕುಮಾರ್ (32) ಹಾಗೂ ರಾಮನ್ ಅವರ ಮೊಮ್ಮಗಳು, ಕುಶಾಲನಗರದ ಅಂತಿಮ ಪದವಿ ವಿದ್ಯಾರ್ಥಿನಿ ದಿವ್ಯಾ (20) ಮೃತಪಟ್ಟವರು. ಜಲಪಾತದ ಹೊಂಡದ ಸಮೀಪ ಕುಳಿತಿದ್ದ ದಿವ್ಯಾ, ಕಾಲು ಜಾರಿ ನೀರಿನಲ್ಲಿ ಮುಳುಗುತ್ತಿದ್ದರು. ಅವರನ್ನು ರಕ್ಷಿಸಲು ಹೋದ ಶಶಿಕುಮಾರ್ ಸಹ ನೀರಿನಲ್ಲಿ ಮುಳುಗಿದ್ದಾರೆ. ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಳಸ್ಪರ್ಶಿ ಅಧ್ಯಯನಕಾರ, ಮೆಚ್ಚಿನ ಗುರು

• ಕಾಶ್ಯಪ ಪರ್ಣಕುಟಿ

ಎಂ.ಎ.ಹೆಗಡೆ ದಂಟ್ಕಲ್

ನುಡಿನಮನ

ಕನ್ನಡ ನಾಡು ಕಂಡ ಬಹುಶ್ರುತ ವಿದ್ವಾಂಸರಲ್ಲಿ ಪ್ರೊ.ಎಂ.ಎ.ಹೆಗಡೆ ದಂಟ್ಕಲ್ ಒಬ್ಬರು. ಆಕರ್ಷಕ ಮಾತುಗಳಿಂದ ಎಲ್ಲರನ್ನೂ ತನ್ನೆಡೆಗೆ ಸೆಳೆಯುವ ಚುಂಬಕ ಶಕ್ತಿ ಅವರದು. ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದು ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿದ್ದರು. ಅವರು ಯಕ್ಷಗಾನ ಕ್ಷೇತ್ರದಲ್ಲಿ ಕಲಾವಿದರಿಗೆ, ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಗುರು ಆಗಿದ್ದವರು.

ಸಿದ್ದಾಪುರ ತಾಲ್ಲೂಕಿನ ಜೋಗಿನಮನೆ ಅವರ ಸ್ವಂತ ಊರಾಗಿದ್ದರೂ ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡ ಕಾರಣಕ್ಕೆ ಬೆಳೆದಿದ್ದು ಅಜ್ಜಿಮನೆ ದಂಟ್ಕಲ್‌ನಲ್ಲಿ. ಹೀಗಾಗಿ, ಅವರ ಹೆಸರಿನೊಂದಿಗೆ ಅಜ್ಜಿಯ ಊರಿನ ಹೆಸರು ಸೇರಿಕೊಂಡಿತು.

ವಿಚಿತ್ರ ಎಂದರೆ ಪ್ರಾಧ್ಯಾಪಕ ವೃತ್ತಿ ಸೇರಿದ ಸುಮಾರು ಹತ್ತು ವರ್ಷಗಳವರೆಗೂ ಸಾಹಿತ್ಯ ಕ್ಷೇತ್ರಕ್ಕೆ ಅವರ ಪರಿಚಯವೇ ಆಗಿರಲಿಲ್ಲ. ಕಾಲೇಜಿನಲ್ಲಿ ಬೋಧನೆ ಹೊರತಾಗಿ ಉಳಿದ ಸಮಯದಲ್ಲಿ ಸ್ವ-ಅಧ್ಯಯನದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುತ್ತಿದ್ದರು. ಪರಿಣಾಮವಾಗಿ ಕನ್ನಡ, ಇಂಗ್ಲಿಷ್, ಸಂಸ್ಕೃತ ಸಾಹಿತ್ಯಗಳ ತಳಸ್ಪರ್ಶಿ ಅಧ್ಯಯನ ಅವರಿಂದ ನಡೆದಿತ್ತು.

ಚಿಂತನ-ಮಂಥನದ ಮೂಲಕ ವಿದ್ವಾಂಸರ ವಲಯಕ್ಕೆ ಪದಾರ್ಪಣೆ ಮಾಡಿದ್ದರು. 70ರ ದಶಕದಲ್ಲಿ ಅವರು ಬರೆದ ಗ್ರಂಥವನ್ನು ಪ್ರಕಾಶಕರು ಮನ್ನಿಸಲಿಲ್ಲ. ‘ಭಾರತೀಯ ತತ್ವಶಾಸ್ತ್ರ ಪರಿಚಯ’ ಎಂಬ ಉದ್ಗ್ರಂಥವನ್ನು ಪ್ರಭಾಕರ ಜೋಶಿ ಅವರ ಜತೆ ಸೇರಿ ಪ್ರಕಟಿಸಿದ್ದರು. ನಂತರದ ದಿನಗಳಲ್ಲಿ ಅವರು ಬರೆದ ಎಲ್ಲ ಗ್ರಂಥಗಳು ನಿರಾಯಾಸವಾಗಿ ಪ್ರಕಟಗೊಂಡಿದ್ದು ಈಗ ಇತಿಹಾಸ.

ಭಾಷಾಶಾಸ್ತ್ರ ಬೋಧಿಸುವುದಕ್ಕಾಗಿ ‘ಅಲಂಕಾರತತ್ವ’ ಪುಸ್ತಕ ಪ್ರಕಟಿಸಿದರು. ಅದು ಶಿಕ್ಷಕರಿಗೂ ಸಹಕಾರಿ ಆಯಿತು. ಮಧುಸೂದನ ಸರಸ್ವತಿ ಅವರ ‘ಭಗವದ್ಭಕ್ತಿ ರಸಾಯನಂ’ ಎಂಬ ಕ್ಲಿಷ್ಟಕರ ಗ್ರಂಥವನ್ನು ಸರಳ ಕನ್ನಡಕ್ಕೆ ಅನುವಾದಿಸಿದ್ದು ಅವರ ಸೃಜನಶೀಲ ಪ್ರತಿಭೆಗೆ ಉದಾಹರಣೆ. ನವರಸಗಳೊಂದಿಗೆ ಹತ್ತನೇಯದಾಗಿ ಭಕ್ತಿರಸ ಸೇರುತ್ತದೆಂಬ ಅವರ ಪ್ರತಿಪಾದನೆ ಚೇತೋಹಾರಿ ಆಗಿದ್ದರ ಜತೆಗೆ ಕನ್ನಡ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ಎಂದು ರಂಗನಾಥ ಶರ್ಮ ಕೊಂಡಾಡಿದ್ದರು.

ಷೋಡಶ ಸಂಸ್ಕಾರಗಳ ಕುರಿತ ಅವರ ಚಿಂತನೆ, ವಿಶ್ಲೇಷಣೆಯ ‘ಹಿಂದೂ ಸಂಸ್ಕಾರಗಳು’ ಗ್ರಂಥದಲ್ಲಿ ಅಭಿವ್ಯಕ್ತವಾಗಿದೆ. ಸಂಸ್ಕಾರ ಯಾಂತ್ರಿಕವಾಗದೆ ಅರ್ಥಪೂರ್ಣವಾಗಿರಬೇಕು ಎಂಬುದನ್ನು ವೈಜ್ಞಾನಿಕ ವಿಶ್ಲೇಷಣೆಯೊಂದಿಗೆ ಪ್ರತಿಪಾದಿಸಿದ್ದಾರೆ.

ವಿದ್ವಾಂಸ ಬಿ.ಕೆ.ಮೋತಿಲಾಲ ಅವರ ಗ್ರಂಥವನ್ನು ‘ಶಬ್ದ ಮತ್ತು ಜಗತ್ತು’ ಎಂದು ಕನ್ನಡಕ್ಕೆ ಅನುವಾದಿಸಿ ವಿದ್ವಾಂಸರ ಸಾಲಿಗೆ ಸೇರ್ಪಡೆಯಾಗಿದ್ದರು. ಆದಿಶಂಕರರ ಬ್ರಹ್ಮಸೂತ್ರ ಭಾಷ್ಯದ ಮೊದಲ ನಾಲ್ಕು ಸೂತ್ರಗಳ ಅನುವಾದ, ವಿವರಣೆಯೊಂದಿಗೆ ‘ಪರಮಾನಂದಸುಧಾ’ ಎಂಬ ಪುಸ್ತಕ ಹೆಗಡೆಯವರನ್ನು ಅಗ್ರಪಂಕ್ತಿಗೆ ಏರಿಸಿತು.

ಕ್ಲಿಷ್ಟಕರ ವೇದಾಂತಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ವಿವರಿಸುವ ಕಲೆಯಲ್ಲಿ ಹೆಗಡೆ ಸಿದ್ಧಹಸ್ತರು. ಬಾಲ್ಯದಿಂದಲೇ ಯಕ್ಷಗಾನದ ಆಕರ್ಷಣೆ, ಸಹೋದರ ಮಾವ ದಂಟ್ಕಲ್ ಪಟೇಲರಿಂದ ಪ್ರೇರಣೆ, ಕೆರೆಮನೆ ಶಂಭು ಹೆಗಡೆ ಅವರ ಶಿಷ್ಯನಾದ ಪರಿಣಾಮ ವಿದ್ಯಾರ್ಥಿ ಆಗಿದ್ದಾಗಲೇ ರಂಗಪ್ರವೇಶಿಸಿದ್ದರು. ತಾಳಮದ್ದಲೆ ಅರ್ಥಧಾರಿಯಾಗಿ ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧಿ ಪಡೆದಿದ್ದರ ಜತೆಗೆ ಯಕ್ಷಗಾನ ಕಲೆಯ ಎಲ್ಲ ಅಂಗೋಪಾಂಗಗಳಲ್ಲಿ ಪ್ರಭುತ್ವ ಸಾಧಿಸಿದ್ದರು. ಯಕ್ಷಕವಿಯಾಗಿ, ಕಲಾವಿದರ ಪಾಲಿಗೆ ಯಕ್ಷಗುರುವಾಗಿ ಛಾಪು ಮೂಡಿಸಿದ ಕಲಾಶಕ್ತಿಗೆ ನಮನ.

ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಎಂ.ಎ. ಹೆಗಡೆ ನಿಧನ

ಒಂದನೇ ಪುಟದಿಂದ

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಜೋಗಿನ್ಮನೆಯ ಎಂ.ಎ. ಹೆಗಡೆ ಅವರು, ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಲಾ ಮತ್ತು ಪಿ.ಸಿ. ಜಾಬಿನ್ ವಿಜ್ಞಾನ ಕಾಲೇಜಿನಲ್ಲಿ 1971 ರಿಂದ 1973ರವರೆಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ಬಳಿಕ ಸಿದ್ದಾಪುರದ ಮಹಾತ್ಮ ಗಾಂಧಿ ಶತಾಬ್ದಿ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಹಾಗೂ ವಿಭಾಗದ ಮುಖ್ಯಸ್ಥರಾಗಿ 2004ರವರೆಗೆ ಕಾರ್ಯನಿರ್ವಹಿಸಿದರು. 2006ರವರೆಗೆ ಅದೇ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದರು. ಯಕ್ಷಗಾನದಲ್ಲಿ ವೇಷಧಾರಿ, ತಾಳಮದ್ದಲೆಯ ಅರ್ಥಧಾರಿ, ಸಂಶೋಧಕ, ವಿಮರ್ಶಕ ಮತ್ತು ಪ್ರಸಂಗಕರ್ತರಾಗಿ ಕೆಲಸ ಮಾಡಿದ್ದಾರೆ. ‘ಸೀತಾ ವಿಯೋಗ’, ತ್ರಿಶಂಕು ಚರಿತ್ರೆ’, ‘ರಾಜಾಕರಂಧಮ’ ಸೇರಿದಂತೆ ಹಲವು ಪ್ರಸಂಗಗಳನ್ನು ರಚಿಸಿದ್ದಾರೆ. 2013ರ ಮಾರ್ಚ್ ತಿಂಗಳಲ್ಲಿ ಶಿರಸಿಯಲ್ಲಿ ನಡೆದ ಎಂಟನೇ ಅಖಿಲ ಭಾರತ ಯಕ್ಷಗಾನ ಬಯಲಾಟ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಎರಡನೇ ಅವಧಿಗೆ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.-25032021-226095
CG-DL-E-25032021-226095

असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 1225] नई दिल्ली, बुधवार, मार्च 24, 2021/चैत्र 3, 1943
No. 1225] NEW DELHI, WEDNESDAY, MARCH 24, 2021/CHAITRA 3, 1943

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 24ನೇ ಮಾರ್ಚ್, 2021

ಎಸ್.ಒ.1323(ಇ)– ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿಸ್ತರಿಸಿರುವ ಜಮೀನುಗಳನ್ನು ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ನಂ.207 ರಲ್ಲಿ (ಸರ್ವೆ ನಂ.678/3, ನೀರುಬಾವಿ ಕೆಂಪಣ್ಣ ಬಡಾವಣೆ, ಹೆಬ್ಬಾಳ, ಬೆಂಗಳೂರು) ಕಿ.ಮೀ 16.8 ರಿಂದ ಕಿ.ಮೀ 58.3 ರವರೆಗೆ ರಸ್ತೆ ನಿರ್ಮಾಣ (ಅಗಲೀಕರಣ, ಎರಡು/ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (ii) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿತ್ತು.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಯವರು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ವಕೀಲರನ್ನಾಗಲಿ ಕರೆಯಿಸಿ, ಅವರು ಸಲ್ಲಿಸಿರುವ ಪ್ರತಿ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಸಂಬಂಧಿಸಿದಂತೆ ಇತರೆ ಅಂಶಗಳನ್ನು ಪರಿಶೀಲಿಸಿ ಸೂಕ್ತ ಎಂಬುದು ಕಂಡುಬಂದಲ್ಲಿ ಆಕ್ಷೇಪಣೆಗಳನ್ನು ಪುರಸ್ಕರಿಸಿ ಅಥವಾ ತಿರಸ್ಕರಿಸಿ ಆದೇಶಿಸಬಹುದಾಗಿರುತ್ತದೆ. ಹಾಗೆ ಸಕ್ಷಮ ಪ್ರಾಧಿಕಾರಿಯವರು ಮಾಡಲಾದ ಆದೇಶವು 3ಸಿ ಉಪಕಲಂ(2) ರಂತೆ ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರಿಗಳ ಕಛೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದಲ್ಲಿನ ಕೋಲಾರ ಜಿಲ್ಲೆಯ (ಸರ್ವೆ ನಂ.678/3, ನೀರುಬಾವಿ ಕೆಂಪಣ್ಣ ಬಡಾವಣೆ, ಹೆಬ್ಬಾಳ, ಬೆಂಗಳೂರು) ರಾಷ್ಟ್ರೀಯ ಹೆದ್ದಾರಿ ನಂ.ಎನ್ ಹೆಚ್–207 ರಲ್ಲಿ ಕಿ.ಮೀ. 16.8 ರಿಂದ ಕಿ.ಮೀ. 58.3 ರವರೆಗೆ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆ: ಕೋಲಾರ

ಕ್ರಮ. ಸಂಖ್ಯೆ	ಸ.ನಂ./ ಪ್ಲಾಟ್ ನಂ.	ಜಮೀನಿನ ತರಹೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ತಾಲ್ಲೂಕು: ಮಾಲೂರು					
ಗ್ರಾಮ: ಆಲಂಬಾಡಿ					
1	102	ಸಾಮಾನ್ಯ / ಸರ್ಕಾರಿ	ಖುಷ್ಕಿ	14,322	1.4322
2	106/1	ಖಾಸಗಿ	ಖುಷ್ಕಿ	1,933	0.1933
3	106/2	ಖಾಸಗಿ	ಖುಷ್ಕಿ	225	0.0225
4	107/10	ಖಾಸಗಿ	ಖುಷ್ಕಿ	305	0.0305
5	107/11	ಖಾಸಗಿ	ಖುಷ್ಕಿ	797	0.0797
6	107/4	ಖಾಸಗಿ	ಖುಷ್ಕಿ	673	0.0673
7	107/7	ಖಾಸಗಿ	ಖುಷ್ಕಿ	28	0.0028
8	107/8	ಖಾಸಗಿ	ಖುಷ್ಕಿ	1,112	0.1112
9	107/9	ಖಾಸಗಿ	ಖುಷ್ಕಿ	2,492	0.2492
10	112/1	ಖಾಸಗಿ	ಖುಷ್ಕಿ	1,415	0.1415
11	112/4	ಖಾಸಗಿ	ಖುಷ್ಕಿ	372	0.0372
12	114/2	ಖಾಸಗಿ	ಖುಷ್ಕಿ	461	0.0461
13	114/3	ಖಾಸಗಿ	ಖುಷ್ಕಿ	3,148	0.3148
14	114/5	ಖಾಸಗಿ	ಖುಷ್ಕಿ	1,209	0.1209
15	116/1	ಖಾಸಗಿ	ಖುಷ್ಕಿ	24	0.0024
16	117/1	ಖಾಸಗಿ	ಖುಷ್ಕಿ	609	0.0609
17	117/2	ಖಾಸಗಿ	ಖುಷ್ಕಿ	1,405	0.1405
18	117/3	ಖಾಸಗಿ	ಖುಷ್ಕಿ	1,501	0.1501
19	119/2	ಖಾಸಗಿ	ಖುಷ್ಕಿ	24	0.0024
20	119/4	ಖಾಸಗಿ	ಖುಷ್ಕಿ	70	0.0070
21	12	ಖಾಸಗಿ	ಖುಷ್ಕಿ	2,517	0.2517
22	120/1	ಖಾಸಗಿ	ಖುಷ್ಕಿ	530	0.0530
23	120/2	ಖಾಸಗಿ	ಖುಷ್ಕಿ	670	0.0670
24	120/3	ಖಾಸಗಿ	ಖುಷ್ಕಿ	900	0.0900
25	129	ಖಾಸಗಿ	ಖುಷ್ಕಿ	172	0.0172
26	13	ಖಾಸಗಿ	ಖುಷ್ಕಿ	9,769	0.9769
27	130	ಖಾಸಗಿ	ಖುಷ್ಕಿ	1,401	0.1401
28	158/1	ಸರ್ಕಾರಿ	ಕೆರೆ	42,715	4.2715
29	16	ಖಾಸಗಿ	ಖುಷ್ಕಿ	1,128	0.1128
30	17/1	ಖಾಸಗಿ	ಖುಷ್ಕಿ	1,571	0.1571
31	17/2	ಖಾಸಗಿ	ಖುಷ್ಕಿ	1,598	0.1598
32	17/3	ಖಾಸಗಿ	ಖುಷ್ಕಿ	747	0.0747
33	178/4	ಖಾಸಗಿ	ಖುಷ್ಕಿ	2,050	0.2050
34	178/6	ಖಾಸಗಿ	ಖುಷ್ಕಿ	953	0.0953
35	179/1	ಖಾಸಗಿ	ಖುಷ್ಕಿ	2,323	0.2323
36	179/2	ಖಾಸಗಿ	ಖುಷ್ಕಿ	92	0.0092
37	179/3	ಖಾಸಗಿ	ಖುಷ್ಕಿ	3,191	0.3191
38	180/2	ಖಾಸಗಿ	ಖುಷ್ಕಿ	2,990	0.2990
39	180/4	ಖಾಸಗಿ	ಖುಷ್ಕಿ	170	0.0170
40	181/1	ಖಾಸಗಿ	ಖುಷ್ಕಿ	1,470	0.1470
41	181/2	ಖಾಸಗಿ	ಖುಷ್ಕಿ	2,482	0.2482
42	181/3	ಖಾಸಗಿ	ಖುಷ್ಕಿ	2,656	0.2656
43	182/1	ಖಾಸಗಿ	ಖುಷ್ಕಿ	1,596	0.1596
44	182/12	ಖಾಸಗಿ	ಖುಷ್ಕಿ	341	0.0341
45	182/15	ಖಾಸಗಿ	ಖುಷ್ಕಿ	442	0.0442
46	182/17	ಖಾಸಗಿ	ಖುಷ್ಕಿ	642	0.0642
47	182/8A	ಖಾಸಗಿ	ಖುಷ್ಕಿ	418	0.0418
48	182/8B	ಖಾಸಗಿ	ಖುಷ್ಕಿ	4,779	0.4779
49	183/1	ಖಾಸಗಿ	ಖುಷ್ಕಿ	6,125	0.6125
50	183/3	ಖಾಸಗಿ	ಖುಷ್ಕಿ	554	0.0554
51	183/4	ಖಾಸಗಿ	ಖುಷ್ಕಿ	52	0.0052
52	184/1	ಖಾಸಗಿ	ಖುಷ್ಕಿ	134	0.0134
53	184/16	ಖಾಸಗಿ	ಖುಷ್ಕಿ	131	0.0131
54	184/2	ಖಾಸಗಿ	ಖುಷ್ಕಿ	238	0.0238
55	184/3	ಖಾಸಗಿ	ಖುಷ್ಕಿ	407	0.0407
56	184/4	ಖಾಸಗಿ	ಖುಷ್ಕಿ	405	0.0405
57	186/10	ಖಾಸಗಿ	ಖುಷ್ಕಿ	1,433	0.1433
58	186/2	ಖಾಸಗಿ	ಖುಷ್ಕಿ	49	0.0049
59	186/7	ಖಾಸಗಿ	ಖುಷ್ಕಿ	611	0.0611
60	186/8	ಖಾಸಗಿ	ಖುಷ್ಕಿ	5,750	0.5750
61	193/1	ಖಾಸಗಿ	ಖುಷ್ಕಿ	234	0.0234
62	193/2	ಖಾಸಗಿ	ಖುಷ್ಕಿ	3,269	0.3269
63	194/1	ಖಾಸಗಿ	ಖುಷ್ಕಿ	8,770	0.8770
64	194/2	ಖಾಸಗಿ	ಖುಷ್ಕಿ	2,167	0.2167
65	6/2	ಖಾಸಗಿ	ಖುಷ್ಕಿ	62	0.0062
ಗ್ರಾಮ: ಬರಗೂರು					
1	134	ಸರ್ಕಾರಿ	ಖುಷ್ಕಿ	93	0.0093
ಗ್ರಾಮ: ದೊಮ್ಮಲೂರು					
1	60 / 2	ಖಾಸಗಿ	ಖುಷ್ಕಿ	24	0.0024
2	64/2	ಖಾಸಗಿ	ಖುಷ್ಕಿ	862	0.0862
ಗ್ರಾಮ: ಜಗದೇನಹಳ್ಳಿ					
1	10	ಖಾಸಗಿ	ಖುಷ್ಕಿ	88	0.0088
2	100/2	ಖಾಸಗಿ	ಖುಷ್ಕಿ	636	0.0636
3	102	ಖಾಸಗಿ	ಖುಷ್ಕಿ	41	0.0041
4	108	ಖಾಸಗಿ	ಖುಷ್ಕಿ	93	0.0093
5	109/1	ಖಾಸಗಿ	ಖುಷ್ಕಿ	550	0.0550
6	109/4	ಖಾಸಗಿ	ಖುಷ್ಕಿ	405	0.0405
7	110/3	ಖಾಸಗಿ	ಖುಷ್ಕಿ	81	0.0081
8	111/1	ಸರ್ಕಾರಿ	ಖುಷ್ಕಿ	682	0.0682
9	112/1	ಖಾಸಗಿ	ಖುಷ್ಕಿ	526	0.0526
10	112/2	ಖಾಸಗಿ	ಖುಷ್ಕಿ	257	0.0257
11	113/1	ಖಾಸಗಿ	ಖುಷ್ಕಿ	818	0.0818
12	113/2A	ಖಾಸಗಿ	ಖುಷ್ಕಿ	491	0.0491
13	113/3	ಖಾಸಗಿ	ಖುಷ್ಕಿ	622	0.0622
14	113/6	ಖಾಸಗಿ	ಖುಷ್ಕಿ	151	0.0151
15	16/1	ಖಾಸಗಿ	ಖುಷ್ಕಿ	20	0.0020
16	17/1	ಖಾಸಗಿ	ಎನ್ಎಕೆ	240	0.0240
17	17/3	ಖಾಸಗಿ	ಖುಷ್ಕಿ	167	0.0167
18	17/5	ಖಾಸಗಿ	ಖುಷ್ಕಿ	167	0.0167
19	21/2	ಖಾಸಗಿ	ಖುಷ್ಕಿ	2,072	0.2072
20	22/3	ಖಾಸಗಿ	ಖುಷ್ಕಿ	1,006	0.1006
21	49/2	ಖಾಸಗಿ	ಖುಷ್ಕಿ	1,259	0.1259
22	49/4	ಖಾಸಗಿ	ಖುಷ್ಕಿ	1,260	0.1260
23	50/1	ಖಾಸಗಿ	ಎನ್‌ಎಕೆ	856	0.0856
24	50/2	ಖಾಸಗಿ	ಎನ್‌ಎಕೆ	1,023	0.1023
25	66	ಸರ್ಕಾರಿ	ಕೆರೆ	708	0.0708
26	78/1	ಖಾಸಗಿ	ಖುಷ್ಕಿ	6	0.0006
27	89	ಖಾಸಗಿ	ಖುಷ್ಕಿ	365	0.0365
28	90	ಖಾಸಗಿ	ಖುಷ್ಕಿ	158	0.0158
29	91/1	ಖಾಸಗಿ	ಖುಷ್ಕಿ	110	0.0110
30	91/2	ಖಾಸಗಿ	ಖುಷ್ಕಿ	61	0.0061
31	95/2	ಖಾಸಗಿ	ಖುಷ್ಕಿ	119	0.0119
32	95/3	ಖಾಸಗಿ	ಖುಷ್ಕಿ	345	0.0345
33	95/6	ಖಾಸಗಿ	ಖುಷ್ಕಿ	180	0.0180
34	96	ಖಾಸಗಿ	ಖುಷ್ಕಿ	520	0.0520
35	98	ಖಾಸಗಿ	ಖುಷ್ಕಿ	677	0.0677
ಗ್ರಾಮ: ಕೃಷ್ಣಪುರ					
1	14/3	ಖಾಸಗಿ	ತರಿ	217	0.0217
2	24	ಖಾಸಗಿ	ಖುಷ್ಕಿ	2,217	0.2217
ಗ್ರಾಮ: ಲಕ್ಕೂರು					
1	231/1	ಖಾಸಗಿ	ಖುಷ್ಕಿ	280	0.0280
2	231/2	ಖಾಸಗಿ	ಖುಷ್ಕಿ	281	0.0281
3	231/3	ಖಾಸಗಿ	ಖುಷ್ಕಿ	280	0.0280
4	233/2	ಖಾಸಗಿ	ಖುಷ್ಕಿ	523	0.0523
5	233/6	ಖಾಸಗಿ	ಖುಷ್ಕಿ	731	0.0731
6	238/2	ಖಾಸಗಿ	ಖುಷ್ಕಿ	101	0.0101
7	238/3	ಖಾಸಗಿ	ಖುಷ್ಕಿ	100	0.0100
8	238/4	ಖಾಸಗಿ	ಖುಷ್ಕಿ	100	0.0100
9	257/2	ಖಾಸಗಿ	ಖುಷ್ಕಿ	436	0.0436
10	257/4	ಖಾಸಗಿ	ಖುಷ್ಕಿ	436	0.0436
11	258/3	ಖಾಸಗಿ	ಖುಷ್ಕಿ	91	0.0091
12	259	ಸರ್ಕಾರಿ	ತೋಪು	233	0.0233
13	266	ಖಾಸಗಿ	ಖುಷ್ಕಿ	698	0.0698
14	267/1	ಖಾಸಗಿ	ಖುಷ್ಕಿ	513	0.0513
15	267/2	ಖಾಸಗಿ	ಖುಷ್ಕಿ	513	0.0513
16	292/2	ಖಾಸಗಿ	ಖುಷ್ಕಿ	12	0.0012
17	303/3	ಖಾಸಗಿ	ಖುಷ್ಕಿ	36	0.0036
18	306/1	ಖಾಸಗಿ	ಖುಷ್ಕಿ	1,199	0.1199
19	31	ಖಾಸಗಿ	ಖುಷ್ಕಿ	274	0.0274
20	322	ಖಾಸಗಿ	ಖುಷ್ಕಿ	583	0.0583
ಗ್ರಾಮ: ಪುರ					
1	130/1	ಖಾಸಗಿ	ಖುಷ್ಕಿ	273	0.0273
2	131/2	ಖಾಸಗಿ	ಖುಷ್ಕಿ	197	0.0197
3	131/3	ಖಾಸಗಿ	ಖುಷ್ಕಿ	197	0.0197
4	131/4	ಖಾಸಗಿ	ಖುಷ್ಕಿ	395	0.0395
5	132/2	ಖಾಸಗಿ	ಖುಷ್ಕಿ	12	0.0012
6	132/3	ಖಾಸಗಿ	ಖುಷ್ಕಿ	699	0.0699
7	133/1	ಖಾಸಗಿ	ಖುಷ್ಕಿ	276	0.0276
8	133/2	ಖಾಸಗಿ	ಖುಷ್ಕಿ	326	0.0326
9	133/3	ಖಾಸಗಿ	ಖುಷ್ಕಿ	24	0.0024
10	139/1	ಖಾಸಗಿ	ಖುಷ್ಕಿ	229	0.0229
11	139/2	ಖಾಸಗಿ	ಖುಷ್ಕಿ	226	0.0226
12	139/3	ಖಾಸಗಿ	ಖುಷ್ಕಿ	226	0.0226
13	139/4	ಖಾಸಗಿ	ಖುಷ್ಕಿ	226	0.0226
14	139/5	ಖಾಸಗಿ	ಖುಷ್ಕಿ	226	0.0226
15	139/6	ಖಾಸಗಿ	ಖುಷ್ಕಿ	226	0.0226
16	140/4	ಖಾಸಗಿ	ಖುಷ್ಕಿ	493	0.0493
17	144	ಸರ್ಕಾರಿ	ಖುಷ್ಕಿ	266	0.0266
ಗ್ರಾಮ: ಸಂಪನಗೆರೆ					
1	14/3	ಖಾಸಗಿ	ಖುಷ್ಕಿ	234	0.0234
2	15/1	ಖಾಸಗಿ	ಖುಷ್ಕಿ	114	0.0114
3	15/2	ಖಾಸಗಿ	ಖುಷ್ಕಿ	157	0.0157
4	15/4	ಖಾಸಗಿ	ಖುಷ್ಕಿ	3,339	0.3339
5	20/1	ಖಾಸಗಿ	ಖುಷ್ಕಿ	169	0.0169
6	20/2	ಖಾಸಗಿ	ಖುಷ್ಕಿ	620	0.0620
7	21/3	ಖಾಸಗಿ	ಖುಷ್ಕಿ	1,159	0.1159
8	23	ಖಾಸಗಿ	ಖುಷ್ಕಿ	697	0.0697
9	24/1	ಖಾಸಗಿ	ಖುಷ್ಕಿ	324	0.0324
10	24/3	ಖಾಸಗಿ	ಖುಷ್ಕಿ	1,165	0.1165
11	24/4	ಖಾಸಗಿ	ಖುಷ್ಕಿ	24	0.0024
12	25/5	ಖಾಸಗಿ	ಖುಷ್ಕಿ	311	0.0311
13	25/7	ಖಾಸಗಿ	ಖುಷ್ಕಿ	150	0.0150
14	27 / 4	ಖಾಸಗಿ	ಖುಷ್ಕಿ	176	0.0176
15	27/2	ಖಾಸಗಿ	ಖುಷ್ಕಿ	83	0.0083
16	27/6	ಖಾಸಗಿ	ಖುಷ್ಕಿ	111	0.0111
17	33/2	ಖಾಸಗಿ	ಖುಷ್ಕಿ	304	0.0304
18	33/3	ಖಾಸಗಿ	ಖುಷ್ಕಿ	1,170	0.1170
19	8/4	ಖಾಸಗಿ	ಖುಷ್ಕಿ	513	0.0513
20	8/6	ಖಾಸಗಿ	ಖುಷ್ಕಿ	78	0.0078
21	8/8	ಖಾಸಗಿ	ಖುಷ್ಕಿ	1,736	0.1736
22	8/9	ಖಾಸಗಿ	ಖುಷ್ಕಿ	2,195	0.2195
ಒಟ್ಟು				**199,768**	**19.9768**

[ಎಫ್.ನಂ.ಎನ್‌ಹೆಚ್‌ಎಐ/35012/1/ಪಿಐಯು–ಬಿಎನ್‌ಜಿ/ಎಲ್‌ಎ/ಎನ್‌ಹೆಚ್–207/2018–19/3ಎ2]
ರಾಜೇಶ್ ಗುಪ್ತ, ನಿರ್ದೇಶಕರು

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಫ್ಯಾಕ್ಸ್: 080–25536105
Email: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–287/2020–21/Call-3 ದಿನಾಂಕ: 17.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಮಾನವ ಸಂಪನ್ಮೂಲ ಒದಗಿಸುವ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl No.	Name of the Item	EMD (Rs.)
1	Providing MBA/BBM qualified and technically qualified Graphic Designer man power on contract basis to KMF for a period of Two years.	4,00,000/-

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ದಿನಾಂಕ 24.04.2021 ರಂದು ಮಧ್ಯಾಹ್ನ 3.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಸಿದ್ದರಾಮನಹುಂಡಿಯಲ್ಲಿ ಉದ್ಘಾಟನೆಗೆ ಸಜ್ಜಾಗಿರುವ ಕೋದಂಡರಾಮ ಮಂದಿರ

ಸಿದ್ದರಾಮನಹುಂಡಿ: ರಾಮ ಮಂದಿರ ಉದ್ಘಾಟನೆ ಇಂದು

ಮೈಸೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿ ಸೋಮವಾರ (ಏ.19) ‘ಕೋದಂಡರಾಮ ಮಂದಿರ’ದ ಉದ್ಘಾಟನೆ ನಡೆಯಲಿದೆ.

ಸುಮಾರು ನೂರು ವರ್ಷದಷ್ಟು ಹಳೆಯದಾದ ಈ ಮಂದಿರವನ್ನು ಸಿದ್ದರಾಮಯ್ಯ ಅವರ ಕುಟುಂಬದವರು ಗ್ರಾಮಸ್ಥರೊಂದಿಗೆ ಸೇರಿ ಜೀರ್ಣೋದ್ಧಾರ ಮಾಡಿದ್ದಾರೆ.

‘ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸಿದ್ದರಾಮಯ್ಯ ಅವರು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ. ಗ್ರಾಮಸ್ಥರೇ ಸರಳವಾಗಿ ದೇಗುಲ ಉದ್ಘಾಟಿಸಲಿದ್ದಾರೆ. ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹಾಗೂ ಇವರ ತಾಯಿ ಪಾರ್ವತಮ್ಮ ಕಾರ್ಯಕ್ರಮದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ’ ಎಂದು ಮೂಲಗಳು ತಿಳಿಸಿವೆ.

Council of Scientific and Industrial Research
NATIONAL AEROSPACE LABORATORIES
P.B. No. 1779, HAL Airport Road, Kodihalli, Bengaluru - 560 017, India.
080-25086046
ISO:9001:2008 Certified

NOTICE INVITING TENDER FOR PROJECT BASED MANPOWER AGREEMENT-6 CO-TERMINUS WITH THE PROJECTS AT VARIOUS DIVISIONS OF CSIR-NAL, BENGALURU

No.CSIR-NAL/PBMA-6/2021-23/S-VI April 19, 2021

CSIR-National Aerospace Laboratories(CSIR-NAL), Bengaluru, a constituent unit of CSIR, New Delhi, under the administrative control of Ministry of Science & Technology, Govt. of India is a premier R&D laboratory in the area of Aerospace. CSIR-NAL invites sealed tenders from Bengaluru based, renowned, experienced, well established and registered agencies/organizations for providing manpower under Project Based Manpower Agreement -6 co-terminus with the Projects at various Divisions of CSIR-NAL, Bengaluru.

For further details, the interested agencies are requested to visit our website **www.nal.res.in.**The tender documents completed in all respects may be dropped in the quotation box on or before 26.04.2021 till 10.00 AM. The tenders shall be opened at 11.00 AM on 26.04.2021.

The Director, CSIR-NAL, Bengaluru reserves the right to accept or reject any or all the prospective tenders in full or part thereof without assigning any reason whatsoever and his decision on all matters in this regard shall be final and binding.

Sd/-
Controller of Administration

ಬಿರುಗಾಳಿ ಮಳೆಗೆ ಧರೆಗೆ ಉರುಳಿದ ಮರಗಳು: ತೆಂಗಿನಮರಗಳಿಗೆ ಸಿಡಿಲು

ವಿವಿಧೆಡೆ ಗುಡುಗು, ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಗುಡುಗು ಸಹಿತ ಮಳೆಯಾಗಿದ್ದು, ಕೆಲವೆಡೆ ಸಿಡಿಲು ಬಡಿದು ಮರಗಳಿಗೆ ಹಾನಿಯಾಗಿದೆ.

ಶಿವಮೊಗ್ಗ ನಗರದ ಪಾರ್ಕ್ ಬಡಾವಣೆಯ ಮೊದಲನೇ ತಿರುವಿನಲ್ಲಿರುವ ಖಾಸಗಿ ಹಾಸ್ಟೆಲ್ ಕಟ್ಟಡದಲ್ಲಿದ್ದ ತೆಂಗಿನ ಮರಕ್ಕೆ ಸಿಡಿಲು ಬಡಿದ ಪರಿಣಾಮ ಮರವು ಧಗ ಧಗ ಹೊತ್ತಿ ಉರಿದಿದೆ.

ಸಂಜೆ ವೇಳೆಗೆ ಗುಡುಗು ಸಹಿತ ಗಾಳಿಯೊಂದಿಗೆ ಮಳೆ ಆರಂಭವಾದಾಗ ಸಿಡಿಲು ತೆಂಗಿನ ಮರದ ಸುಳಿಗೆ ಬಡಿದಿದೆ. 10 ನಿಮಿಷ ಬೆಂಕಿ ಹೊತ್ತಿ ಸ್ವಲ್ಪ ಹೊತ್ತು ಉರಿಯಿತು. ಅಗ್ನಿಶಾಮಕ ದಳದವರು ಬೆಂಕಿ ನಂದಿಸಿದ್ದಾರೆ. ಭಾನುವಾರವಾದ ಕಾರಣ ಹಾಸ್ಟೆಲ್‌ನಲ್ಲಿ ಕೆಲವೇ ವಿದ್ಯಾರ್ಥಿಗಳು ಇದ್ದರು. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಶಿವಮೊಗ್ಗದಲ್ಲಿ ಒಂದು ತಾಸು ಮಳೆಯಾಗಿದ್ದು, ಶಿಕಾರಿಪುರ, ಶಿರಾಳಕೊಪ್ಪ ಭಾಗದಲ್ಲಿ ಗುಡುಗು, ಆಲಿಕಲ್ಲು ಸಹಿತ ಜೋರು ಮಳೆಯಾಗಿದೆ. ಹೊಸನಗರ, ತೀರ್ಥಹಳ್ಳಿಯಲ್ಲಿ ಬೆಳಿಗ್ಗೆಯಿಂದ ಮೋಡಕವಿದ ವಾತಾವರಣವಿದ್ದು, ಸಂಜೆ ವೇಳೆ ಸಾಧಾರಣ ಮಳೆ ಸುರಿದಿದೆ. ಕೋಣಂದೂರು ಸುತ್ತಮುತ್ತ ಕೂಡ ಮಳೆಯಾಗಿದೆ. ಸಾಗರದಲ್ಲೂ ಗುಡುಗು, ಗಾಳಿ ಸಹಿತ ಮಳೆ ಸುರಿದಿದೆ.

ದಾವಣಗೆರೆ ನಗರ ಹಾಗೂ ನ್ಯಾಮತಿಯಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಿದೆ.

ಕೊಡಗಿನ ಗೋಣಿಕೊಪ್ಪಲು, ತಿತಿಮತಿ, ಆನೆಚೌಕೂರು, ದೇವರಪುರ, ಪಾಲಿಬೆಟ್ಟ, ಹಾತೂರು ಭಾಗದಲ್ಲಿ ಗುಡುಗು ಸಹಿತ ಉತ್ತಮ ಮಳೆ ಸುರಿದಿದೆ. ಕಳೆದ ಮೂರು ದಿನಗಳಿಂದ ಈ ಭಾಗದಲ್ಲಿ ಮಳೆ ಬೀಳುತ್ತಿದ್ದು, ವಾತಾವರಣ ತಂಪಾಗಿದೆ.

ಚಾಮರಾಜನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಶನಿವಾರ ತಡ ರಾತ್ರಿ ಗುಡುಗು ಮಿಂಚು ಸಹಿತ ಉತ್ತಮ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ವಿಜಯನಗರ, ಹುಬ್ಬಳ್ಳಿ-ಧಾರವಾಡ ಸೇರಿದಂತೆ ಕೆಲವೆಡೆ ಗುಡುಗು ಸಹಿತ ಮಳೆಯಾಗಿದೆ. ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ತಳಕಲ್ಲು ಗ್ರಾಮದಲ್ಲಿ ಸಿಡಿಲು ಬಡಿದು ಆಕಳು ಮೃತಪಟ್ಟಿದೆ.

ಮುಂಡಗೋಡ ಪಟ್ಟಣದಲ್ಲೂ ತೆಂಗಿನಮರಕ್ಕೆ ಸಿಡಿಲು ಬಡಿದು ಮರ ಹೊತ್ತಿ ಉರಿಯಿತು. ಶಿರಸಿಯಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಕೊಡಗು ಜಿಲ್ಲೆ ನಾಪೋಕ್ಲು ಬಳಿಯ ಬೇತು ಗ್ರಾಮದ ರಸ್ತೆ ಜಲಾವೃತಗೊಂಡಿರುವುದು

ಬಣವೆ ಭಸ್ಮ

ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲೂ ಮಳೆಯಾಗಿದೆ. ಸಮೀಪದ ಮಲಕಾಪುರ ಗ್ರಾಮದಲ್ಲಿ ಸಿಡಿಲು ಬಡಿದು ಮೇವಿನ ಬಣವೆ ಭಸ್ಮವಾಯಿತು. ಜೋರಾಗಿ ಗಾಳಿ ಬೀಸಿದ ಪರಿಣಾಮ ಅಲ್ಲಲ್ಲಿ ಮನೆಗಳ ಹೆಂಚು ಹಾರಿ ಹೋದರೆ, ಬಣವೆಗಳಿಗೂ ಹಾನಿಯಾಯಿತು.

ಮಾವಿನ ತೋಟಕ್ಕೆ ಹಾನಿ

ವಿಜಯನಗರ ಜಿಲ್ಲೆಯ ಹರಪನಹಳ್ಳಿಯಲ್ಲಿ ಬಿರುಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ. ಬಿರುಗಾಳಿ ಮಳೆಗೆ ಮರಗಳು ಧರೆಗೆ ಉರುಳಿದ್ದು, ಕೆಲ ಮನೆಗಳ ತಗಡಿನ ಶೀಟ್‌ಗಳು ಹಾರಿಹೋಗಿವೆ. ಅನಂತನಹಳ್ಳಿಯ ರೈತ ವಿರೂಪಾಕ್ಷಪ್ಪ ಅವರ ಮಾವಿನ ತೋಟದಲ್ಲಿ ಮಾವಿನಹಣ್ಣುಗಳು ಉದುರಿದ್ದು, ಅಪಾರ ನಷ್ಟವಾಗಿದೆ.

ಕರಾವಳಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ. ಗುಡುಗು, ಸಿಡಿಲಿನೊಂದಿಗೆ ಮಳೆ ಸುರಿದಿದೆ.

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿ ಅರ್ಧ ಗಂಟೆ ಮಳೆ ಸುರಿಯಿತು. ಹುಣಸೇಹಳ್ಳಿ ಬಳಿ ವಿದ್ಯುತ್ ತಂತಿಯ ಮೇಲೆ ಮರ ಬಿದ್ದು, ಶೃಂಗೇರಿ, ಜಯಪುರ, ಬಾಳೆಹೊನ್ನೂರಿನಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಕೊಪ್ಪ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ತುಂತುರು ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಸುಬ್ರಹ್ಮಣ್ಯದಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರದ ಸುತ್ತ ಉತ್ತಮ ಮಳೆ ಸುರಿದಿದೆ.

ಸಾರಿಗೆ ಸಿಬ್ಬಂದಿ ಮುಷ್ಕರ; ನಾಲ್ವರು ಅಮಾನತು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮುಷ್ಕರ ನಿರತ ಸಾರಿಗೆ ಸಂಸ್ಥೆ ಸಿಬ್ಬಂದಿ ಕರ್ತವ್ಯಕ್ಕೆ ಬರದಂತೆ ವಾಟ್ಸ್‌ಆ್ಯಪ್‌ನಲ್ಲಿ ಪ್ರಚೋದನಕಾರಿ ಸಂದೇಶ ಕಳುಹಿಸಿದ ಆರೋಪದ ಮೇಲೆ ನಾಲ್ವರು ಸಿಬ್ಬಂದಿಯನ್ನು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಮಾನತು ಮಾಡಿದೆ.

ಹುಬ್ಬಳ್ಳಿ ಗ್ರಾಮಾಂತರ 1ನೇ ಘಟಕದ ಸಹಾಯಕ ಲೆಕ್ಕಿಗ ಶ್ರೀಹರಿ ಮತ್ತು ಚಾಲಕ ಎಂ.ಕೆ. ಮದ್ನೂರ, ನವಲಗುಂದ ಘಟಕದ ಚಾಲಕ ದೇವರೆಡ್ಡಿ ಹೆಬಸೂರ ಮತ್ತು ನಿರ್ವಾಹಕ ಉಮೇಶ ಹಿರೇಮಠ ಅಮಾನತುಗೊಂಡಿರುವ ಸಿಬ್ಬಂದಿ.

ಮುಷ್ಕರ ನಿರತ ಅನೇಕ ಸಿಬ್ಬಂದಿ ಸ್ವಯಂಪ್ರೇರಿತವಾಗಿ ಕೆಲಸಕ್ಕೆ ಬರುವ ಇಚ್ಛೆ ವ್ಯಕ್ತಪಡಿಸಿದ್ದರು. ಆದರೆ, ಕೊನೆಯ ಗಳಿಗೆಯಲ್ಲಿ ಹಿಂದೇಟು ಹಾಕಿದ್ದರು. ಅನುಮಾನ ಬಂದು ಕಾರಣ ಹುಡುಕಿದಾಗ ಸಂಸ್ಥೆಯ ಕೆಲ ಸಿಬ್ಬಂದಿ ಇದರ ಹಿಂದಿರುವ ಮಾಹಿತಿ ದೊರಕಿತ್ತು. ಜಾಡು ಹಿಡಿದು ಹೊರಟಾಗ ವಾಟ್ಸ್‌ಆ್ಯಪ್‌ನಲ್ಲಿ ಸಿಬ್ಬಂದಿಗೆ ಕೆಲಸಕ್ಕೆ ಹಾಜರಾಗದಂತೆ ಪ್ರಚೋದನಕಾರಿ ಸಂದೇಶ ಕಳುಹಿಸುವ ಮಾಹಿತಿ ದೊರೆಯಿತು ಎಂದು ಹುಬ್ಬಳ್ಳಿ ಗ್ರಾಮೀಣ ವಿಭಾಗದ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ ಹೇಳಿದರು.

ಸಂಸ್ಥೆಯ ಕೆಲ ಸಿಬ್ಬಂದಿ ವಾಟ್ಸ್‌ಆ್ಯಪ್ ಗ್ರುಪ್ ರಚಿಸಿಕೊಂಡಿದ್ದು, ಅದರಲ್ಲಿ ಶ್ರೀಹರಿ ಪ್ರಚೋದನಕಾರಿ ಸಂದೇಶಗಳನ್ನು ಕಳುಹಿಸಿದ್ದ. ಅವುಗಳನ್ನು ಉಳಿದವರು ಮತ್ತೆ ಹಲವರಿಗೆ ಕಳುಹಿಸಿದ್ದಾರೆ. ಇದರಿಂದ ನಿಷ್ಠಾವಂತ ಸಿಬ್ಬಂದಿ ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದರು. ಕಾನೂನು ಬಾಹಿರ ಮುಷ್ಕರಕ್ಕೆ ಕುಮ್ಮಕ್ಕು ನೀಡಿರುವ ಕುರಿತು ಸಿಬ್ಬಂದಿ ಅಮಾನತುಗೊಳಿಸಲಾಗಿದೆ. ಹಾಗೂ ಇನ್ನೂ ಹಲವಾರು ವಾಟ್ಸ್‌ಆ್ಯಪ್ ಗುಂಪುಗಳಿದ್ದು, ಅವುಗಳಲ್ಲಿ ಬಹಳಷ್ಟು ಸಿಬ್ಬಂದಿ ಸಕ್ರಿಯವಾಗಿರುವುದು ತಿಳಿದು ಬಂದಿದೆ. ಇದರ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ ಎಂದರು.

ಬಸ್ಸಿಗೆ ಕಲ್ಲು ತೂರಾಟ: ಚಾಲಕನ ಕಣ್ಣಿಗೆ ಗಾಯ

ಹಿರೇಕೆರೂರ(ಹಾವೇರಿ): ತಾಲ್ಲೂಕಿನ ಗುಂಡಗಟ್ಟಿ ಕ್ರಾಸ್ ಸಮೀಪ ಭಾನುವಾರ ಅಪರಿಚಿತ ವ್ಯಕ್ತಿ ಕಲ್ಲು ತೂರಿದ್ದರಿಂದ ಮಾಸೂರು ಕಡೆಗೆ ಹೊರಟಿದ್ದ ಬಸ್‌ನ ಮುಂದಿನ ಗಾಜು ಒಡೆದಿದೆ. ಚಾಲಕ ಎಸ್.ಎಂ.ದೊಡ್ಡಮನಿ ಅವರ ಕಣ್ಣಿಗೆ ಗಾಜುಪುಡಿ ಸಿಡಿದು ಗಾಯಗೊಂಡಿದ್ದಾರೆ.

ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಗುವುದು ಎಂದು ಇಲ್ಲಿನ ಘಟಕ ವ್ಯವಸ್ಥಾಪಕ ಪ್ರಶಾಂತ ಪಿ. ತಿಳಿಸಿದ್ದಾರೆ.

ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸ್ಥಳೀಯ ಘಟಕದಲ್ಲಿ 28 ಚಾಲಕ ಹಾಗೂ ನಿರ್ವಾಹಕರು ಕರ್ತವ್ಯಕ್ಕೆ ಹಾಜರಾಗಿದ್ದರು. ಗ್ರಾಮೀಣ ಭಾಗಕ್ಕೆ ಬಸ್ ಸಂಚಾರ ಆರಂಭಿಸಲಾಗಿತ್ತು.

ಆರೋಪಿಗಳ ಬಂಧನ

ಜಮಖಂಡಿ(ಬಾಗಲಕೋಟೆ): ವಾಯವ್ಯ ಸಾರಿಗೆ ಸಂಸ್ಥೆ ಚಾಲಕ ನಬಿ ರಸೂಲ್ ಆವಟಿ ಅವರನ್ನು ಕಲ್ಲು ಹೊಡೆದು ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಇಬ್ಬರು ಆರೋಪಿಗಳನ್ನು ಶನಿವಾರ ರಾತ್ರಿ ಬಂಧಿಸಲಾಗಿದೆ.

ಜಮಖಂಡಿ ಘಟಕದ ಚಾಲಕರಾದ ಮನೋಹರ ಐಹೊಳೆ ಹಾಗೂ ಬಸವರಾಜ ಪೂಜಾರಿ ಬಂಧಿತರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ವಿಶೇಷ ತಂಡ ಈಗಾಗಲೇ ಐವರನ್ನು ಬಂಧಿಸಿದೆ.

₹ 72 ಲಕ್ಷ ಲಂಚ ಪ್ರಕರಣ ಸಿಬಿಐನಿಂದ ಇಬ್ಬರ ಬಂಧನ

ನವದೆಹಲಿ (ಪಿಟಿಐ): ₹ 72 ಲಕ್ಷ ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ, ಭಾನುವಾರ ಇಬ್ಬರನ್ನು ಬಂಧಿಸಿದೆ. ಕೇಂದ್ರ ಗಣಿ ಸುರಕ್ಷತೆ ನಿರ್ದೇಶನಾಲಯದ (ಡಿಜಿಎಂಎಸ್) ಉಪ ಪ್ರಧಾನ ನಿರ್ದೇಶಕ ಅರವಿಂದ್ ಕುಮಾರ್ ಅವರೂ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.



ನೇಮಕಾತಿಯಲ್ಲಿ ನಿರ್ದಿಷ್ಟ ವ್ಯಕ್ತಿಗಳ ಪರವಾಗಿ ಸಂದರ್ಶನ ಮಂಡಳಿ ಸದಸ್ಯರ ಮೇಲೆ ಪ್ರಭಾವ ಬೀರಲು ಸಂಚು ನಡೆದಿತ್ತು ಎನ್ನಲಾಗಿದೆ. ಈ ಸಂಬಂಧ ಬಿಹಾರದ ಲಖಿಸರಾಯ್‌ನಲ್ಲಿ ಸಿಬಿಐ ಅಧಿಕಾರಿಗಳು ತ್ರಿಲೋಕಿ ನಾಥ್ ಸಿಂಗ್ ಮತ್ತು ಅರವಿಂದ್ ಕುಮಾರ್ ಅವರ ಸಂಬಂಧಿ ಕೈಲಾಶ್ ಮಂಡಲ್ ಎಂಬವರನ್ನು ಬಂಧಿಸಿದರು.

ಇಬ್ಬರು ಆರೋಪಿತ ಅಧಿಕಾರಿ ಪರವಾಗಿ ಲಂಚದ ಮೊದಲ ಕಂತಾಗಿ ₹ 35 ಲಕ್ಷ ಪಡೆಯುತ್ತಿದ್ದರು. ಮ್ಯಾನೇಜರ್ ಸ್ಥಾನಕ್ಕೆ ಕಂಪ್ಯೂಟರ್ ಆಧರಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೌಖಿಕ ಪರೀಕ್ಷೆಗೆ ಅರ್ಹತೆ ಪಡೆದಿದ್ದ ಕೆಲವರಿಗೆ ಕೆಲಸ ಮಾಡಿಸಿಕೊಡಲು ಅರವಿಂದ ಕುಮಾರರ್ ಸಂಚು ನಡೆಸಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದರು.

ಸಂದರ್ಶನ ಮಂಡಳಿ ಸದಸ್ಯರ ಮೇಲೆ ಪ್ರಭಾವ ಬೀರಲು ಪ್ರತಿ ಅಭ್ಯರ್ಥಿಯಿಂದ ₹ 1.5 ಲಕ್ಷ ಸಂಗ್ರಹಿಸಲಾಗಿತ್ತು. ಸಿಂಗ್ ಅವರು ಶಿಫಾರಸು ಮಾಡಿದ್ದ 48 ಅಭ್ಯರ್ಥಿಗಳಿಂದ ₹ 72 ಲಕ್ಷ ಸಂಗ್ರಹಿಸಲಾಗಿತ್ತು ಎಂದು ವಿವರಿಸಿದ್ದಾರೆ.

ಮಾರ್ಚ್‌ಗೆ 25 ಲಕ್ಷ ಮನೆಗಳಲ್ಲಿ ನಲ್ಲಿ

ನವದೆಹಲಿ: ಕರ್ನಾಟಕದಲ್ಲಿರುವ ಗ್ರಾಮೀಣ ಪ್ರದೇಶದ 25 ಲಕ್ಷ ಕುಟುಂಬಗಳಿಗೆ 'ಜಲಜೀವನ್ ಮಿಷನ್' ಅಡಿ 2022ರ ಮಾರ್ಚ್ ಅಂತ್ಯದೊಳಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ತಿಳಿಸಿದೆ.

ರಾಜ್ಯದಲ್ಲಿರುವ ಅಂದಾಜು 91.19 ಲಕ್ಷ ಗ್ರಾಮೀಣ ಕುಟುಂಬಗಳ ಪೈಕಿ ಈಗಾಗಲೇ 28.44 ಲಕ್ಷ (ಶೇ 31.20) ಕುಟುಂಬಗಳ ಮನೆಗಳಿಗೆ ನೇರವಾಗಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಎಂದು 'ಜಲಜೀವನ್ ಮಿಷನ್' ಕುರಿತು ಕೇಂದ್ರ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಆಯೋಜಿಸಿದ್ದ ವಿವಿಧ ರಾಜ್ಯಗಳ ಪ್ರಸಕ್ತ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಸಂಬಂಧದ ಚರ್ಚೆಯ ವೇಳೆ ಕರ್ನಾಟಕ ಸರ್ಕಾರ ತಿಳಿಸಿದೆ.

ಇದುವರೆಗೆ ರಾಜ್ಯದ 23 ಗ್ರಾಮ ಪಂಚಾಯ್ತಿಗಳು ಹಾಗೂ 676 ಗ್ರಾಮಗಳು ಹರ್ ಘರ್ ಜಲ್ (ಪ್ರತಿ ಮನೆಗೆ ನೀರು) ಘೋಷಣೆಗೆ ಒಳಗಾಗಿವೆ. ಶೇ 95ರಷ್ಟು ಶಾಲೆ, ಅಂಗನವಾಡಿ, ಶೇ 84ರಷ್ಟು ವಸತಿ ಶಾಲೆಗಳು, ಶೇ 91ರಷ್ಟು ಗ್ರಾಮ ಪಂಚಾಯ್ತಿಗಳು, ಶೇ 92ರಷ್ಟು ಆರೋಗ್ಯ ಕೇಂದ್ರಗಳ ಕಟ್ಟಡಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಎಂದು ರಾಜ್ಯ ವಿವರಿಸಿದೆ.

ಯೋಜನೆ ಅಡಿ ಪ್ರಸಕ್ತ ವರ್ಷದಲ್ಲಿ ಬರಪೀಡಿತ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಟುಂಬಗಳೇ ಅಧಿಕ ಸಂಖ್ಯೆಯಲ್ಲಿರುವ 17,111 ಗ್ರಾಮಗಳ ಮನೆ ಮನೆಗೆ ಹಾಗೂ ರಾಜ್ಯದ 30 ರಾಜ್ಯಗಳ ಪೈಕಿ ಕನಿಷ್ಠ ಎರಡು ಜಿಲ್ಲೆಗಳ ಎಲ್ಲ ಗ್ರಾಮೀಣ ಪ್ರದೇಶಗಳ ಶೇ 100ರಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ದೊರಕಿಸಲಾಗುವುದು ಎಂದೂ ರಾಜ್ಯ ಹೇಳಿದೆ.

2019ರಲ್ಲಿ ಆರಂಭವಾಗಿರುವ ಯೋಜನೆ ಅಡಿ ಕಳೆದ ವರ್ಷ ರಾಜ್ಯಕ್ಕೆ ₹ 1,189 ಕೋಟಿ ಮಂಜೂರು ಮಾಡಿದ್ದ ಕೇಂದ್ರ, 2021-22ನೇ ಸಾಲಿನಲ್ಲಿ ₹ 3,000 ಕೋಟಿ ಒದಗಿಸಲಿದೆ. ಗ್ರಾಮೀಣ ಕುಟುಂಬದ ಪ್ರತಿ ವ್ಯಕ್ತಿಗೆ ನಿತ್ಯ 55 ಲೀಟರ್ ನೀರು ಒದಗಿಸುವ ಈ ಯೋಜನೆ 2024ಕ್ಕೆ ಕೊನೆಗೊಳ್ಳಲಿದೆ.

ಜಲಶಕ್ತಿ ಸಚಿವಾಲಯ ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದ ರಾಷ್ಟ್ರೀಯ ಸಮಿತಿಯು ರಾಜ್ಯಗಳ ವಾರ್ಷಿಕ ಕ್ರಿಯಾ ಯೋಜನೆ ಪರಿಶೀಲಿಸಿ, ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಆಯಾ ರಾಜ್ಯಗಳಿಗೆ ಸಲಹೆ ನೀಡಿದೆ.

ಹಾಸಿಗೆ ಸಿಗದೆ ಪರದಾಟ: ಮನೆಯಲ್ಲಿಯೇ ಆರೈಕೆ

ರಾತ್ರಿಯಿಡಿ ಕಾದ ಕಸ್ತೂರಿ ಶಂಕರ್ ಕುಟುಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖ್ಯಾತ ಗಾಯಕಿ ಕಸ್ತೂರಿ ಶಂಕರ್ ಅವರು ಕೊರೊನಾ ಸೋಂಕಿತ ತಮ್ಮ ಪತಿಗೆ ಚಿಕಿತ್ಸೆ ಒದಗಿಸಲು ಸರ್ಜಾಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಆವರಣದಲ್ಲಿ ಇಡೀ ರಾತ್ರಿ ಕಾದು, ಅಲ್ಲಿ ದಾಖಲಿಸಿಕೊಳ್ಳದ ಕಾರಣ ಪತಿಯನ್ನು ಮುಂಜಾನೆ ವಾಪಸ್ ಮನೆಗೆ ಕರೆತಂದಿದ್ದಾರೆ.

ಅವರ ಪುತ್ರ ಮತ್ತು ಮೊಮ್ಮಗ ಕೂಡ ಕೋವಿಡ್ ಪೀಡಿತರಾಗಿದ್ದು, ಅವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರ ಸಂಪರ್ಕದಲ್ಲಿದ್ದ ಶಂಕರ್ ಅವರು ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದರು. ಶನಿವಾರ ರಾತ್ರಿ 8 ಗಂಟೆಗೆ ಅವರಿಗೆ ಸೋಂಕು ತಗುಲಿರುವುದು ದೃಢಪಟ್ಟಿತು. ಅವರ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಇಳಿಕೆಯಾದ ಕಾರಣ ಕುಟುಂಬದ ಸದಸ್ಯರು ಆಸ್ಪತ್ರೆಗೆ ದಾಖಲಿಸಲು ನಿರ್ಧರಿಸಿದರು. ಬಿಬಿಎಂಪಿ ಸಿಬ್ಬಂದಿ ಸರ್ಜಾಪುರದ ಕೊಲಂಬಿಯಾ ಆಸ್ಪತ್ರೆಯಲ್ಲಿ ಹಾಸಿಗೆ ಹಂಚಿಕೆಯಾಗಿದೆ ಎಂಬ ಸಂದೇಶ ರವಾನಿಸಿದ ಕಾರಣ ಅಲ್ಲಿಗೆ ಕರೆದೊಯ್ದರು. ಆದರೆ, ಹಾಸಿಗೆಗಳು ಭರ್ತಿಯಾಗಿವೆ ಎಂಬ ಕಾರಣ ನೀಡಿ, ಆಸ್ಪತ್ರೆಯವರು ದಾಖಲಿಸಿಕೊಳ್ಳಲು ನಿರಾಕರಿಸಿದರು. ಸದ್ಯ ಅವರ ಪತಿಗೆ ಮನೆಯಲ್ಲಿಯೇ ಆರೈಕೆ ಮಾಡಲಾಗುತ್ತಿದೆ.

ಕಸ್ತೂರಿ ಶಂಕರ್

'ಕುಟುಂಬದ ಇಬ್ಬರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಶಂಕರ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದಲ್ಲಿ ಶುಲ್ಕ ಅಧಿಕವಾಗುತ್ತದೆ ಎಂಬ ಕಾರಣ ಅವರನ್ನು ಆಸ್ಪತ್ರೆಗೆ ಸೇರಿಸಲು ಮುಂದಾಗಿರಲಿಲ್ಲ. ಆದರೆ, ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಇಳಿಕೆಯಾದ ಕಾರಣ ಆಸ್ಪತ್ರೆಗೆ ದಾಖಲಿಸಲು ನಿರ್ಧರಿಸಿದೆವು. ಕುಟುಂಬದ ಆಪ್ತರು ಅದಾಗಲೇ ಕೆಲ ಆಸ್ಪತ್ರೆಯಲ್ಲಿ ವಿಚಾರಿಸಿ, ಹಾಸಿಗೆ ಕಾಯ್ದಿರಿಸಿದ್ದರು. ಬಿಬಿಎಂಪಿಯಿಂದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಹಾಸಿಗೆ ಹಂಚಿಕೆ ಆಗಿದೆ ಎಂಬ ಸಂದೇಶ ಬಂದ ಕಾರಣ ಅಲ್ಲಿಗೆ ಹೊರಡಲು ಸನ್ನದರಾದೆವು. ಆಂಬುಲೆನ್ಸ್‌ಗಾಗಿ 108 ಸಹಾಯವಾಣಿಗೆ ಕರೆ ಮಾಡಿ ಒಂದು ಗಂಟೆಯಾದರೂ ಆಂಬುಲೆನ್ಸ್ ಬರಲಿಲ್ಲ. ಬಳಿಕ ಖಾಸಗಿ ಆಂಬುಲೆನ್ಸ್‌ನಲ್ಲಿ ರಾತ್ರಿ 11 ಗಂಟೆಗೆ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು' ಎಂದು ಕಸ್ತೂರಿ ಶಂಕರ್ ತಿಳಿಸಿದರು.

'ಆಸ್ಪತ್ರೆಗೆ ತಲುಪಿದಾಗ ರಾತ್ರಿ 12 ಗಂಟೆಯಾಗಿತ್ತು. ಅಲ್ಲಿ ಹಲವಾರು ಸೋಂಕಿತರು ದಾಖಲಾತಿಗಾಗಿ ಎದುರು ನೋಡುತ್ತಿದ್ದರು. ಬೆಳಿಗ್ಗೆ 3 ಗಂಟೆಯವರೆಗೂ ಅಲ್ಲಿಯೇ ಕಾಯಲಾಯಿತು. ಆಮೇಲೆ ಹಾಸಿಗೆ ಖಾಲಿಯಿಲ್ಲ ಎಂದು ಎಲ್ಲರನ್ನೂ ಆಸ್ಪತ್ರೆ ಸಿಬ್ಬಂದಿ ವಾಪಸ್ ಕಳಿಸಿದರು. ಮುಂಜಾನೆ ಮನೆಗೆ ಬಂದಾಗ 4 ಗಂಟೆಯಾಗಿತ್ತು. ಖಾಸಗಿ ಆಂಬುಲೆನ್ಸ್‌ಗೆ ₹ 11 ಸಾವಿರ ನೀಡಲಾಯಿತು. ಈಗ ಅವರಿಗೆ ಮನೆಯಲ್ಲಿಯೇ ಆರೈಕೆ ಮಾಡಲಾಗುತ್ತಿದೆ. ಅಲ್ಲಿಗೆ ಹೋಗುವ ಮೊದಲೇ ಹಾಸಿಗೆ ಇಲ್ಲ ಎಂದು ಹೇಳಿದಲ್ಲಿ ಇಷ್ಟು ಸಮಸ್ಯೆಯಾಗುತ್ತಿರಲಿಲ್ಲ. ನಮ್ಮ ಹಾಗೇ ಹಲವಾರು ಮಂದಿ ಸಮಸ್ಯೆ ಎದುರಿಸಿದ್ದಾರೆ. ಈ ಬಗ್ಗೆ ಬಿಬಿಎಂಪಿ ಆರೋಗ್ಯಾಧಿಕಾರಿಗೆ ಪತ್ರವನ್ನೂ ಬರೆದಿದ್ದೇನೆ' ಎಂದು ಬೇಸರ ವ್ಯಕ್ತಪಡಿಸಿದರು.

ಈ ಕುರಿತ ಪ್ರತಿಕ್ರಿಯೆಗೆ ಸರ್ಜಾಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ವೈದ್ಯಾಧಿಕಾರಿಗಳು ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ಪಶ್ಚಿಮ ಬಂಗಾಳ ಪ್ರಚಾರ ಸಭೆಯಲ್ಲಿ ಪ್ರಧಾನಿ ಹರ್ಷ

ಇಷ್ಟೊಂದು ಜನ ಸೇರಿದ್ದು ನೋಡಿರಲೇ ಇಲ್ಲ: ಮೋದಿ

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ನಡೆಸಿದ ರೋಡ್ ಶೋನಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಜನರು ಅಂತರ ಕಾಯ್ದುಕೊಳ್ಳದೇ ರೋಡ್ ಶೋನಲ್ಲಿ ಭಾಗಿಯಾಗಿದ್ದರು ಪಿಟಿಐ ಚಿತ್ರ

ಅಸನ್‌ಸೋಲ್ (ಪಶ್ಚಿಮ ಬಂಗಾಳ): ಕೋವಿಡ್‌ನ ಹೊಸ ಪ್ರಕರಣಗಳು ವಿಪರೀತ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದರ ಮಧ್ಯೆಯೂ ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದಲ್ಲಿ ಶನಿವಾರ ನಡೆಸಿದ ಚುನಾವಣಾ ಪ್ರಚಾರ ಸಭೆಯಲ್ಲಿ, 'ಇಷ್ಟು ಜನ ಸೇರಿರುವುದನ್ನು ಇದೇ ಮೊದಲ ಬಾರಿ ನೋಡುತ್ತಿದ್ದೇನೆ' ಎಂದು ಹೆಮ್ಮೆ ವ್ಯಕ್ತಪಡಿಸಿದ್ದಾರೆ. ಈ ವಿಡಿಯೊ ಭಾನುವಾರ ವೈರಲ್ ಆಗಿದೆ. ಮೋದಿ ಅವರ ಈ ಪ್ರಚಾರ ಸಭೆ ಮತ್ತು ಹೇಳಿಕೆಗೆ ಭಾರಿ ಆಕ್ಷೇಪ ವ್ಯಕ್ತವಾಗಿದೆ.

ಅಸನ್‌ಸೋಲ್‌ನಲ್ಲಿ ಏಳನೇ ಹಂತದಲ್ಲಿ ಮತದಾನ ನಡೆಯಲಿದೆ. ಈ ಸಲುವಾಗಿ ಬಿಜೆಪಿ ಇಲ್ಲಿ ಹಲವು ಪ್ರಚಾರ ಸಭೆಗಳನ್ನು ಹಮ್ಮಿಕೊಂಡಿದೆ. ಶನಿವಾರ ರಾತ್ರಿ ಇಲ್ಲಿ ಸಭೆಯನ್ನು ಉದ್ದೇಶಿಸಿ ಮೋದಿ ಅವರು ಮಾತನಾಡಿದ್ದರು. 'ಇಲ್ಲಿಗೆ ಈ ಹಿಂದೆ ಎರಡು ಬಾರಿ ಬಂದಿದ್ದೆ. ಕಳೆದ ಬಾರಿ ಬಾಬುಲ್ ಸುಪ್ರಿಯೊ ಪರವಾಗಿ ಮತ ಕೇಳಲು ಬಂದಿದ್ದೆ. ಅದಕ್ಕೂ ಹಿಂದೆ, ನನಗಾಗಿ ಮತ ಕೇಳಲು ಬಂದಿದ್ದೆ. ಆದರೆ ಆಗ ಸೇರಿದ್ದ ಜನ ಇದರ ಅರ್ಧದಷ್ಟೂ ಇರಲಿಲ್ಲ' ಎಂದು ಮೋದಿ ಹೆಮ್ಮೆ ವ್ಯಕ್ತಪಡಿಸಿದ್ದರು.

'ಆದರೆ, ಇವತ್ತು ನೋಡುತ್ತಿದ್ದೇನೆ. ಎಲ್ಲಾ ದಿಕ್ಕಿನಲ್ಲೂ ಜನರು ತುಂಬಿದ್ದಾರೆ. ಇದೇ ಮೊದಲ ಬಾರಿ ಇಷ್ಟೊಂದು ಜನ ಸೇರಿರುವುದನ್ನು ನೋಡುತ್ತಿದ್ದೇನೆ. ಇವತ್ತು ನೀವು, ನಿಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದೀರಿ. ಇಷ್ಟೇ ಸಂಖ್ಯೆಯಲ್ಲಿ ಬಂದು ಮತ ಹಾಕುವುದು ಮುಂದಿನ ಹಂತ. ಅದನ್ನೂ ಮಾಡಿ' ಎಂದು ಮೋದಿ ಅವರು ಕರೆ ನೀಡಿದ್ದರು.

ಮೋದಿ ಅವರ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದವರಲ್ಲಿ ಬಹುತೇಕ ಮಂದಿ ಮಾಸ್ಕ್ ಧರಿಸದೇ ಇದ್ದುದನ್ನು ಸುದ್ದಿ ಮಾಧ್ಯಮಗಳು ಪ್ರಸಾರ ಮಾಡಿವೆ. ಜನರು ಅಂತರ ಕಾಯ್ದುಕೊಳ್ಳದೆ ಒತ್ತೊತ್ತಾಗಿ ನಿಂತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಸ್ವತಃ ಪ್ರಧಾನಿ ಅವರೇ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸದೇ ಇರುವುದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಮಧ್ಯೆಯೇ ಮೋದಿ ಅವರು ಬೃಹತ್ ಪ್ರಚಾರ ಸಭೆಗಳನ್ನು ನಡೆಸುತ್ತಿರುವುದರ ಬಗ್ಗೆ ವಿರೋಧ ಪಕ್ಷಗಳೂ ಭಾರಿ ಆಕ್ಷೇಪ ವ್ಯಕ್ತಪಡಿಸಿವೆ.

ಇದರ ಮಧ್ಯೆಯೇ ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಬಿಜೆಪಿ ಕಾರ್ಯಕರ್ತರು ಮಾಸ್ಕ್ ಧರಿಸಿ ಸಭೆಯಲ್ಲಿ ಭಾಗವಹಿಸಿರುವ ಚಿತ್ರಗಳನ್ನು ಟ್ವೀಟ್ ಮಾಡಿದ್ದಾರೆ. ಮೋದಿ ಅವರ ಪ್ರಚಾರ ಸಭೆಯಲ್ಲಿ ಅಂತರ ಕಾಯ್ದುಕೊಳ್ಳಲಾಗಿತ್ತು ಎಂದು ಅವರು ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ. ಆದರೆ ಹಲವರು, 'ಇದು ಬೇರೆ ಸಭೆಯ ಚಿತ್ರ. ಈಗಲಾದರೂ ಸುಳ್ಳು ಹೇಳುವುದನ್ನು ನಿಲ್ಲಿಸಿ' ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಚಾರ ರದ್ದುಮಾಡಿದ ರಾಹುಲ್

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳ ಸಂಖ್ಯೆ ಏರುತ್ತಿರುವ ಕಾರಣ ಪಶ್ಚಿಮ ಬಂಗಾಳದಲ್ಲಿ ಯೋಜಿಸಲಾಗಿದ್ದ ಎಲ್ಲಾ ಚುನಾವಣಾ ಪ್ರಚಾರ ಸಭೆಗಳನ್ನು ರದ್ದುಪಡಿಸಿದ್ದೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ. ಅವರ ಈ ನಡೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಶ್ಲಾಘನೆ ವ್ಯಕ್ತವಾಗಿದೆ.

'ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಂಡು, ನನ್ನ ಎಲ್ಲಾ ಚುನಾವಣಾ ಪ್ರಚಾರ ಸಭೆಗಳನ್ನು ರದ್ದುಪಡಿಸಿದ್ದೇನೆ. ಇಂತಹ ಸಂದರ್ಭದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರುವ ಪ್ರಚಾರ ಸಭೆಗಳನ್ನು ನಡೆಸುವ ಬಗ್ಗೆ ರಾಜಕೀಯ ನಾಯಕರು ಮತ್ತೊಮ್ಮೆ ಯೋಚಿಸಬೇಕು' ಎಂದು ರಾಹುಲ್ ಅವರು ಟ್ವೀಟ್‌ನಲ್ಲಿ ಕರೆ ನೀಡಿದ್ದಾರೆ.

ರಾಹುಲ್ ಅವರ ಈ ಕ್ರಮವನ್ನು ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಸ್ವಾಗತಿಸಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹ ಕ್ರಮ ಎಂದು ಹಲವರು ಹೇಳಿದ್ದಾರೆ. 'ನಿಜವಾದ ನಾಯಕ ಮಾತ್ರ ಇಂತಹ ಸಂದರ್ಭದಲ್ಲಿ, ಇಂತಹ ಮಹತ್ವದ ಕ್ರಮ ತೆಗೆದುಕೊಳ್ಳುತ್ತಾನೆ' ಎಂದು ಪ್ರೀತಿ ಎಂಬುವವರು ಪ್ರತಿಕ್ರಿಯೆ ನೀಡಿದ್ದಾರೆ.

'ಮಹತ್ವದ ನಿರ್ಧಾರ. ಬಿಜೆಪಿ ನಾಯಕರ ಕ್ರಮಗಳಿಂದಾಗಿ ದೇಶವು ಕೋವಿಡ್‌ನಿಂದ ಬಳಲುತ್ತಿದೆ. ಬಿಜೆಪಿ ನಾಯಕರೂ ರಾಹುಲ್ ಅವರನ್ನು ಅನುಸರಿಸಬೇಕು' ಎಂದು ರಾಜ್ಯಸಭಾ ಸದಸ್ಯ ವಿವೇಕ್ ತಂಖಾ ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರೂ, ರಾಹುಲ್ ಗಾಂಧಿ ಅವರನ್ನು ಅನುಸರಿಸಬೇಕು. ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ಸಭೆಗಳನ್ನು ಮೋದಿ ಅವರು ಕೈಬಿಡಬೇಕು ಎಂದು ಹಲವರು ಟ್ವೀಟ್‌ನಲ್ಲಿ ಒತ್ತಾಯಿಸಿದ್ದಾರೆ.

'ರಾಹುಲ್ ಅವರು ಈ ನಿರ್ಧಾರ ತೆಗೆದುಕೊಂಡು, ಒಂದು ನಿದರ್ಶನ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ತಮ್ಮ ಪ್ರಚಾರ ಸಭೆಗಳನ್ನು ಕೈಬಿಡಬೇಕು' ಎಂದು ಚಿರಾಶ್ ಭಾಟಿಯಾ ಎಂಬುವವರು ಟ್ವೀಟ್ ಮಾಡಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರದ ಸಚಿವ ಶೋಭನ್‌ದೇವ್ ಚಟ್ಟೋಪಾಧ್ಯಾಯ ಅವರು ತಮ್ಮ ಪ್ರಚಾರ ಸಭೆಗಳನ್ನು ರದ್ದುಪಡಿಸಿದ್ದಾರೆ. ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ಹೀಗೆ ಮಾಡಿದ್ದೇನೆ ಎಂದು ಅವರು ಹೇಳಿದ್ದಾರೆ.

ನುಡಿ-ಕಿಡಿ

ದೇಶದಲ್ಲಿ ಇದೇ ಮೊದಲ ಬಾರಿ, ಇಷ್ಟೊಂದು ಜನರು ಸೋಂಕಿಗೆ ಒಳಗಾಗಿರುವುದು ಮತ್ತು ಇಷ್ಟೊಂದು ಜನರು ಸೋಂಕಿನಿಂದ ಸಾಯುತ್ತಿರುವುದನ್ನು ನೋಡುತ್ತಿದ್ದೇವೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಬಿಜೆಪಿ ಅವರು ಬೇರೆ ರಾಜ್ಯಗಳಿಂದ ಜನರನ್ನು ಕರೆದುಕೊಂಡು ಬಂದು ಪ್ರಚಾರ ನಡೆಸುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಭಾರಿ ಸಭೆಗಳನ್ನು ನಡೆಸುವ ಮೂಲಕ ರಾಜ್ಯದಲ್ಲಿ ಕೋವಿಡ್ ಅನ್ನು ಹರಡುತ್ತಿದ್ದಾರೆ. ಕೋವಿಡ್ ಬಿಕ್ಕಟ್ಟಿನ ಹೊಣೆ ಹೊತ್ತು ಮೋದಿ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಪಶ್ಚಿಮ ಬಂಗಾಳವನ್ನು ತೆಕ್ಕೆಗೆ ತೆಗೆದುಕೊಳ್ಳುವ ಮಹತ್ವದ ಮತ್ತು ತುರ್ತಿನ ಯುದ್ಧದ ಮಧ್ಯೆ, ಕೋವಿಡ್ ನಿಯಂತ್ರಣಕ್ಕೆ ಸಮಯ ಮಾಡಿಕೊಳ್ಳುತ್ತಿರುವ ಮೋದಿಗೆ ಧನ್ಯವಾದಗಳು
ಪಿ.ಚಿದಂಬರಂ, ಕಾಂಗ್ರೆಸ್ ನಾಯಕ

ರೋಮ್ ಹೊತ್ತಿ ಉರಿಯುವಾಗ ನೀರೊ ಪಿಟೀಲು ಬಾರಿಸುತ್ತಿದ್ದ. ಭಾರತವು ಕೋವಿಡ್ ಸಾಂಕ್ರಾಮಿಕದಲ್ಲಿ ನಲಗುವಾಗ ಮೋದಿ, ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ
ಕಾಂಗ್ರೆಸ್ ಟ್ವೀಟ್

ಕೋವಿಡ್ ನಿಯಂತ್ರಿಸಲು ನಮ್ಮಲ್ಲಿ ಕೇಂದ್ರ ಸರ್ಕಾರವಿಲ್ಲ, ಬದಲಿಗೆ ಪಿಆರ್ ಕಂಪನಿ ಇದೆ. ಪಕ್ಷದ ತಾರಾ ಪ್ರಚಾರಕನಾಗಿ ಮೋದಿ ತಮ್ಮ ಕರ್ತವ್ಯ ಮಾಡುತ್ತಿದ್ದಾರೆ. ದೇಶದ ಪ್ರಧಾನಿಯಾಗಿ ಅಲ್ಲ
ಸೀತಾರಾಂ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

180ರಲ್ಲಿ 122 ಗೆಲ್ಲುತ್ತೇವೆ: ಶಾ

ಸ್ವರೂಪನಗರ (ಪಶ್ಚಿಮ ಬಂಗಾಳ): ಈವರೆಗೆ ಐದು ಹಂತದಲ್ಲಿ 180 ಕ್ಷೇತ್ರಗಳಿಗೆ ಚುನಾವಣೆ ನಡೆದಿದೆ. ಇದರಲ್ಲಿ 122 ಕ್ಷೇತ್ರಗಳನ್ನು ಬಿಜೆಪಿ ಗೆಲ್ಲುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ಸ್ವರೂಪನಗರ ಮತ್ತು ಪೂರ್ವಾಸ್ಥಲಿಯಲ್ಲಿ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ಅಮಿತ್ ಶಾ ಅವರು ಇದನ್ನು ಪುನರುಚ್ಚರಿಸಿದ್ದಾರೆ. 'ಐದು ಹಂತದ ಮತದಾನ ನಡೆದ ಮೇಲೆ ತಾವು ಸೋಲುತ್ತೇವೆ ಎಂಬುದು ಮಮತಾ ಬ್ಯಾನರ್ಜಿ ಅವರಿಗೆ ಮನದಟ್ಟಾಗಿದೆ. ಹೀಗಾಗಿ ಅವರು ಕುಸಿದುಹೋಗಿದ್ದಾರೆ. ನಂದಿಗ್ರಾಮದಲ್ಲಿ ಸುವೇಂದು ಅಧಿಕಾರಿ ಗೆಲ್ಲಲಿದ್ದಾರೆ, ಮಮತಾ ಮನೆಗೆ ನಡೆಯಲಿದ್ದಾರೆ' ಎಂದು ಶಾ ಘೋಷಿಸಿದ್ದಾರೆ.

ಅಲ್ಲಲ್ಲಿ ಘರ್ಷಣೆ

ಜಲಪೈಗುರಿ (ಪಿಟಿಐ): ಶನಿವಾರ 5ನೇ ಹಂತದ ಮತದಾನ ನಡೆದ ಹಲವು ಕ್ಷೇತ್ರಗಳಲ್ಲಿ ಭಾನುವಾರ ಘರ್ಷಣೆ ನಡೆದಿದೆ. ಜಲಪೈಗುರಿ ಜಿಲ್ಲೆಯ ಫ್ಲೂಲ್‌ಬರಿ ಕ್ಷೇತ್ರದ ಹಲವೆಡೆ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆದಿದೆ. ಹಲವರಿಗೆ ಗಾಯಗಳಾಗಿವೆ.

ಈ ಸಂಬಂಧ ಇಲ್ಲಿನ ಬಿಜೆಪಿ ಅಭ್ಯರ್ಥಿ ಸಿಖಾ ಚಟರ್ಜಿ ಅವರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. 'ನಮ್ಮ ಪಕ್ಷದ ಇಬ್ಬರು ಕಾರ್ಯಕರ್ತರ ಮೇಲೆ ಟಿಎಂಸಿಯ ಗೂಂಡಾಗಳು ಹಲ್ಲೆ ನಡೆಸಿದ್ದಾರೆ. ಪಕ್ಷದ ಕಾರ್ಯಕರ್ತರ ಮನೆಗೆ ನುಗ್ಗಿ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಅವರು ದೂರಿದ್ದಾರೆ.

ಬಿಜೆಪಿ ಕಾರ್ಯಕರ್ತನ ಸಾವು: ನಾದಿಯಾ ಜಿಲ್ಲೆಯ ಚಾಕ್ದಾ ಗ್ರಾಮದ ಕೆರೆಯ ಬಳಿ ಬಿಜೆಪಿ ಕಾರ್ಯಕರ್ತನ ಶವ ಭಾನುವಾರ ಬೆಳಿಗ್ಗೆ ಪತ್ತೆಯಾಗಿದೆ. ಈ ಸಂಬಂಧ ಪಕ್ಷದ ನಾಯಕರು ಇಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. 'ಟಿಎಂಸಿಯ ಗೂಂಡಾಗಳು ನಮ್ಮ ಪಕ್ಷದ ಕಾರ್ಯಕರ್ತನನ್ನು ಹತ್ಯೆ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ. ಪೊಲೀಸ್ ಠಾಣೆಯ ಎದುರು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಒಳನೋಟ

ಬೆಂಗಳೂರು:'ಪರಿಸರ ಮಾಲಿನ್ಯ ಸ್ಥಾವರ'! ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಏ.18) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗಿದೆ.

ಮಾರಕವಾಗದಿರಲಿ ಸ್ಥಾವರ

ಮೊದಲು ಶಾಖೋತ್ಪನ್ನ ಸ್ಥಾವರಗಳಿಂದ ಜನ, ಜಾನುವಾರು ಹಾಗೂ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಈ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಹಾರುಬೂದಿ, ಹಸಿಬೂದಿಯನ್ನು ಸಮರ್ಪಕವಾಗಿ ಸುರಕ್ಷತೆಯಿಂದ ವಿಲೇವಾರಿ ಮಾಡಿ, ಮಾಲಿನ್ಯ ತಡೆಯಬೇಕು. ಬೂದಿಯ ಆದಾಯಕ್ಕಾಗಿ ಜನರ ಆರೋಗ್ಯ ಹಾಳು ಮಾಡುವುದು ಖಂಡನೀಯ.

ಭೀಷ್ಮ, ಬಳ್ಳಾರಿ

ಪರ್ಯಾಯ ಮಾರ್ಗ ಅನುಸರಿಸಿ

ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಿಂದ (ಆರ್‌ಟಿಪಿಎಸ್) ಆಗುತ್ತಿರುವ ದುಷ್ಪರಿಣಾಮಗಳ ಕುರಿತು 'ಪ್ರಜಾವಾಣಿ' ಬೆಳಕು ಚೆಲ್ಲಿದೆ. ಉಷ್ಣ ಸ್ಥಾವರಗಳಿಂದ ಇಲ್ಲಿಯವರೆಗೆ ಆಗಿರುವ ಪರಿಸರ ಮಾಲಿನ್ಯ ಸಾಕು. ಇನ್ನಾದರೂ ಪರ್ಯಾಯ ಇಂಧನ ಮೂಲಗಳಿಗೆ ಆದ್ಯತೆ ನೀಡಬೇಕು. ಆರೋಗ್ಯವೇ ಕಳೆದುಕೊಂಡು ಅರಮನೆಯಲ್ಲಿದ್ದರೆ ಏನು ಪ್ರಯೋಜನ? ಪರಿಸರಕ್ಕೆ ಪೂರಕವಾದ ಯೋಜನೆಗಳು ಮಾತ್ರ ಜನರ ಹಿತ ಕಾಯಬಲ್ಲವು.

ಮಹೇಶ್ವರ ಹುರುಕಡ್ಲಿ, ಹಗರಿಬೊಮ್ಮನಹಳ್ಳಿ

ಸ್ಥಳೀಯರಿಗೆ ಸಮಸ್ಯೆ ಆಗಬಾರದು

ಶಾಖೋತ್ಪನ್ನ ಕೇಂದ್ರಗಳಿಂದ ಸ್ಥಳೀಯರಿಗೆ ಈ ರೀತಿಯ ದುಷ್ಪರಿಣಾಮಗಳು ಖಂಡನೀಯ. ಒಳಿತು ಮಾಡುವ ನೆಪದಲ್ಲಿ ಸ್ಥಳೀಯರಿಗೆ ಅನಾನುಕೂಲ ಆಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಯಾವುದೇ ಕೆಲಸ ಜನರಿಗೆ ಮಾರಕವಾಗಬಾರದು. ಇಂತಹ ಯೋಜನೆಗಳಿಂದ ಜನರಿಗೆ ಆಗಬಹುದಾದ ಸಮಸ್ಯೆಗಳನ್ನು ಅವಲೋಕಿಸಿ, ಅವುಗಳನ್ನು ತಡೆಯುವ ಕೆಲಸ ಸರ್ಕಾರ ಮಾಡಬೇಕಿದೆ.

ಮಂಜುನಾಥ್, ಬೆಂಗಳೂರು

ಒಂದು ಘಟಕ, ಹಲವು ಸಮಸ್ಯೆ

ಕಲ್ಲಿದ್ದಲನ್ನು ತೊಳೆಯಲು ಬಳಸುವ ನೀರು ನೇರವಾಗಿ ಜಲಾಶಯಗಳಿಗೆ ಹರಿ ಬಿಟ್ಟರೆ, ಜಲಮೂಲಗಳು ಕಲುಷಿತಗೊಳ್ಳುತ್ತವೆ. ಘಟಕಗಳಿಂದ ಹಾರುವ ಬೂದಿ ಮಣ್ಣಿಗೆ ಹಾನಿ ಮಾಡುತ್ತದೆ. ಘಟಕದಿಂದ ಹೊರಬರುವ ಕಲುಷಿತ ಹೊಗೆಯು ವಿಷಕಾರಿ ಅಂಶಗಳಿಂದ ಕೂಡಿರುತ್ತವೆ. ಅವು ಗಾಳಿಯೊಂದಿಗೆ ಬೆರೆತರೆ, ಉಸಿರಾಟಕ್ಕೆ ಯೋಗ್ಯವಾದ ಗಾಳಿ ಸಿಗುವುದಿಲ್ಲ. ಆರೋಗ್ಯವೂ ಹಾಳಾಗುತ್ತದೆ.

ಶ್ರೀಕಾಂತ್, ವಿಜಯಪುರ

ನೊಂದವರಿಗೆ ಪರಿಹಾರ ನೀಡಿ

ಶಾಖೋತ್ಪನ್ನ ಘಟಕಗಳಿಂದ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಇದರಿಂದ ಸಂಕಷ್ಟಕ್ಕೆ ಸಿಲುಕಿದವರಿಗೆ ಪರಿಹಾರ ನೀಡಬೇಕು. ಸ್ಥಾವರಗಳ ಸುತ್ತಮುತ್ತಲಿನ ಗ್ರಾಮಸ್ಥರಿಗೆ ದುಷ್ಪರಿಣಾಮಗಳ ಅರಿವು ಮೂಡಿಸಬೇಕು. ಸ್ಥಾವರಗಳು ಜನರ ಹಿತ ಕಾಯಬೇಕೇ ಹೊರತು, ಪ್ರಾಣ ಕಸಿಯಬಾರದು.

ಈರವೇಣಿ, ರಾಯಚೂರು

ಉತ್ತರ ಭಾಗಕ್ಕೆ ತಾರತಮ್ಯ

ಪರಿಸರಕ್ಕೆ ಮಾರಕವಲ್ಲದ ಯೋಜನೆಗಳನ್ನು ದಕ್ಷಿಣ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಿ, ಮಾರಕವಾಗಿರುವ ಸ್ಥಾವರಗಳಂತಹ ಯೋಜನೆಗಳನ್ನು ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಾಗಿ ಸ್ಥಾಪಿಸಿದ್ದಾರೆ. ಮೊದಲೇ ಬಿಸಿಲು ಹೆಚ್ಚಿರುವ ಭಾಗದಲ್ಲಿ ಇಂತಹ ಸ್ಥಾವರಗಳನ್ನು ಸ್ಥಾಪಿಸುತ್ತಿದ್ದಾರೆ. ಈ ತಾರತಮ್ಯ ನಿಲ್ಲಬೇಕು. ಅವಧಿ ಮೀರಿರುವ ರಾಯಚೂರಿನ ಉಷ್ಣ ವಿದ್ಯುತ್ ಸ್ಥಾವರ ನಿಲ್ಲಿಸಿ, ಪರಿಸರ ಸಂರಕ್ಷಣೆ ಹಾಗೂ ಜನರ ಹಿತ ಕಾಯಬೇಕು.

ಮಲ್ಲಿಕಾರ್ಜುನ ದುಂಡಪ್ಪ, ಗೋಕಾಕ್

ಕಲಿಕೆ ಎನ್ನುವುದು ಖಜಾನೆ ಇದ್ದಂತೆ. ಅದು ತನ್ನ ಮಾಲೀಕನನ್ನು ಎಲ್ಲಾ ಕಡೆ ಹಿಂಬಾಲಿಸುತ್ತದೆ.



ಸಾಫ್ಟ್‌ವೇರ್ ಟೆಸ್ಟಿಂಗ್

ಕೋರ್ಸ್ ಜೊತೆ ಕೌಶಲವೂ ಬೇಕು!

ಐಟಿ ವಲಯದಲ್ಲಿ ಇತ್ತೀಚೆಗೆ ಸಾಫ್ಟ್‌ವೇರ್ ಟೆಸ್ಟಿಂಗ್‌ಗೆ ಅವಕಾಶಗಳು ಹೆಚ್ಚುತ್ತಿವೆ. ಎಂಜಿನಿಯರಿಂಗ್ ಮಾಡಿಕೊಂಡವರು, ವಿಜ್ಞಾನದಲ್ಲಿ ಪದವಿ ಪಡೆದು ಸಾಫ್ಟ್‌ವೇರ್ ಟೆಸ್ಟಿಂಗ್‌ನಲ್ಲಿ ಡಿಪ್ಲೊಮಾ ಕೋರ್ಸ್ ಮಾಡಿಕೊಂಡವರಿಗೆ ಹೇರಳ ಅವಕಾಶಗಳಿವೆ.

ಎಸ್.ಜಿ. ಕೃಷ್ಣ

ಐಟಿ ವಲಯದಲ್ಲಿ ಇತ್ತೀಚೆಗೆ ಬೇಡಿಕೆ ಹೆಚ್ಚುತ್ತಿರುವ ಉದ್ಯೋಗಗಳಲ್ಲಿ ಸಾಫ್ಟ್‌ವೇರ್ ಟೆಸ್ಟಿಂಗ್ ಕೂಡ ಒಂದು. ಸಾಫ್ಟ್‌ವೇರ್ ಟೆಸ್ಟಿಂಗ್ ಎಂದರೆ ಈಗಾಗಲೇ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ಮೇಲೆ ಕೆಲಸ ಮಾಡುವುದು. ಜೊತೆಗೆ ಅಪ್ಲಿಕೇಶನ್‌ನ ಕ್ರಿಯಾತ್ಮಕತೆಯನ್ನು ಮೌಲ್ಯಮಾಪನ ಮಾಡುವುದು ಹಾಗೂ ಲೋಪ-ದೋಷಗಳನ್ನು ಗುರುತಿಸುವ ಕೆಲಸಗಳನ್ನು ಸಾಫ್ಟ್‌ವೇರ್ ಟೆಸ್ಟರ್‌ಗಳು ಮಾಡುತ್ತಾರೆ.

ಕೆಲಸದ ವಿವರಗಳು

ಸಾಫ್ಟ್‌ವೇರ್‌ನ ಅವಶ್ಯಕತೆಗಳನ್ನು ಗುರುತಿಸುವುದು ಹಾಗೂ ಸಾಫ್ಟ್‌ವೇರ್ ಟೆಸ್ಟ್‌ಗೆ ಬೇಕಾದ ತಯಾರಿ ನಡೆಸಬೇಕಾಗುತ್ತದೆ. ಸಾಫ್ಟ್‌ವೇರ್ ಉಪಯುಕ್ತತೆಯ ಕುರಿತು ಪರೀಕ್ಷೆಗಳನ್ನು ಕಾರ್ಯಗತಗೊಳಿಸುವುದು; ಡೇಟಾಬೇಸ್ ಪರಿಣಾಮಗಳು, ದೋಷಗಳು ಮತ್ತು ಉಪಯುಕ್ತತೆ ಕುರಿತು ಪರೀಕ್ಷೆ ನಡೆಸಿ ಫಲಿತಾಂಶಗಳನ್ನು ವಿಶ್ಲೇಷಿಸುವುದು; ಸಾಫ್ಟ್‌ವೇರ್ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಅಂಶಗಳ ಕುರಿತು ವರದಿಗಳನ್ನು ಸಿದ್ಧಪಡಿಸುವುದು ಮತ್ತು ವಿನ್ಯಾಸ ತಂಡಕ್ಕೆ ವರದಿ ಮಾಡುವುದು; ಸಾಫ್ಟ್‌ವೇರ್ ಅಪ್ಲಿಕೇಶನ್‌ನ ಬಗ್ಗೆ ವಿವರ ತಿಳಿಯಲು ಗ್ರಾಹಕರೊಂದಿಗೆ ಸಂವಹನ ನಡೆಸುವುದು; ವಿನ್ಯಾಸ ವಿಮರ್ಶೆಗಳಲ್ಲಿ ಭಾಗವಹಿಸುವುದು ಮತ್ತು ಅವಶ್ಯಕತೆಗಳು, ಉತ್ಪನ್ನ ವಿನ್ಯಾಸ, ಸಂಭಾವ್ಯ ಸಮಸ್ಯೆಗಳ ಕುರಿತು ಮಾಹಿತಿ ನೀಡುವುದು ಮೊದಲಾದ ಕೆಲಸ ಮಾಡಬೇಕಾಗುತ್ತದೆ.

ಅರ್ಹತೆ

- ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತ ವಿಷಯವನ್ನು ಮುಖ್ಯ ವಿಷಯಗಳನ್ನಾಗಿ ಆಯ್ಕೆ ಮಾಡಿಕೊಂಡಿರಬೇಕು.
- ಪದವಿ: ಯಾವುದೇ ವಿಷಯದಲ್ಲಿ ಎಂಜಿನಿಯರಿಂಗ್, ಬಿಟೆಕ್, ಬಿಎಸ್‌ಸಿ, ಬಿಸಿಎ ಹಾಗೂ ಐಟಿ ಡಿಪ್ಲೊಮಾ ಕೋರ್ಸ್‌ಗಳು
- ಸ್ನಾತಕೋತ್ತರದ ಪದವಿ: ಎಂಟೆಕ್, ಎಂಸಿಎ ಹಾಗೂ ಐಟಿ ಡಿಪ್ಲೊಮಾ ಕೋರ್ಸ್‌ಗಳು

ಕೌಶಲಗಳು

- ತಾಂತ್ರಿಕ ಕೌಶಲ
- ಡೇಟಾಬೇಸ್ ಹಾಗೂ ಎಸ್‌ಕ್ಯೂಎಲ್‌ನಲ್ಲಿ ಸಾಮಾನ್ಯ ಜ್ಞಾನ
- ಮ್ಯಾನೇಜ್‌ಮೆಂಟ್ ಟೂಲ್ ಟೆಸ್ಟ್ ಕುರಿತು ಜ್ಞಾನ ಹಾಗೂ ಅನುಭವ
- ಲೀನಕ್ಸ್ ಕಮಾಂಡ್ ಕುರಿತು ಸಾಮಾನ್ಯ ಜ್ಞಾನ
- ಯಾವುದೇ ದೋಷಪೂರಿತ ಟ್ರ್ಯಾಕಿಂಗ್ ಟೂಲ್ ವಿಷಯದಲ್ಲಿ ಜ್ಞಾನ ಹಾಗೂ ಅನುಭವ
- ಆಟೊಮೇಷನ್ ಟೂಲ್‌ಗಳ ಕುರಿತು ಜ್ಞಾನ ಹಾಗೂ ಅನುಭವ

ತಾಂತ್ರಿಕೇತರ ಕೋರ್ಸ್‌ಗಳು

- ವಿಶ್ಲೇಷಣಾ ಕೌಶಲಗಳು
- ಸಂವಹನ ಕೌಶಲ
- ಸಮಯ ಪರಿಪಾಲನೆ
- ಸಕಾರಾತ್ಮಕ ವರ್ತನೆ
- ವೃತ್ತಿಯ ಮೇಲೆ ಒಲವು

ಈ ಬಗ್ಗೆ ಹಲವಾರು ಅಲ್ಪಾವಧಿ ಕೋರ್ಸ್‌ಗಳಿವೆ. ಆಟೊಮೇಟಿವ್ ಸಾಫ್ಟ್‌ವೇರ್ ಟೆಸ್ಟರ್, ಟೆಸ್ಟ್ ಆಟೊಮೇಷನ್ ಎಂಜಿನಿಯರ್, ಯೂಸೆಬಿಲಿಟಿ ಟೆಸ್ಟಿಂಗ್, ಸೆಕ್ಯೂರಿಟಿ ಟೆಸ್ಟರ್, ಫರ್ಫಾಮಿಂಗ್ ಟೆಸ್ಟಿಂಗ್‌ನಲ್ಲಿ ಗ್ಲೋಬಲ್ ಸರ್ಟಿಫಿಕೇಶನ್ ಕೋರ್ಸ್‌ಗಳನ್ನು ಬೆಂಗಳೂರಿನ ಐಎಸ್‌ಟಿಕ್ಯೂಬಿನಲ್ಲಿ ಮಾಡಿಕೊಳ್ಳಬಹುದು.

ಪುಣೆಯ ಸಾಫ್ಟ್‌ವೇರ್ ಟೆಸ್ಟಿಂಗ್ ಸೀಡ್ ಇನ್ಫೋಟೆಕ್‌ನಲ್ಲಿ ಡಿಪ್ಲೊಮಾ, ದೆಹಲಿಯ ವೆಬ್‌ಟೆಕ್ ಲ್ಯಾಬ್ಸ್‌ನಲ್ಲಿ ಸಾಫ್ಟ್‌ವೇರ್ ಆಟೊಮೇಷನ್ ಟೆಸ್ಟಿಂಗ್ ಟ್ರೈನಿಂಗ್ ಕೋರ್ಸ್, ಹೈದರಾಬಾದ್‌ನ ಮೈಂಡ್ ಕ್ಯೂನಲ್ಲಿ ಸಾಫ್ಟ್‌ವೇರ್ ಟೆಸ್ಟಿಂಗ್ ಸರ್ಟಿಫಿಕೇಟ್ ಕೋರ್ಸ್ ಸೇರಿದಂತೆ ಹಲವು ಕಡೆ ಇಂತಹ ಕೋರ್ಸ್‌ಗಳು ಲಭ್ಯ.

ಈ ಕೋರ್ಸ್ ಮಾಡಿಕೊಂಡವರು ಸಾಫ್ಟ್‌ವೇರ್ ಟೆಸ್ಟರ್, ಸೀನಿಯರ್ ಟೆಸ್ಟ್ ಎಂಜಿನಿಯರ್, ಸಾಫ್ಟ್‌ವೇರ್ ಟೆಸ್ಟ್ ಲೀಡರ್ ಆಗಿ ಉದ್ಯೋಗ ಗಿಟ್ಟಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಖರಗ್‌ಪುರ ಸೆಂಟರ್ ಆಫ್ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021

- ವಿವರ: ಐಐಟಿ ಖರಗ್‌ಪುರ ಬಿಟೆಕ್ ಪದವಿಧರರಿಂದ ಫೆಲೋಶಿಪ್‌ಗೆ ಅರ್ಜಿಗಳನ್ನು ಆಹ್ವಾನಿಸಿದೆ.
- ಅರ್ಹತೆ: 28 ವರ್ಷದ ಒಳಗಿನವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಿಟೆಕ್ ಪದವಿಯಲ್ಲಿ ಶೇ 80ರಷ್ಟು ಅಂಕ ಪಡೆದಿರಬೇಕು. ಗೇಟ ಮತ್ತು ಎನ್‌ಇಟಿ ಮುಗಿಸಿದವರಿಗೆ ಆದ್ಯತೆ.
- ಆರ್ಥಿಕ ಸಹಾಯ: ತಿಂಗಳಿಗೆ ₹ 31000
- ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 25 ಏಪ್ರಿಲ್, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿ: www.b4s.in/praja/SEF5

ಮೆಡಿಕಲ್ ಮತ್ತು ಎಂಜಿನಿಯರಿಂಗ್ ಓದಲು ಇಚ್ಛೆ ಇರುವ ವಿದ್ಯಾರ್ಥಿಗಳಿಗೆ ಡಾ. ಅಬ್ದುಲ್ ಕಲಾಮ್ ವಿದ್ಯಾರ್ಥಿ ವೇತನ

- ವಿವರ: ಬಡಿ4ಸ್ಟಡಿ ಇಂಡಿಯಾ ಫೌಂಡೇಶನ್ ಅರ್ಜಿಯನ್ನು ಆಹ್ವಾನಿಸಿದೆ.
- ಅರ್ಹತೆ: ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗೆ ತಯಾರಾಗುತ್ತಿರುವ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪಿಯುಸಿಯಲ್ಲಿ ಶೇ 55ರಷ್ಟು ಅಂಕಗಳನ್ನು ಗಳಿಸಿರಬೇಕು. 2021ರಲ್ಲಿ ಪಿಯುಸಿ ಪರೀಕ್ಷೆಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳು ಸಹ ಅರ್ಜಿ ಸಲ್ಲಿಸಬಹುದಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 3 ಲಕ್ಷಕ್ಕಿಂತ ಕಡಿಮೆ ಇರಬೇಕು.
- ಆರ್ಥಿಕ ಸಹಾಯ: ₹ 20,000
- ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 30 ಏಪ್ರಿಲ್, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/AKS2

ಕೃಪೆ: buddy4study.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Ballad of Tempest
by James T Fields

ಇಂಗ್ಲಿಷ್ | ಎಸ್ಸೆಸ್ಸೆಲ್ಸಿ

The ballad of Tempest is a poem written by James T Fields. By reading this poem we experience that fortune always fevers the braves. If we believe in God, then there will always be a helping hand of him, whenever we are in trouble.

The poem gives the description of the horrible experience of the sailors on one of they voyages. That was a winter season. Generally big storms generate deep in to the sea in winter. They can cause a great loss for the sailors. Some times their life will be in great danger.

It was in such a situation. All the sailors crowded in the cabin. Nobody wanted to deep even that was midnight. Everyone held their life, because there was a big storm formed into the deep sea. It shattered their boat also. Every time they heard the voice of the captain, 'cutaway the mast'. As the sea was roaming the waves crushed their boat. The sailors shuddered in silence. They prayed for the god to save their life. Suddenly they heard the voce of the captain, "we are lost", then they began to loose their hopes.

God moves in a mysterious way. At that moment the daughter of the captain, a little girl, filled the confidence in all the sailors. She said that " God is everywhere he will surely save their lives" her words isn't good upon the Ocean just the same as on the land had a great impact on the sailors. They became very cheerful and talked enthusiastically themselves. When the morning spreads the sun-rays they found that they were all safe in the harbor.

ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಸ್ಟ್ಯಾಟಿಸ್ಟಿಕ್ಸ್ ಮೇಡಿಯನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3aggFKL

ದ್ಯುತಿ ಕಿರಣ ವಿಜ್ಞಾನ ಮತ್ತು ದ್ಯುತಿ ಉಪಕರಣಗಳು

ಭೌತಶಾಸ್ತ್ರ | ದ್ವಿತೀಯ ಪಿಯುಸಿ

ಅಧ್ಯಾಯ-9

ಬೆಳಕು ಅಗಾಧ ಜವವನ್ನು ಹೊಂದಿದ್ದು, ಇದು ನಿರ್ವಾತದಲ್ಲಿ $c = 2.99792458 * 10^8 MS^{-1}$ ಜವದೊಂದಿಗೆ ಚಲಿಸಬಲ್ಲದು ಮತ್ತು ಬೆಳಕು ಸರಳರೇಖೆಯಲ್ಲಿ ಮಾತ್ರ ಚಲಿಸುತ್ತದೆ. ಬೆಳಕು ವಿದ್ಯುತ್ಕಾಂತೀಯ ವಿಕಿರಣವಾಗಿದ್ದು ತರಂಗದೂರ ಸುಮಾರು 400nm ನಿಂದ 750nm ವ್ಯಾಪ್ತಿಯ ವಿಕಿರಣವನ್ನು ಬೆಳಕು ಎನ್ನುವರು.

ಗೋಳ ದರ್ಪಣದಲ್ಲಿ ಬೆಳಕಿನ ಪ್ರತಿಫಲನ

- ಲಂಬರೇಖೆಯು ಗೋಳಿಯ ಸಮತಲದ ತ್ರಿಜ್ಯದ ಮೇಲಿರುತ್ತದೆ ಮತ್ತು ದರ್ಪಣದ ಕೇಂದ್ರದಿಂದ ಆಪಾತ ಬಿಂದುವಿಗೆ ಎಳೆದ ಸರಳರೇಖೆಯ ಮೇಲಿರುತ್ತದೆ.
- ಪ್ರತಿಫಲನ ಕಿರಣ, ಆಪಾತ ಕಿರಣ ಮತ್ತು ಲಂಬರೇಖೆ ಇವೆಲ್ಲಾ ಒಂದೇ ಸಮತಲದಲ್ಲಿರುತ್ತದೆ.

ರೂಢಿಗತ ಚಿಹ್ನೆಗಳು



- ಎಲ್ಲಾ ದೂರಗಳನ್ನು ದರ್ಪಣದ ಧ್ರುವದಿಂದ ಅಥವಾ ಮಸೂರದ ದ್ಯುತಿ ಕೇಂದ್ರದಿಂದಲೇ ಅಳೆಯಲಾಗುತ್ತದೆ.
- ಆಪಾತ ಕಿರಣದ ದಿಕ್ಕಿನಲ್ಲಿ ಅಳೆದ ದೂರಗಳನ್ನು ಧನಾತ್ಮಕವಾಗಿಯೂ, ಆಪಾತ ಕಿರಣದ ವಿರುದ್ಧ ದಿಕ್ಕಿನಲ್ಲಿ ಋಣಾತ್ಮಕವಾಗಿಯೂ ಅಳೆಯಲಾಗುತ್ತದೆ.
- ಪ್ರಧಾನ ಕಕ್ಷೆ ಲಂಬವಾಗಿ ಮೇಲ್ಮುಖವಾಗಿ ಅಳೆದ ದೂರವನ್ನು ಧನಾತ್ಮಕವಾಗಿಯೂ ಕೆಳಮುಖವಾಗಿ ಅಳೆದ ದೂರವನ್ನು ಋಣಾತ್ಮಕವಾಗಿಯೂ ಪರಿಗಣಿಸಲಾಗುತ್ತದೆ.

ಗೋಳೀಯ ದರ್ಪಣದ ಸಂಗಮ ದೂರ(f)

ಗೋಳೀಯ ದರ್ಪಣದ ಸಂಗಮ ಬಿಂದುವನ್ನು (f) ದರ್ಪಣದ ಪ್ರಧಾನಾಕ್ಷದ ಮೇಲೆ ಪ್ರತಿಫಲಿತ ಕಿರಣಗಳು ಅಭಿಸರಿಸುವ ಬಿಂದುವೆಂದು ವ್ಯಾಖ್ಯಾನಿಸಿದರೆ ಪೀನ ದರ್ಪಣದಲ್ಲಿ ಪ್ರಧಾನಾಕ್ಷದ ಒಂದು ನಿರ್ದಿಷ್ಟ ಬಿಂದುವಿನಿಂದ ಅನುಸರಿಸುವ ಬಿಂದುವೆಂದು ವ್ಯಾಖ್ಯಾನಿಸಲಾಗುತ್ತದೆ. ದರ್ಪಣದ ಸಂಗಮ ಬಿಂದು f ಮತ್ತು p ಧ್ರುವ ನಡುವಿನ ಅಂತರಕ್ಕೆ ಸಂಗಮ ದೂರ ಎನ್ನುವರು.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ರೇ ಆಪ್ಟಿಕ್ಸ್ & ಆಪ್ಟಿಕಲ್ ಇನ್‌ಸ್ಟ್ರುಮೆಂಟ್ ರಿಫ್ರ್ಯಾಕ್ಷನ್ ಥ್ರೂ ಎ ಪ್ರಿಸಂ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3eedTa4

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before / After
ಲೈಂಗಿಕ ರೋಗಗಳು · ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ · ನಿದ್ರಾ ಸ್ಖಲನ
ಶೀಘ್ರ ಸ್ಖಲನ · ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ · ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ · ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
100% No Side Effects
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

POORNAPRAJNA PRE-UNIVERSITY COLLEGE, ADMAR
(Accredited 'A' Grade Pre-University College by Karnataka Pre-University Education Department)
A POORNAPRAJNA EDUCATION CENTER ®
(Promoted & Managed by Udupi Sri Admar Mutt Education Council)
ADMAR, UDUPI DIST. - 574 119
Website : https://poornaprajnapucadmar.com | Email: principalppucadmar@gmail.com
Contact No. : 87621 85171 / 94811 15117

FOUNDER PRESIDENT H. H. Sri Vibudhesha Theerta Swamiji
PRESIDENT H. H. Sri Vishwapriya Theerta Swamiji

The institution has been providing high quality education in Science, Commerce and Arts offering the following courses:

Language 1	Language 2	SCIENCE	COMMERCE	ARTS
ENGLISH	KANNADA or HINDI or SANSKRIT	PCMB (2 Batches) PCMS, PCMCs	HEBA, SEBA BASCS	HEPS

Sri Pradeep Kumar Advocate Hon. Secretary, PPEC, Admar

RESIDENTIAL FACILITY
- Separate Hostel facility for Boys & Girls with homely atmosphere.
- Solar water heater facility
- Delicious and nutritious food
- Study hall facility
- Outing facility
- Hostel Care Center
- Opportunity for visual display once in a week as a means of Entertainment

College Bus Facility : For the Day Scholars

Specialized training for the COMPETITIVE EXAMINATIONS :
- Science - CET, NEET & JEE Mains -by Subject experts
- Commerce - CA Foundation -Coaching by well experienced faculties
- Arts - Coaching for Civil Service examinations
- Special Training for Sports Students

INFRA STRUCTURAL FACILITIES provided to the students :
- Well equipped laboratories for Physics, Chemistry, Biology & Computer Science.
- 400 mtr. track Play ground and 2 additional Play grounds
- Audio- Visual room with PPT Facility
- Library with very valuable reference books, dailies and periodicals
- Indoor sports room
- Smart Classes
- Well furnished auditorium
- Guest house for Hostel Parents

Facilities and incentives provided to the students :
College has a secured campus with CCTV facility and security guards. Pure drinking water facility. Scholarship for meritorious students for all the students. Book bank facility for poor students. Monthly Cycle tests. 8 College Buses for the local students. Free note books for Arts students. Remedial classes for slow learners. Vacational Classes for II PUC Students. Mid day meals facility at subsidized prices. **Fully Sanitized and hygienic campus.**

Following co-curricular activities are organized in the institution for the all round development of students :
Sports Club · NSS, Science Club · Manavika Club · Literary Club · Magazine Club etc.

You may also contact : https:poornaprajnapucadmar.com

Sri Sathish Hande H. 9481115117 / 8762185171 Office Suptd., PPEC Admar
Dr. Olivita D'Souza 8277767354 Vice Principal & Hostel Incharge, PPEC, Admar
Dr. M.R. Hegde 9880352026 Founder Director PIM, Udupi
Dr. Jayashankar K. 9449330857 Staff Represnetative PPEC, Admar
Sri Pradeep Kumar 94480 12402 Advocate, Hon. Secretary, PPEC, Admar
Sri Ramakrishna Pai 94489 11305 Principal
Sri Radhakrishna Kini 9591420185 Lecturer in Chemistry & Science Co-ordinator
Sri Vishak Shetty 8431830882 Lecturer in Commerce

MERITORIOUS STUDENTS 2019-2020
Dashami N Marks: 587 11th Rank(Commerce)
Shashank Bhat KG Marks : 581 (Commerce)
Adarsh S. Ketali Veterinary College, KVAFSU, Hebbal
Vaishnavi Y. ESIC Medical College, Rajajinagar, Banglore
Moneet Mohan Devadiga RV College of Engineering, Banglore
Chinmay Raj National Institute of Engineering, Mysore
Bhavana V.M. College of Horticulture Mysore
E.K.Pavan Kumar BMS College of Engineering
P. Ashwini Acharya NMAM Institute of Technology, Karkala
Dhanya Rao NMAM Institute of Technology, Karkala
Ashray NMAM Institute of Technology, Karkala
Bhargava G.Y. BMS College of Engineering, Bangalore

2019-20 II PUC Results

SCIENCE	
Total Percentage	: 100%
Total Students Appeared	: 140
Distinction	: 45
1st Class	: 88
COMMERCE	
Total Percentage	: 96.01%
Total Students Appeared	: 167
Distinction	: 33
1st Class	: 97

Fees Concession for Achivers
For the I P.U.C Admissions 2021-2022 Full fee concession (including coaching fees) to the students who secured within 10 ranks in the SSLC Public Examination in the year 2020-21. Students who secure 95% and above in the SSLC Public exam will get 50% fee concession. Those who secure more than 90% marks in the SSLC examination will get a fee concession of 40% of the total fees. Medal winners in the National Level sports Meet will get full fee concession. Medal winners in the state level sports Meet and participated in the national level sports meet will get a fees concession of Rs 15,000/-

Girls Hostel · Boys Hostel

ADMISSIONS OPEN FOR HOSTELS
Hostel facility is available for 8th, 9th, 10th, I PUC & II PUC Students

ಸುಭಾಷಿತ

ಸುಲಭವಾಗಿ ಸಾಗುವ ಜೀವನ ನಿಮ್ಮದಾಗಬೇಕೆಂದು ಬಯಸುವಿರಾ? ಹಾಗಿದ್ದರೆ, ಯಾವಾಗಲೂ ಜನರ ಹಿಂಡಿನಲ್ಲೇ ಇರಿ ಮತ್ತು ಆ ಹಿಂಡಿನಲ್ಲಿ ನಿಮ್ಮತನವನ್ನು ಕಳೆದುಕೊಳ್ಳಿ! –ಫ್ರೆಡರಿಕ್ ನೀಷೆ

ಸಿದ್ಧತೆಯಲ್ಲಿ ಹಿಂದೆಬಿದ್ದ ಬಿಬಿಎಂಪಿ ಕಾರ್ಮಿಕರಿಗೆ ಸಂಬಳ ಪಾವತಿಸಿ

ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಈ ಸಮಯದಲ್ಲಿ ಹಗಲು-ರಾತ್ರಿ ಎನ್ನದೆ ಅಂತ್ಯಕ್ರಿಯೆಗೆ ನೆರವಾಗುತ್ತಿರುವ ಸ್ಮಶಾನ ಮತ್ತು ಚಿತಾಗಾರಗಳ ಕಾರ್ಮಿಕರಿಗೆ ಹಲವು ತಿಂಗಳಿಂದ ಸಂಬಳವನ್ನೇ ನೀಡದಿರುವುದು ಅಮಾನವೀಯ. ಕೋವಿಡ್‌ನಿಂದ ಸಾವಿಗೆ ಈಡಾಗುತ್ತಿರುವವರ ಸಂಖ್ಯೆ ಹೆಚ್ಚಿದ್ದು, ಚಿತಾಗಾರಗಳ ಮುಂದೆ ಶವ ವಾಹನಗಳ ಸಾಲು ಸಾಲೇ ಕಂಡು ಬರುತ್ತಿದೆ. ಸಂಕಷ್ಟದ ಈ ಸಂದರ್ಭದಲ್ಲಿ ಕೆಚ್ಚೆದೆಯಿಂದ ಮುಂದೆ ನಿಂತು ನೆರವಿನಹಸ್ತ ಚಾಚುತ್ತಿರುವವರಿಗೆ ಪ್ರೋತ್ಸಾಹ ತುಂಬುವ ಕೆಲಸ ಮಾಡಬೇಕಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಅವರಿಗೆ ಸಂಬಳವನ್ನೇ ನೀಡದೆ ಸತಾಯಿಸಿ ಹೊಣೆಗೇಡಿತನ ತೋರಿದೆ. ಕನಿಷ್ಠ ವೇತನವನ್ನು ಹೆಚ್ಚಿಸಬೇಕೆಂಬ ಈ ಕಾರ್ಮಿಕರ ಬೇಡಿಕೆ ಕೂಡ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಈಗ ಕೊಡುವ ಸಂಬಳದಲ್ಲೂ ಬಾಕಿ ಉಳಿಸಿಕೊಂಡರೆ ಅವರು ತಮ್ಮ ಕುಟುಂಬವನ್ನು ನಿರ್ವಹಣೆ ಮಾಡುವುದು ಹೇಗೆ ಎಂಬ ಪ್ರಶ್ನೆ ಅಧಿಕಾರಿಗಳ ತಲೆಗೆ ಏಕೆ ಹೋಗಲಿಲ್ಲ? ಅಪಾಯ ಲೆಕ್ಕಿಸದೆ ಕಾರ್ಯನಿರ್ವಹಿಸುವವರಿಗೆ ಪ್ರತೀ ಅಂತ್ಯಕ್ರಿಯೆಗೆ ತಲಾ ₹ 500 ಪ್ರೋತ್ಸಾಹಧನ ನೀಡಲಾಗುವುದು ಎಂಬ ಘೋಷಣೆ ಇನ್ನೂ ಅನುಷ್ಠಾನಗೊಂಡಿಲ್ಲ. ಅಂತ್ಯಕ್ರಿಯೆ ನಡೆಸುವ ವೇಳೆ ಧರಿಸಲು ಕಾರ್ಮಿಕರಿಗೆ ವೈಯಕ್ತಿಕ ಸುರಕ್ಷಾ ಸಾಧನಗಳ (ಪಿಪಿಇ ಕಿಟ್) ಕೊರತೆಯೂ ಎದುರಾಗಿದೆ. ಹಾಗೆಯೇ ಕರ್ತವ್ಯನಿರತ ಕಾರ್ಮಿಕರು ಸೋಂಕುಪೀಡಿತರಾದರೆ ಅವರಿಗೆ ಸರಿಯಾದ ಚಿಕಿತ್ಸೆ ಸೌಲಭ್ಯವೂ ಸಿಗುತ್ತಿಲ್ಲ ಎಂಬ ವರದಿಗಳಿವೆ. ಮೃತರ ಅಂತ್ಯಸಂಸ್ಕಾರವನ್ನು ಘನತೆಯಿಂದ ನಡೆಸಲು ನೆರವಾಗುವ ಕಾರ್ಮಿಕರು ಘನತೆಯಿಂದ ಬದುಕುವಂತೆ ನೋಡಿಕೊಳ್ಳುವುದು ಬಿಬಿಎಂಪಿಯ ಹೊಣೆ. ಆ ಜವಾಬ್ದಾರಿಯಿಂದ ಅದು ನುಣುಚಿಕೊಳ್ಳುವಂತಿಲ್ಲ.

> ಸರ್ಕಾರವು ಮಾರ್ಗಸೂಚಿ ರೂಪಿಸುತ್ತಾ ಕಾಲ ಕಳೆದರೆ ಸಾಲದು. ಚಿತಾಗಾರಗಳ ಕಾರ್ಮಿಕರೂ ಸೇರಿದಂತೆ ಕೋವಿಡ್ ಸೇನಾನಿಗಳಿಗೆ ಸಮರ್ಪಕ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕು

ಸ್ಮಶಾನ ಮತ್ತು ಚಿತಾಗಾರಗಳ ಕಾರ್ಮಿಕರ ವಿಷಯದಲ್ಲಿ ಅಷ್ಟೇ ಅಲ್ಲ, ಕೋವಿಡ್‌ನ ಎರಡನೇ ಅಲೆಯನ್ನು ಎದುರಿಸಲು ಸನ್ನದ್ಧವಾಗುವ ವಿಷಯದಲ್ಲೂ ಬಿಬಿಎಂಪಿ ಎಡವಿದೆ. ಸೋಂಕುಪೀಡಿತರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವ ಸ್ಥಿತಿ ಮತ್ತೆ ಎದುರಾಗಿದೆ. ಕಳೆದ ವರ್ಷ ಸಾರ್ವಜನಿಕರು ಪರದಾಡಿದ್ದ ಕಹಿ ನೆನಪು ಇದ್ದರೂ ಸೋಂಕುಪೀಡಿತರ ಆರೈಕೆಗೆ ಹಾಸಿಗೆಗಳ ಸಾಮರ್ಥ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿಲ್ಲ. ಕಾಯಿಲೆಪೀಡಿತರು ಈಗಲೂ ಆಸ್ಪತ್ರೆಯಲ್ಲಿ ಸುಲಭವಾಗಿ ದಾಖಲಾಗಲು ಸಾಧ್ಯವಾಗುತ್ತಿಲ್ಲ. ಪ್ರಭಾವಿಗಳೇ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವಂತಹ ಸನ್ನಿವೇಶ ಇರುವಾಗ ಇನ್ನು ಜನಸಾಮಾನ್ಯರ ಪಾಡೇನು? ಕೋವಿಡ್ ಪರೀಕ್ಷಾ ವರದಿ ಅನಾರೋಗ್ಯಪೀಡಿತರ ಕೈಗೆ ಬೇಗ ಸೇರದಿರುವುದು ಕೂಡ ಚಿಕಿತ್ಸೆ ಪಡೆಯುವುದನ್ನು ವಿಳಂಬಗೊಳಿಸಿದೆ. ಸೋಂಕುಪೀಡಿತರ ಆರೈಕೆಗೆ ಬಹುಮುಖ್ಯವಾಗಿ ಬೇಕಾಗಿರುವ ಆಮ್ಲಜನಕ ಸಿಲಿಂಡರ್‌ಗಳ ಕೊರತೆ ಇದೆ ಎಂಬ ವರದಿಗಳಿವೆ. ಇದಕ್ಕೆ ಪ್ರತಿಕ್ರಿಯಿಸಿರುವ ಆರೋಗ್ಯ ಸಚಿವ ಕೆ.ಸುಧಾಕರ್, 'ಬೇಡಿಕೆಗಿಂತ ಹೆಚ್ಚಿನ ಪ್ರಮಾಣದ ಆಮ್ಲಜನಕ ಉತ್ಪಾದನೆ ರಾಜ್ಯದಲ್ಲಿ ಆಗುತ್ತಿದೆ' ಎಂದು ಟ್ವೀಟ್ ಮಾಡಿದ್ದಾರೆ. ಆಮ್ಲಜನಕದ ಉತ್ಪಾದನೆಯಾದರಷ್ಟೇ ಸಾಲದು, ಎಲ್ಲೆಲ್ಲಿ ಬೇಡಿಕೆ ಇದೆಯೋ ಅಲ್ಲಿಗೆ ಪೂರೈಸುವ ಕೆಲಸವೂ ಆಗಬೇಕಲ್ಲ? ಕೋವಿಡ್ ನಿಯಂತ್ರಣಕ್ಕೆ ಮಾರ್ಗಸೂಚಿಯನ್ನು ಇನ್ನಷ್ಟು ಬಿಗಿಗೊಳಿಸಿರುವ ಸರ್ಕಾರ, ಮದುವೆಯಂತಹ ಸಮಾರಂಭಗಳಿಗೆ ಜಿಲ್ಲಾಧಿಕಾರಿಯಿಂದ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ. ಅತಿಥಿಗಳ ಸಂಖ್ಯೆಯ ಮೇಲೆ ನಿರ್ಬಂಧ ವಿಧಿಸಲು ಪಾಸ್ ನೀಡಲಾಗುತ್ತದೆ ಎಂದೂ ತಿಳಿಸಲಾಗಿದೆ. ಇಂತಹ ನಿಯಮ ಕಾರ್ಯಸಾಧುವೇ ಎಂಬುದನ್ನು ಸರ್ಕಾರ ಮರುಪರಿಶೀಲನೆ ನಡೆಸಬೇಕು. ಸೋಂಕು ಹರಡುವಿಕೆ ನಿಯಂತ್ರಿಸುವಲ್ಲಿ ಸಾರ್ವಜನಿಕರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎನ್ನುವಲ್ಲಿ ಎರಡು ಮಾತಿಲ್ಲ. ಆದರೆ, ಸರ್ಕಾರ ಕೇವಲ ಮಾರ್ಗಸೂಚಿ ರೂಪಿಸುತ್ತಾ ಕಾಲ ಕಳೆದರೆ ಸಾಲದು. ಚಿತಾಗಾರದ ಕಾರ್ಮಿಕರೂ ಸೇರಿದಂತೆ ಕೋವಿಡ್ ಸೇನಾನಿಗಳಿಗೆ ಸಮರ್ಪಕ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕು. ಆದ್ಯತೆಯ ಮೇರೆಗೆ ಸಂಬಳ ಬಿಡುಗಡೆ ಮಾಡಬೇಕು. ಆಮ್ಲಜನಕದ ಸಿಲಿಂಡರ್‌ಗಳು ಎಲ್ಲೆಡೆ ಸಿಗುವಂತೆ ನೋಡಿಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸೋಂಕುಪೀಡಿತರು ಆಸ್ಪತ್ರೆಗೆ ದಾಖಲಾಗಲು ಪರದಾಡುವುದನ್ನು ತಪ್ಪಿಸಬೇಕು.

ದಿನದ ಟ್ವೀಟ್

ದಯಮಾಡಿ ಆರಂಭಿಸಿ

ಬೆಂಗಳೂರಿನ ಲಾಲ್‌ಬಾಗ್ ಬಳಿ ಇಂದು ಬೆಳಿಗ್ಗೆ ಆಟೊರಿಕ್ಷಾ ಚಾಲಕನೊಬ್ಬ ತರಕಾರಿ ಮಾರಾಟಗಾರರಿಗೆ ಐದು ಮಾಸ್ಕ್‌ಗಳನ್ನು ದಾನ ಮಾಡುವುದನ್ನು ಕಂಡೆ. ಹೀಗೇಕೆ ಕೊಟ್ಟೆ ಎಂದು ಕೇಳಿದೆ. ಇವರು ಮಾಸ್ಕ್ ಕೊಳ್ಳುವುದಿಲ್ಲ, ಅದಕ್ಕೆ ಕೊಟ್ಟೆ ಎಂದು ಉತ್ತರಿಸಿದ. ಮಹತ್ವದ ಪಾಠವೊಂದನ್ನು ಅವನು ಕಲಿಸಿದ್ದಾನೆ. ಅರ್ಹರಿಗೆ ಮಾಸ್ಕ್‌ಗಳನ್ನು ಉಚಿತವಾಗಿ ಹಂಚಿ. ನಾನು ಪಾಠ ಕಲಿತಿದ್ದೇನೆ ಮತ್ತು ಇಂದಿನಿಂದ ಪ್ರಾರಂಭಿಸಿದ್ದೇನೆ. ನಿಮಗೆ ಸಾಧ್ಯವಾಗುವುದಾದರೆ... ದಯವಿಟ್ಟು ಆರಂಭಿಸಿ.

ಭಾಸ್ಕರ್ ರಾವ್, ಪೊಲೀಸ್ ಅಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 19-4-1996

• ಕೌಲ್ ರಾಜೀನಾಮೆಗೆ ಹೆಚ್ಚುತ್ತಿರುವ ಒತ್ತಡ

ನವದೆಹಲಿ, ಏ. 18 (ಪಿಟಿಐ)– ವಸತಿ ಹಗರಣದಲ್ಲಿ ತಮ್ಮ ಪಾತ್ರದ ಬಗ್ಗೆ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಅಧಿಕಾರ ತ್ಯಾಗ ಮಾಡಲು ಹಿಮಾಚಲ ಪ್ರದೇಶದ ರಾಜ್ಯಪಾಲೆ ಶೀಲಾ ಕೌಲ್ ಅವರು ತೀವ್ರ ಒತ್ತಡಕ್ಕೆ ಒಳಗಾಗಿದ್ದಾರೆ.

ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಅವರು ಈ ಸಂಬಂಧ ಕ್ರಮ ತೆಗೆದುಕೊಳ್ಳಲು ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರಿಗೆ ಸೂಚಿಸಿದ್ದಾರೆ. ಹೀಗಾಗಿ, ಯಾವುದೇ ಕ್ಷಣದಲ್ಲಿ ಶೀಲಾ ಕೌಲ್ ಅವರು ರಾಜ್ಯಪಾಲ ಹುದ್ದೆಗೆ ರಾಜೀನಾಮೆ ನೀಡಬಹುದು ಎಂಬ ಗುಲ್ಲು ಶಿಮ್ಲಾ ಮತ್ತು ದೆಹಲಿಯಲ್ಲಿ ಇಂದು ಹರಡಿತ್ತು.

• ಚುನಾವಣಾ ಫಲಿತಾಂಶ ಶೀಘ್ರ ಪ್ರಕಟಣೆಗೆ ಆಯೋಗದ ಕ್ರಮ

ನವದೆಹಲಿ, ಏ. 18 (ಪಿಟಿಐ)– ಗೆಲ್ಲುವ ಹಾಗೂ ಸೋಲುವ ಅಭ್ಯರ್ಥಿಗಳ ನಡುವಿನ ಅಂತರ ಒಟ್ಟು ಮತದಾನದ ಶೇಕಡ ಐದಕ್ಕಿಂತ ಹೆಚ್ಚಿದ್ದರೆ ವಿಳಂಬ ಮಾಡದೇ ಫಲಿತಾಂಶ ಪ್ರಕಟಿಸಲು ಚುನಾವಣಾ ಅಧಿಕಾರಿಗೇ ಅಧಿಕಾರ ನೀಡುವ ಮಹತ್ವದ ನಿರ್ಧಾರವನ್ನು ಚುನಾವಣಾ ಆಯೋಗ ಇಂದು ತೆಗೆದುಕೊಂಡಿತು.

ಈ ಅಂತರ ಶೇಕಡ ಐದಕ್ಕಿಂತ ಕಡಿಮೆ ಇದ್ದರೆ ಫಲಿತಾಂಶ ಪ್ರಕಟಕ್ಕೆ ಮುನ್ನ ಚುನಾವಣಾ ಅಧಿಕಾರಿಗಳು ಆಯೋಗದ ಅನುಮತಿ ಪಡೆದುಕೊಳ್ಳಬೇಕು ಎಂದು ಆಯೋಗದ ವಕ್ತಾರರು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 19-4-1971

• ಬಾಂಗ್ಲಾದೇಶದ ಪ್ರಥಮ ರಾಯಭಾರ ಕಚೇರಿ ಕಲ್ಕತ್ತೆಯಲ್ಲಿ ಅಸ್ತಿತ್ವಕ್ಕೆ

ಕಲ್ಕತ್ತ, ಏ. 18– ಇಲ್ಲಿರುವ ಪಾಕಿಸ್ತಾನಿ ಸಹಾಯಕ ಹೈಕಮಿಷನ್ ಕಚೇರಿಯು ಇಂದು ಮಧ್ಯಾಹ್ನ ಬಾಂಗ್ಲಾದೇಶದ ಧ್ವಜವನ್ನು ಹಾರಿಸಿ, ವಿದೇಶದಲ್ಲಿ ನವೋದಿತ ಗಣರಾಜ್ಯದ ಪ್ರಥಮ ರಾಯಭಾರ ಕಚೇರಿಯಾಗಿ ಪರಿವರ್ತಿತಗೊಂಡಿತು.

ಮಧ್ಯ ಕಲ್ಕತ್ತದಲ್ಲಿರುವ ಈ ಕಚೇರಿಯ ಮೇಲೆ ಧ್ವಜವನ್ನು ಹಾರಿಸಿದ ಸಹಾಯಕ ಹೈಕಮಿಷನರ್ ಹುಸೇನ್ ಅಲಿಯವರು, ಬಾಂಗ್ಲಾದೇಶದ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸಬೇಕೆಂಬ ತಮ್ಮ ನಿರ್ಧಾರಕ್ಕೆ ಮೂವರು ಸಹೋದ್ಯೋಗಿ ಅಧಿಕಾರಿಗಳ ಹೃತ್ಪೂರ್ವಕ ಬೆಂಬಲವಿದೆ ಎಂದಿದ್ದಾರೆ.

• ಭಾರತದಲ್ಲಿ ಕಾರಿನ ಬೆಲೆ ವಿದೇಶಕ್ಕಿಂತ ಶೇ 120ರಷ್ಟು ದುಬಾರಿ

ನವದೆಹಲಿ, ಏ. 18– ಭಾರತದಲ್ಲಿ ಶೇಕಡ 85ರಷ್ಟು ದೇಶೀಯ ವಸ್ತುಗಳಿಂದ ತಯಾರಿಸಿದ ಕಾರುಗಳ ಕಾರ್ಖಾನೆ ಬೆಲೆ ಯುರೋಪಿನಲ್ಲಿ ತಯಾರಾದ ಕಾರುಗಳ ಬೆಲೆಗಿಂತ ಶೇಕಡ 120ರಷ್ಟು ಹೆಚ್ಚಾಗಿದೆ.

1966ರ ಅಂಕಿ ಅಂಶಗಳನ್ನು ಆಧರಿಸಿದ ವಿಶ್ವಬ್ಯಾಂಕಿನ ವಿಶ್ಲೇಷಣೆಯಿಂದ ಇದು ಬೆಳಕಿಗೆ ಬಂದಿದೆ.

ಅಂತರರಾಷ್ಟ್ರೀಯ ಕಾರ್ಖಾನೆಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ಕಾರುಗಳ ಉತ್ಪಾದನೆ ಕಮ್ಮಿ ಇರುವುದು ಹಾಗೂ ಉಪಕರಣ ಮತ್ತು ಬಿಡಿ ಭಾಗಗಳ ಖರೀದಿಗೆ ಸಂಬಂಧಿಸಿದ ವೆಚ್ಚ ವಿಪರೀತವಾಗಿರುವುದೇ ಇದಕ್ಕೆ ಕಾರಣ.

ಭಾರತದ ಬಗೆಗಿನ ಅಂತರರಾಷ್ಟ್ರೀಯ ವರದಿಗಳ ಅಭಿಪ್ರಾಯದಲ್ಲಿ ಹುರುಳೆಷ್ಟು?

ಸರ್ವಾಧಿಕಾರವೂ ಇಲ್ಲ; ಧರ್ಮನಿರಪೇಕ್ಷವೂ ಅಲ್ಲ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಭಾರತವು ಒಂದು ಸರ್ವಾಧಿಕಾರಿ ದೇಶವೂ ಅಲ್ಲ, ನಿಜ ಅರ್ಥದ ಪ್ರಜಾತಂತ್ರ ರಾಷ್ಟ್ರವೂ ಅಲ್ಲ; ಅಭಿವೃದ್ಧಿ ಹೊಂದಿದ ಅರ್ಥ ವ್ಯವಸ್ಥೆಯೂ ಅಲ್ಲ, ಹಿಂದುಳಿದ ದೇಶವೂ ಅಲ್ಲ ಎಂಬಂತೆ ಕಾಣುತ್ತಿದೆ. ದೇಶವು ವೈಜ್ಞಾನಿಕವಾಗಿ ಭಾರಿ ಸಾಧನೆಗಳನ್ನು ಮಾಡಿದೆ. ಆದರೆ ಹಲವರು ಪುರಾತನ ಮೂಢನಂಬಿಕೆಗಳನ್ನು ಇಂದಿಗೂ ನೆಚ್ಚಿಕೊಂಡಿದ್ದಾರೆ. ಇದು ಸರ್ವಾಧಿಕಾರದ ಹಿಂದೂ ರಾಷ್ಟ್ರವೂ ಅಲ್ಲ, ಧರ್ಮನಿರಪೇಕ್ಷ ತತ್ವಗಳನ್ನು ಆಧರಿಸಿದ ಆಧುನಿಕ ರಾಷ್ಟ್ರವೂ ಅಲ್ಲ. ಭಾರತ ಮತ್ತು ಭಾರತದ ಪರಿಕಲ್ಪನೆಯು ಯಾವತ್ತಿಗೂ ಸಂಪೂರ್ಣವಾಗಿ ಒಂದು ಚೌಕಟ್ಟಿನಲ್ಲಿ ಕುಳಿತುಕೊಳ್ಳುವಂಥದ್ದಾಗಿರಲಿಲ್ಲ. ಇದು ಯಾವತ್ತಿಗೂ ಒಂದು ನಿಗೂಢವೇ.

ಚಲನಶೀಲ ಪ್ರಜಾತಂತ್ರ ವ್ಯವಸ್ಥೆಗಳನ್ನು ಅಳತೆ ಮಾಡುವ ಅಂತರರಾಷ್ಟ್ರೀಯ ವರದಿಗಳು ಭಾರತದ ಸ್ಥಾನವನ್ನು ಕೆಳಕ್ಕೆ ತಂದಿರುವುದು ಪೂರ್ತಿಯಾಗಿ ಸರಿಯಲ್ಲದಿರಬಹುದು. ಆದರೆ, ಭಾರತದ ಪ್ರಜಾತಂತ್ರವು ಕುಗ್ಗುವ, ದುರ್ಬಲವಾಗುವ ಅಪಾಯ ಎದುರಿಸುತ್ತಿದೆ. ಸೋವಿಯತ್ ರಷ್ಯಾದ ಸ್ಟಾಲಿನ್, ಜರ್ಮನಿಯ ಹಿಟ್ಲರ್‌ಗೆ ಹೋಲಿಕೆ ಮಾಡಬಹುದಾದ ಸರ್ವಾಧಿಕಾರಿಯೇ ನರೇಂದ್ರ ಮೋದಿ? ಅಥವಾ ಮೋದಿ ಅವರನ್ನು ಆಧುನಿಕ ಕಾಲಘಟ್ಟದ ನಿರಂಕುಶ ಆಡಳಿತಗಾರರಾದ ರಷ್ಯಾದ ಪುಟಿನ್, ಟರ್ಕಿಯ ಎರ್ಡೋಗನ್, ಚೀನಾದ ಷಿ ಜಿನ್‌ಪಿಂಗ್ ಅವರಿಗೆ ಹೋಲಿಸಬಹುದೇ? ಇಂತಹ ಹೋಲಿಕೆಗಳು ಒಪ್ಪುವಂಥವಲ್ಲ.

ಮೋದಿ ಅವರ ಕಡು ಟೀಕಾಕಾರರು– ರಾಜಕಾರಣಿಗಳು ಹಾಗೂ ಬುದ್ಧಿಜೀವಿಗಳು– ಮುಕ್ತವಾಗಿ ಓಡಾಡಿಕೊಂಡಿದ್ದಾರೆ, ತಮಗೆ ಇಷ್ಟಬಂದಾಗ ಮೋದಿ ಅವರ ಮೇಲೆ ವಾಗ್ದಾಳಿ ನಡೆಸುತ್ತಿದ್ದಾರೆ, ಅವರ ವಿರುದ್ಧ ಬಹಳಷ್ಟು ಬರೆಯುತ್ತಿದ್ದಾರೆ. ರಾಹುಲ್ ಗಾಂಧಿ, ಮಮತಾ ಬ್ಯಾನರ್ಜಿ, ಪ್ರತಾಪ್ ಭಾನು ಮೆಹ್ತಾ ಅಥವಾ ರಾಮಚಂದ್ರ ಗುಹಾ ಅವರು ಚೀನಾ ಅಥವಾ ರಷ್ಯಾದಲ್ಲಿ ಮುಕ್ತವಾಗಿ ಓಡಾಡಿಕೊಂಡು ಇರಬಹುದಿತ್ತೇ? ಊಹಿಸಿಕೊಳ್ಳಿ. ಹಾಗಾದರೆ ಮೋದಿ ಅವರು ಉದಾರವಾದಿ, ಪ್ರಜಾತಂತ್ರವಾದಿ ವ್ಯಕ್ತಿಯೇ? ಅವರಿಗೆ ಅಂತಹ ಪ್ರಮಾಣಪತ್ರವನ್ನು ಯಾರೂ ಕೊಡಲಿಕ್ಕಿಲ್ಲ. ಅವರನ್ನು ಆರಾಧಿಸುವ ಕೋಟ್ಯಂತರ ಅಭಿಮಾನಿಗಳು ಅವರ ಸರ್ವಾಧಿಕಾರಿ ನಡೆಗಳನ್ನು ಅನುಮೋದಿಸುತ್ತಾರೆ. ಮೋದಿ ಅವರ ಹಿಂದೆ ಇದ್ದವರು ದುರ್ಬಲರಾಗಿದ್ದರು. ದೇಶಕ್ಕೊಬ್ಬ ಉದ್ಧಾರಕ ಬೇಕಿತ್ತು, ಮೋದಿ ಆ ಜಾಗಕ್ಕೆ ಬಂದರು.

ಮೋದಿ ಅವರು ಆಧುನಿಕರೂ ಹೌದು, ಮೂಢನಂಬಿಕೆ ಹೊಂದಿರುವವರೂ ಹೌದು. ಸೌರವಿದ್ಯುತ್, ರಫೇಲ್ ಯುದ್ಧ ವಿಮಾನದ ಪರ ಮಾತನಾಡುತ್ತಾರೆ. ಕೊರೊನಾ ವೈರಾಣು ಓಡಿಸಲು ಶುಭ ವೇಳೆಯಲ್ಲಿ ಶಂಖ ಊದುವ, ಗಂಟೆ ಬಾರಿಸುವ ಕ್ರಿಯೆಯನ್ನೂ ನೆಚ್ಚಿಕೊಳ್ಳುತ್ತಾರೆ. ದೇಶದ ವೈಜ್ಞಾನಿಕ ಮುನ್ನಡೆಯನ್ನು ತೋರಿಸುತ್ತ, ಭಾರತವು ವಿಶ್ವದಲ್ಲಿನ ಅತಿದೊಡ್ಡ ಲಸಿಕೆ ತಯಾರಿಕಾ ರಾಷ್ಟ್ರ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆದರೆ ಕೋವಿಡ್ ಶಮನಕ್ಕೆ ಒಬ್ಬ ಬಾಬಾ ತಯಾರಿಸಿದ, ಆಧಾರವಿಲ್ಲದ ಔಷಧವನ್ನು ತಮ್ಮ ಸಂಪುಟದ ಸಹೋದ್ಯೋಗಿಗಳು ಬಿಡುಗಡೆ ಮಾಡಿದಾಗ ಅವರನ್ನು ಮೋದಿ ಖಂಡಿಸುವುದಿಲ್ಲ. ಮೋದಿ ಅವರು ಒಂದರ್ಥದಲ್ಲಿ, ಮೂಢನಂಬಿಕೆಗಳನ್ನು ಬಿಡದೆಯೇ ಆಧುನಿಕತೆಯನ್ನು ಅಪ್ಪಿಕೊಳ್ಳುವ ಅಸಂಖ್ಯ ಭಾರತೀಯರಂತೆಯೇ.

ಭಾರತದ ಹಲವು ಬುದ್ಧಿಜೀವಿಗಳು ಹೇಳುತ್ತಿರುವಂತಹ ಸರ್ವಾಧಿಕಾರಿ ಮೋದಿ ಅಲ್ಲ; ಆದರೆ, ಮೋದಿ ಅವರ ಭಕ್ತರಿಗೆ ಅವರ ಮೇಲಿರುವ 'ಸರ್ವಾಧಿಕಾರಿ' ಎಂಬ ಆರೋಪಗಳನ್ನು ಪರಿಣಾಮಕಾರಿಯಾಗಿ ಅಲ್ಲಗಳೆಯಲೂ ಆಗಿಲ್ಲ. ಅಗತ್ಯ ಸಮಾಲೋಚನೆಗಳು ಇಲ್ಲದೆ ಸುಗ್ರೀವಾಜ್ಞೆ ತರುವುದು, ಅವರ ತೀಕ್ಷ್ಣ ಭಾಷಣಗಳು, ಅವರ ಪಕ್ಷವು ರಾಷ್ಟ್ರೀಯತೆಯ ಕುರಿತು ನೀಡುವ ಸಂಕುಚಿತ ವ್ಯಾಖ್ಯಾನ, ಟೀಕೆಗಳಿಗೆ ಅಸಹಿಷ್ಣುವಾಗಿರುವುದು, ಸಿಎಎ (ಪೌರತ್ವ ತಿದ್ದುಪಡಿ ಕಾಯ್ದೆ), ಬಹುಸಂಖ್ಯಾತವಾದಿ ರಾಜಕಾರಣ... ಇವೆಲ್ಲವುಗಳ ಪರಿಣಾಮವಾಗಿ ಕೆಲವರು ಕಾನೂನನ್ನು ಕೈಗೆತ್ತಿಕೊಂಡು ಅಲ್ಪಸಂಖ್ಯಾತ ಸಮುದಾಯದ ಅಮಾಯಕರನ್ನು ಹೊಡೆದು ಸಾಯಿಸಿದ ಪ್ರಸಂಗಗಳು ವರದಿಯಾಗಿವೆ.

ಹೀಗಿದ್ದರೂ, ಭಾರತದ್ದು ಸರ್ವಾಧಿಕಾರಿ ಪ್ರಭುತ್ವವೇ? ಇಲ್ಲಿನ ಜನ ಸಂತಸದಿಂದ ಇದ್ದಾರೆಯೇ? ಅವರು ಮುಕ್ತರಾಗಿ ಇದ್ದಾರೆಯೇ?

ಬೇರೆ ಬೇರೆ ದೇಶಗಳಲ್ಲಿ ಪ್ರಜಾತಂತ್ರದ ಸ್ಥಿತಿ ಹೇಗಿದೆ ಎಂಬುದನ್ನು ವಾರ್ಷಿಕ ವರದಿಯ ರೂಪದಲ್ಲಿ ಪ್ರಕಟಿಸುವ ಸ್ವೀಡನ್ನಿನ ವಿ-ಡೆಮ್ ಇನ್‌ಸ್ಟಿಟ್ಯೂಟ್, ತನ್ನ 2021ರ ವರದಿಯಲ್ಲಿ, ಭಾರತದ್ದು 'ಚುನಾಯಿತ ಸರ್ವಾಧಿಕಾರ' ಎಂದು ಬಣ್ಣಿಸಿದೆ. ಇದು ಸತ್ಯವೇ ಆಗಿದ್ದಿದ್ದರೆ, ಭಾರತದ ಚುನಾವಣಾ ವ್ಯವಸ್ಥೆ ಹಾಗೂ ಚುನಾವಣೆ ನಡೆಸುವ ಸಂಸ್ಥೆಗಳು ಸಂಪೂರ್ಣ ಶರಣಾಗಿ, ಅದರ ಅಧಿಕಾರಿಗಳು ಆಡಳಿತ ಪಕ್ಷದ ಅಡಿಯಾಳುಗಳಾಗಿ ಬದಲಾಗಿದ್ದಿದ್ದರೆ ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರ, ಪಂಜಾಬ್‌ನಲ್ಲಿ ಅಮರಿಂದರ್ ಸಿಂಗ್ ನೇತೃತ್ವದ ಸರ್ಕಾರ, ಆಂಧ್ರಪ್ರದೇಶದಲ್ಲಿ ಜಗನ್ಮೋಹನ್ ರೆಡ್ಡಿ ನೇತೃತ್ವದ ಸರ್ಕಾರ, ತೆಲಂಗಾಣದಲ್ಲಿ ಕೆ. ಚಂದ್ರಶೇಖರ ರಾವ್ ನೇತೃತ್ವದ ಸರ್ಕಾರ ಇರುತ್ತಿರಲಿಲ್ಲ. ಭಾರತದ ಸರಿಸುಮಾರು ಶೇಕಡ 70ರಷ್ಟು ಪ್ರದೇಶವನ್ನು ಬಿಜೆಪಿಯೇತರ ಪಕ್ಷಗಳು ಆಳುತ್ತಿವೆ.



ವಾಷಿಂಗ್ಟನ್ ಮೂಲದ 'ಫ್ರೀಡಂ ಹೌಸ್' ಸೂಚ್ಯಂಕವು ಭಾರತದ ಪ್ರಜಾತಂತ್ರ 'ಭಾಗಶಃ ಮುಕ್ತ' ವಾಗಿದೆ ಎಂದು ಹೇಳಿದೆ. ಇಲ್ಲಿನ ಪ್ರಜಾತಂತ್ರ ವ್ಯವಸ್ಥೆಯನ್ನು ಬಾಂಗ್ಲಾದೇಶದ ವ್ಯವಸ್ಥೆಗಿಂತ ಕಡಿಮೆ ಮಟ್ಟದಲ್ಲಿ ಇರಿಸಿದೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ವರದಿಯ 'ಜಗತ್ತಿನಲ್ಲಿನ ಸಂತಸದ ಪ್ರಮಾಣವನ್ನು ಹೇಳುವ ವರದಿ'ಯು 149 ದೇಶಗಳ ಪೈಕಿ ಭಾರತಕ್ಕೆ 139ನೆಯ ಸ್ಥಾನವನ್ನು ನೀಡಿದೆ. ಲಿಬಿಯಾ (80), ಬೆಲಾರಸ್ (75), ವೆನೆಜುವೆಲಾ (107), ನೈಗರ್ (96), ಪಾಕಿಸ್ತಾನ (105), ಸೌದಿ ಅರೇಬಿಯಾ (21) ದೇಶಗಳಿಗಿಂತ ಕಡೆಯ ಸ್ಥಾನ ಭಾರತಕ್ಕೆ ದೊರೆತಿದೆ.

ಸೌದಿ ಅರೇಬಿಯಾದಲ್ಲಿ ಭಿನ್ನಮತ ವ್ಯಕ್ತಪಡಿಸಿದ್ದ ಪತ್ರಕರ್ತರೊಬ್ಬರನ್ನು ಕತ್ತರಿಸಿ ಹಾಕಲಾಯಿತು. ಅವರ ಮೃತದೇಹದ ತುಂಡುಗಳನ್ನು ಆ್ಯಸಿಡ್‌ನಲ್ಲಿ ಕರಗಿಸಲಾಯಿತು. ಸೌದಿ ಅರೇಬಿಯಾದಲ್ಲಿ ಇಸ್ಲಾಮಿಕ್ ಕಾನೂನು ಉಲ್ಲಂಘಿಸಿದವರ ತಲೆಯನ್ನು ಸಾರ್ವಜನಿಕವಾಗಿ ಕಡಿದುಹಾಕಲಾಗುತ್ತದೆ. 'ವ್ಯಭಿಚಾರ' ನಡೆಸಿದವಳನ್ನು ಕಲ್ಲು ಹೊಡೆದು ಸಾಯಿಸಲಾಗುತ್ತದೆ. ಸಂತಸದ ಸೂಚ್ಯಂಕದಲ್ಲಿ ಇಂತಹ ದೇಶಕ್ಕಿಂತಲೂ ಕಡಿಮೆ ಸ್ಥಾನ ಭಾರತಕ್ಕೆ ದೊರೆತಾಗ, ವರದಿಯ ಬಗ್ಗೆ ಅಪನಂಬಿಕೆ ಮೂಡುತ್ತದೆ, ವರದಿಯನ್ನು ಹರಿದು ಎಸೆಯಬೇಕು ಅನ್ನಿಸುತ್ತದೆ. ಹೀಗಿದ್ದರೂ, ಎಲ್ಲ ವರದಿಗಳನ್ನು ಅಲ್ಲಗಳೆಯುವುದು ವಿವೇಕದ ಕೆಲಸ ಆಗುವುದಿಲ್ಲ.

ಬರ್ಟ್ರಂಡ್ ರಸೆಲ್ ಹೇಳಿದಂತೆ, ಬಲಿಷ್ಠ ಆಡಳಿತಗಾರರಲ್ಲಿ ಹಲವರು ಕೆಲವು ತಪ್ಪು ನಂಬಿಕೆಗಳನ್ನು ಬೆಳೆಸಿಕೊಳ್ಳುವುದಿದೆ. ತಾವು ಆಡಳಿತ ನಡೆಸುತ್ತಿರುವ ದೇಶವು ಏಕರೂಪದ್ದಾಗಿದೆ, ಇಲ್ಲಿ ಬಹುತ್ವ ಇಲ್ಲ ಎಂದು ಭಾವಿಸುವುದಿದೆ. ಇಂತಹ ಆಡಳಿತಗಾರರು ಜನರಿಗೆ ಬೇಕಿರುವಂತಹ ವ್ಯವಸ್ಥೆಯನ್ನು ಕಟ್ಟುವ ಬದಲು, ಜನರೇ ವ್ಯವಸ್ಥೆಗೆ ಹೊಂದಿಕೊಳ್ಳಬೇಕು ಎಂದು ಬಯಸುತ್ತಾರೆ. ಮನುಷ್ಯರು ಹಾಗೂ ಅವರು ಕಟ್ಟಿಕೊಳ್ಳುವ ಸಮುದಾಯಗಳು ಅತ್ಯಂತ ಸಂಕೀರ್ಣವೂ ಅತ್ಯಂತ ವೈವಿಧ್ಯಮಯವೂ ಹೌದು. ಬಹುತ್ವ, ಸೃಜನಶೀಲತೆ, ಸ್ವಾತಂತ್ರ್ಯ, ನಿರ್ಬಂಧಗಳಿಂದ ಮುಕ್ತವಾಗಿರುವುದು ಅಭಿವೃದ್ಧಿ ಮತ್ತು ಸಂತಸಕ್ಕೆ ಅತ್ಯಗತ್ಯ. ಪ್ರಜಾತಂತ್ರ ಹಾಗೂ ನಾಗರಿಕತೆ ಅರಳಲು ಕೂಡ ಇವು ಬೇಕು.

ಶಾಂತಿ ಮಾತುಕತೆಗಿಂತ ಕದನವೇ ಲೇಸು ಎಂಬ ಸಲಹೆಗಳು, ಸ್ವಾವಲಂಬನೆ ಹೆಸರಿನಲ್ಲಿ ಸಂಕುಚಿತ ನೋಟ ಹೊಂದುವುದು ಒಳಿತು ಎಂಬ ಮಾತುಗಳು ತಮ್ಮ ಸುತ್ತ ಇರುವವರಿಂದ ಬಂದಾಗಲೂ ಆಡಳಿತದಲ್ಲಿ ಇರುವವರು ಆ ಮಾತುಗಳಿಗೆ ಮಾರುಹೋಗಬಾರದು. ಆ ರೀತಿಯ ಮಾರ್ಗವನ್ನು ಹಿಡಿದರೆ ಅದು ಆರ್ಥರ್ ಕೋಸ್ಲರ್ ಹೇಳಿದಂತೆ ಭಾರತವನ್ನು ಬೌದ್ಧಿಕವಾಗಿ ತಪ್ಪುದಾರಿಗೆ ಒಯ್ಯಬಹುದು. ದೇಶಗಳ ಒಕ್ಕೂಟದಲ್ಲಿ ಮಾರ್ಗದರ್ಶಕ ಆಗುವ ಸಾಮರ್ಥ್ಯ ಭಾರತಕ್ಕಿದೆ. ಪ್ರಧಾನಿ ಮೋದಿ ಅವರು ತಮಗೆ ಸಿಕ್ಕಿರುವ ಜನಾದೇಶ ಹಾಗೂ ಅವರಿಗೆ ಇರುವ ಸ್ಥಾನಮಾನ ಬಳಸಿಕೊಂಡು ಅಂತಹ ಸ್ಥಾನಕ್ಕೆ ಭಾರತವನ್ನು ಒಯ್ದರೆ, ಅದು ಅವರು ನೀಡುವ ದೊಡ್ಡ ಕೊಡುಗೆಯಾಗುತ್ತದೆ.

ಚುರುಮುರಿ

'ಆಕಾಶ'ದಿಂದ ಜಾರಿ...

• ಸುಮಂಗಲಾ

ಪೆನ್ನು, ಹಾಳೆ ಹಿಡಿದಿದ್ದ ಬೆಕ್ಕಣ್ಣ ಹೊಸ ಉತಾವಳಿಯಲ್ಲಿತ್ತು. 'ನಾ ಒಂದ್ ಕವನ ಬರದೀನಿ, ಓದ್ತೀನಿ ಕೇಳು' ಎಂದಿತು.

'ಅಲ್ಲಲೇ... ಅಲ್ಲಿ ನಿಮ್ಮ ಯೆಡ್ಯೂರಜ್ಜಾರು ಎರಡನೇ ಸಲ ಕೊರೊನಣ್ಣನ ಹೊಡತ ತಿಂದು ಆಸ್ಪತ್ರೆಯೊಳಗ ಮಕ್ಕಂಡಾರೆ, ಜ್ವರ ಬಂದು ಕೆಮ್ಮಾಕೆ ಹತ್ತಿದ್ದ ಕುಮಾರಣ್ಣಂಗೇ ಹಾಸಿಗೆ ಸಿಗದೆ, ವೈದ್ಯಕೀಯ ಸಚಿವರ ವಶೀಲಿ ಮ್ಯಾಗೆ ಆಸ್ಪತ್ರಿಗೆ ಸೇರಿಸಿಕೊಂಡರಂತ. ಆಮ್ಲಜನಕ, ರೆಮ್ಡಿಸಿವಿಯರ್ ಕೊರತೆ ಭಯಂಕರ ಐತಂತೆ... ಹಿಂತಾವೆಲ್ಲ ಗೋಳಾಟದಾಗೆ ನೀ ಕವನ ಗೀಚಿಕೋತ ಕುಂತಿ' ಎಂದು ರೇಗಿದೆ.

'ಅಜ್ಜಾರು ಆರಾಮಾಗ್ತಾರೇಳು. ಮುಕ್ಕೋಟಿ ಕನ್ನಡಿಗರಷ್ಟೇ ಅಲ್ಲ, ಮೋದಿಮಾಮಾ, ಶಾಣ್ಯಾ ಅಂಕಲ್ಲೂ ಎಲ್ಲರ ಕೃಪೆ ಅವರ ಮ್ಯಾಗೆ ಐತಿ. ಯಾರೋ ಶ್ರೀಸಾಮಾನ್ಯ ಇರಬಕಂತ ಆಸ್ಪತ್ರಿಯೋರು ಮದ್ಲಿಗೆ ಹಾಸಿಗಿ ಇಲ್ಲ ಅಂದಿದ್ರಂತ, ಕುಮಾರಣ್ಣ ಅಂತ ಗೊತ್ತಾಗ ತಿದ್ದಂತೆ ಮಕ್ಕೋ ಬಾಪ್ಪ ಅಂತ ಕರೆದಾರ. ಇವೆಲ್ಲ ಕಣ್ಣಿಗೆ ಕಾಣೂ ಗೋಳಾಟಗಳು. ಅಗೋಚರ ಗೋಳಾಟಗಳು ರಗಡ್ ಅದಾವು... ಅಂಥ ಒಂದ್ ವಿಷಯದ ಮ್ಯಾಗ ನಾ ಚರಮಗೀತೆ ಬರದೀನಿ... ಕೇಳು' ಎಂದ ಬೆಕ್ಕಣ್ಣ ಓದತೊಡಗಿತು.

'ಅಂದು ನಿಮ್ಮೆಲ್ಲರ ಆಕಾಶವಾಣಿ
ನಾನೀಗ ಅರೆಸತ್ತವಾಣಿ,
ಅಂದು ಕನ್ನಡಕುಲಪುತ್ರಿ
ಇಂದು ಕಂಗ್ಲಿಷ್ ಗುರು!
ಸಾಹಿತ್ಯ ಸಂಜೆ, ಸಂಗೀತ ಸುಧೆ
ಈ ಹಳೆಹೆಸರುಗಳ ಬಿಸಾಕಿ;
ಇನ್ನೀಗ ಲಿಟರರಿ ಗುರು, ಟೆಕ್ ಗುರು ಇತ್ಯಾದಿ
'ಗುರು'ಗಳ ಸಂತೆಯು... ವಿಶ್ವ'ಗುರು'ವಿನ
'ಮನ್ ಕೀ ಬಾತ್' ಕೇಳುವ ನೀವು
ಆ ಮನದೊಳಗಿನ ಸುಪ್ತ ಮಾತಿಗೆ ಕಿವುಡು;
ಕರುನಾಡಿನ ಎಲ್ಲ ಆಕಾಶವಾಣಿ ಕೇಂದ್ರಗಳು
ಇನ್ನೀಗ ಉಲಿಯಲಿವೆ
ಬೆಂಗಳೂರು ಕೇಂದ್ರದ ಪಿಸುಮಾತು;
ಅಂದು ಕನ್ನಡಿಗರೊಬ್ಬರು
ಆಕಾಶವಾಣಿಯೆಂಬ ಹೆಸರನಿಟ್ಟರು,
ಇಂದು ಅದರ ಬಹುತ್ವಕೊಂದು
ಮೊಳೆ ಹೊಡೆದು
'ಕೇಂದ್ರೀಕೃತ ಅರೆಸತ್ತವಾಣಿ'
ಫಲಕ ನೇತುಬಿಟ್ಟಿಹರು...'

ಬೆಕ್ಕಣ್ಣನ ಕವನ ವಾಚನ ಮುಗಿಯುವ ಲಕ್ಷಣವೇ ಇಲ್ಲ!

ಸಂಗತ

ವೈದ್ಯ ಪದವೀಧರರಿಗೆ 'ಪರೀಕ್ಷಾ' ಕಾಲ

ಸ್ನಾತಕೋತ್ತರ ಪದವಿ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದ ಯುವವೈದ್ಯರು, ಇತ್ತ ಪರೀಕ್ಷೆಯೂ ಇಲ್ಲ, ಅತ್ತ ಸೇವೆಗೂ ಲಭ್ಯರಿಲ್ಲ ಎಂಬಂಥ ಅತಂತ್ರ ಸ್ಥಿತಿಯಲ್ಲಿದ್ದಾರೆ

• ಡಾ. ಎಚ್.ಎಸ್.ಅನುಪಮಾ

ಕೊರೊನಾ ಜೊತೆಜೊತೆಗೇ ಬದುಕುವುದು ಹೇಗೆ ಎನ್ನುವುದನ್ನು ನಾವು ನಮ್ಮ ಬರಲಿರುವ ಪೀಳಿಗೆಗೆ ಶಿಕ್ಷಣದ ಮೂಲಕ ಹೇಳಿಕೊಡಬೇಕಾಗಿದೆ. ಆದರೆ ಈ ವೈರಸ್ ಇವತ್ತು ಇದೆ, ನಾಳೆ ಇಲ್ಲ ಎನ್ನುವ ಅತ್ಯಂತ ಬೇಜವಾಬ್ದಾರಿಯ ನಡೆಯಿಂದ ಶಿಸ್ತು, ಅದಕ್ಷತೆಯ ಬೀಜವನ್ನು ವಿದ್ಯಾರ್ಥಿಗಳಲ್ಲಿ ನಾವೇ ಬಿತ್ತುತ್ತಿದ್ದೇವೆ. ಚುನಾವಣಾ ರ‍್ಯಾಲಿಗಳು, ಕುಂಭಮೇಳವನ್ನು ನಡೆಸುವ, ಪ್ರವಾಸೋದ್ಯಮವೂ ಸೇರಿದಂತೆ ಇನ್ನಿತರ ಚಟುವಟಿಕೆಗಳನ್ನು ನಡೆಸುವ ಆಳುವ ವರ್ಗಗಳು ಪರೀಕ್ಷೆ ನಡೆಸುವುದಕ್ಕೆ ಮಾತ್ರ ಸಿದ್ಧವಾಗಿಲ್ಲ!

ದೇಶದಲ್ಲಿ ಅತ್ಯಂತ ತುರ್ತು ಎಂದು ಪರಿಗಣಿಸಲ್ಪಟ್ಟು ಚುನಾವಣೆಗಳು ನಡೆಯುತ್ತಿದ್ದರೆ, ಪರೀಕ್ಷೆಗಳು ಅತಿ ನಿರ್ಲಕ್ಷ್ಯಕ್ಕೆ ಒಳಪಟ್ಟು 'ಅವಸರವೂ ಸಾವಧಾನದ ಬೆನ್ನೇರಿದೆ'. ಇದರ ಮುಂದುವರಿಕೆ ಎಂಬಂತೆ, ಸ್ನಾತಕೋತ್ತರ ವೈದ್ಯಕೀಯ ಪದವಿಗಾಗಿ ಇದೇ 18ರಂದು ನಡೆಯಬೇಕಿದ್ದ ನೀಟ್ ಪರೀಕ್ಷೆ ಮುಂದೆ ಹೋಗಿದೆ. ಪರೀಕ್ಷೆಗಾಗಿ ಎಲ್ಲ ತಯಾರಿ ಮುಗಿದಿತ್ತು. ಹಾಲ್ ಟಿಕೆಟ್ ಬಂದಿತ್ತು. ಸಾಧಾರಣವಾಗಿ ಡಿಸೆಂಬರ್ ಕೊನೆಗೆ ಅಥವಾ ಜನವರಿ ಮೊದಲ ವಾರದಲ್ಲಿ ನಡೆಯಬೇಕಿದ್ದ ಪರೀಕ್ಷೆಗೆ ಕಳೆದ ವರ್ಷವಿಡೀ ಮನೆಯಲ್ಲೇ ಕೂತು, ಆನ್‌ಲೈನ್ ಕೋಚಿಂಗ್ ಪಡೆದ ವೈದ್ಯ ವಿದ್ಯಾರ್ಥಿಗಳು ಆನ್‌ಲೈನ್ ಪರೀಕ್ಷೆಗೆ ಸಿದ್ಧರಾಗಿದ್ದರು. ಆದರೆ ಕೊನೇ ಗಳಿಗೆಯಲ್ಲಿ ಓದುಕಳ್ಳರಾದ ಯಾರೋ ಸುಪ್ರೀಂ ಕೋರ್ಟ್‌ಗೆ ತೆರಳಿದರು. ಲಸಿಕೆ ಪಡೆಯದ ತಾವು ಕೋವಿಡ್ ಕಾಲದಲ್ಲಿ ಪರೀಕ್ಷೆ ಬರೆಯುವುದು ಕಷ್ಟ ಎಂದು ನ್ಯಾಯಾಲಯದ ಮುಂದೆ ಅಲವತ್ತುಕೊಂಡರು. ಪರೀಕ್ಷೆಗೆ ತಡೆಬಿತ್ತು.

ಒಂದೂಮುಕ್ಕಾಲು ಲಕ್ಷ ವೈದ್ಯ ಪದವೀಧರರು ಪರೀಕ್ಷೆಗೆ ತಯಾರಿ ನಡೆಸಿದ್ದರು. ಪರೀಕ್ಷೆ ಮುಗಿದಿದ್ದರೆ ಅಷ್ಟು ಜನ, ಕೋವಿಡ್ ಸೇರಿದಂತೆ ಎಲ್ಲ ರೋಗಿಗಳ ಸೇವೆಗೆ ಲಭ್ಯರಾಗುತ್ತಿದ್ದರು. ವೈದ್ಯರ ಕೊರತೆ ಎದುರಿಸುತ್ತಿರುವ ಆರೋಗ್ಯ ವ್ಯವಸ್ಥೆಯು ಒಂದಷ್ಟು ಹೊಸ, ಹುರುಪಿನ ವೈದ್ಯರನ್ನು ಪಡೆದು, ಈಗಾಗಲೇ ಅತಿಕೆಲಸದಿಂದ ಬಳಲಿದವರಿಗೆ ಕೊಂಚ ಉಸಿರಾಡುವಷ್ಟು ನಿರಾಳ ಹುಟ್ಟಿಸಬಹುದಿತ್ತು. ಆದರೆ ಇಂಥ ಯಾವ ದೂರದರ್ಶಿ ಯೋಚನೆಗಳಿಲ್ಲದ ಆಳುವವರು ಮತ್ತು ಓದುಕಳ್ಳರ ಕಾರಣದಿಂದ ಪರೀಕ್ಷೆಗಳು ಮತ್ತೆ ಮುಂದೆ ಹೋದವು.

ವೈದ್ಯಕೀಯ ಕ್ಷೇತ್ರಕ್ಕೆ ಕೋವಿಡ್ ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ. ಭೀತಿಯಿಂದಲೇ ತಮ್ಮ ವೃತ್ತಿಪರತೆಯನ್ನು ಪ್ರದರ್ಶಿಸುವ ಸವಾಲಿನ ಕಾಲ ಬಂದಿದೆ. ಒಂದುಕಡೆ, ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಆರೋಗ್ಯಸಂಸ್ಥೆಗಳಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ವೈದ್ಯರಿಗೆ ರಜೆಯಿಲ್ಲದೆ, ಬೇರೆ ರೋಗಿಗಳನ್ನು ನೋಡಲಿಕ್ಕೂ ಆಗದೆ ಒಂದೇಸಮ ಕೋವಿಡ್ ರೋಗಿಗಳ ಸಂಪರ್ಕದಲ್ಲಿ ಇದ್ದು ದೈಹಿಕ, ಮಾನಸಿಕ ಆರೋಗ್ಯ ಸಮತೋಲನ ತಪ್ಪುತ್ತಿದೆ. ಮತ್ತೊಂದೆಡೆ, ಖಾಸಗಿ ವಲಯದ ವೈದ್ಯ ಸಮೂಹ ಆಸ್ಪತ್ರೆಗಳಲ್ಲಿ ಸಹಾಯಕರಿಲ್ಲದ, ದುಬಾರಿ ಸಂಬಳ ಕೊಟ್ಟು ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾದ, ಬದಲಾಗುತ್ತಿರುವ ಸರ್ಕಾರದ ಆದೇಶಗಳಿಗೆ ಅನುಗುಣವಾಗಿ ತಮ್ಮ ಕ್ಲಿನಿಕ್- ಆಸ್ಪತ್ರೆಗಳನ್ನು ನವೀಕರಣಗೊಳಿಸಿ ದಿನನಿತ್ಯ ವರದಿ ಕಳಿಸಬೇಕಾದ ಭಾರಕ್ಕೆ ಅದಕ್ಷವಾಗುತ್ತ ಆಕ್ರೋಶ ಎದುರಿಸುತ್ತಿದೆ.

ವೈದ್ಯ ವಿದ್ಯಾರ್ಥಿಗಳ ಸಂಕಟ ಬೇರೆಯದೇ ರೀತಿಯದು. ಕಳೆದ ವರ್ಷವಿಡೀ ಕೋವಿಡ್ ಸ್ವಯಂಸೇವಾ ಕಾರ್ಯಕರ್ತರಂತೆ ಕೆಲಸ ಮಾಡಿದ ಹೌಸ್ ಸರ್ಜನ್‌ಗಳು, ಕೊರೊನಾ ವಾರಿಯರ್ಸ್ ಜೊತೆಗೆ ಮನೆಮನೆಗೆ ತೆರಳಿ ಸರ್ವೆ ಮಾಡಿ, ಸೋಂಕಿತರ ಸಂಪರ್ಕ ಸರಪಳಿಯನ್ನು ಗುರುತಿಸಲು ಹಗಲಿರುಳು ಓಡಾಡಿದರೂ ವೈದ್ಯಪದವಿ ನೋಂದಣಿಯಾಗದೆ ಕಷ್ಟ ಎದುರಿಸುತ್ತಿದ್ದರು. ಕೋವಿಡ್ ಬಿಟ್ಟು ಉಳಿದ ವಿಭಾಗಗಳಲ್ಲಿ ಕೆಲಸ ಮಾಡದಿದ್ದಕ್ಕೆ, ಗ್ರಾಮೀಣ ಸೇವೆ ಪೂರೈಸದೇ ಇದ್ದದ್ದಕ್ಕೆ ಕರ್ನಾಟಕದಲ್ಲಿ ಪದವಿ ನೋಂದಣಿ ತಡೆ ಹಿಡಿಯಲಾಗಿತ್ತು. ಎರಡು ದಿನಗಳ ಹಿಂದಿನತನಕ ಇದೇ ಪರಿಸ್ಥಿತಿ ಇತ್ತು. ಈಗಷ್ಟೇ ನೋಂದಣಿ ಪ್ರಕ್ರಿಯೆ ಶುರುವಾಗಿದೆ. ಅವರ ತಂಡಕ್ಕಿಂತ ಮುಂಚೆ, ಎಂದರೆ ಕಳೆದ ವರ್ಷ ಮಾರ್ಚ್ ಒಳಗೆ ಪದವಿ ಮುಗಿಸಿ ಸ್ನಾತಕೋತ್ತರ ಪದವಿ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದ ಯುವವೈದ್ಯರು ಇತ್ತ ಪರೀಕ್ಷೆಯೂ ಇಲ್ಲ, ಅತ್ತ ಸೇವೆಗೂ ಲಭ್ಯರಿಲ್ಲ ಎಂಬಂತೆ ಮನೆಯಲ್ಲಿ ಕೂತಿರಬೇಕಾದ ಅವಧಿ ವಿಸ್ತರಣೆಗೊಳ್ಳುತ್ತಾ ಹೋಗುತ್ತಿದೆ. ಭವಿಷ್ಯದ ವೈದ್ಯ ಸಮೂಹವನ್ನು ನಾವು ರೂಪಿಸುತ್ತಿರುವ ಪರಿ ಇದು!



ಕೋವಿಡ್ ನಿಯಂತ್ರಣದಲ್ಲಿದ್ದಾಗ ಚುನಾವಣಾ ಜ್ವರ ಏರಿಸಿಕೊಂಡ ನಮ್ಮ ನಾಯಕಮಣಿಗಳು ಈಗ ಎರಡನೆಯ ಅಲೆ ಉತ್ತುಂಗ ತಲುಪುತ್ತಿರುವಾಗಲೂ ನಿರ್ಲಕ್ಷ್ಯದ ಹೇಳಿಕೆಗಳನ್ನು ಕೊಡುತ್ತ ಸಭೆ ಸಮಾರಂಭಗಳನ್ನು ನಡೆಸುತ್ತಿದ್ದಾರೆ. ಪರೀಕ್ಷೆಗಳಷ್ಟೇ ಒಂದಾದ ಮೇಲೊಂದು ಮುಂದೆ ಹೋಗುತ್ತಿವೆ.

ಈ ಕಾಲಮಾನ ಅದೆಂಥ ಮನೋಲಯದ ಭಾವಿ ಪೀಳಿಗೆಯನ್ನು ಸೃಷ್ಟಿಸಲಿದೆಯೋ?! ಅದಕ್ಷ, ಅಶಿಸ್ತಿನ, ಬದ್ಧತೆಯಿರದ ಕೆಲಸಗಳ್ಳರನ್ನು ಸೃಷ್ಟಿಸಲು ಏನೇನು ಬೇಕೋ ಅವೆಲ್ಲ ಸಮೃದ್ಧವಾಗಿ ತಯಾರಾಗುತ್ತಿವೆ. ಇದಕ್ಕೆ ಪರಿಹಾರವೆಂದರೆ, ಯುವ ವಿದ್ಯಾರ್ಥಿ ಸಮೂಹ ಎದ್ದು ನಿಲ್ಲಬೇಕು. 'ನಾವು ಪರೀಕ್ಷೆಗೆ ಸಿದ್ಧರಿದ್ದೇವೆ, ಕೋವಿಡ್ ಆತಂಕದ ನಡುವೆಯೂ ದೇಶಸೇವೆಗೆ ಸಿದ್ಧರಿದ್ದೇವೆ' ಎಂದು ದೇಶಪ್ರೇಮ ಮೆರೆಯಬೇಕು. ಲಸಿಕೆಯಷ್ಟೇ ಮುಖಗವಸೂ ಮುಖ್ಯ ಎಂದು ತೋರಿಸುತ್ತ, ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಂತೆ ಶಿಸ್ತಾಗಿ ಪರೀಕ್ಷೆ ಬರೆಯಬೇಕು. ವೈಜ್ಞಾನಿಕ ಮನೋಭಾವ ರೂಢಿಸಿಕೊಂಡು, ತಮ್ಮ ಭವಿಷ್ಯವನ್ನು ತಾವೇ ಬರೆದುಕೊಳ್ಳುವಂತೆ ಆಗಬೇಕು.

ಲೇಖಕಿ: ವೈದ್ಯೆ, ಕವಲಕ್ಕಿ, ಹೊನ್ನಾವರ

ವಾಚಕರ ವಾಣಿ

ಆಕಾಶವಾಣಿ: ಅಸಹಜ ಬದಲಾವಣೆ ಸಲ್ಲ

ಬಹುತ್ವಕ್ಕೆ ಮಾರಕವಾಗುತ್ತಿರುವ ಆಕಾಶವಾಣಿಯ ಕುರಿತ ಡಾ. ಬಸವರಾಜ ಸಾದರ ಅವರ ಲೇಖನ (ಪ್ರ.ವಾ., ಏ.17) ಅರ್ಥಪೂರ್ಣವಾಗಿದೆ. ಆಕಾಶವಾಣಿಯು 'ಜನತಾವಾಣಿ' ಆಗಬೇಕೇ ವಿನಾ ಕೇವಲ ಸುಶಿಕ್ಷಿತರು, ನಗರವಾಸಿಗಳಿಗಷ್ಟೇ ಸೀಮಿತವಾಗಬಾರದು. ಇವರಲ್ಲಿ ಹೆಚ್ಚಿನವರು ಆಕಾಶವಾಣಿಯನ್ನು ಮನರಂಜನಾ ಮಾಧ್ಯಮವಾಗಿ ಬಳಸಿದರೆ, ನಮ್ಮ ಜನಪದರು, ದುಡಿಯುವ ವರ್ಗದವರು, ಹಳ್ಳಿಗರು ಆಕಾಶವಾಣಿಯನ್ನು ಕೇಳುತ್ತಲೇ ಬೆಳೆದವರು, ಅದನ್ನು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡವರು. ಮನೆಯಲ್ಲಿಯೇ ಆಗಲಿ, ಹೊಲದಲ್ಲಿಯೇ ಆಗಲಿ ರೇಡಿಯೊವನ್ನು ಹಚ್ಚಿಟ್ಟುಕೊಂಡೇ ತಮ್ಮ ಕೆಲಸ ಕಾರ್ಯಗಳನ್ನು ಮಾಡುವವರು.

ಭಕ್ತಿಗೀತೆ, ಸಂಪ್ರದಾಯದ ಹಾಡು, ಪ್ರದೇಶ ಸಮಾಚಾರ, ವಾರ್ತೆಗಳು, ಚಿತ್ರಗೀತೆ, ಕೃಷಿರಂಗ, ಕೃಷಿವಾರ್ತೆ, ಭಾವಸಂಗಮ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ರಾತ್ರಿ ಮಲಗುವ ವೇಳೆಗೆ ನಾಟಕ... ಹೀಗೆ ಆಯಾ ಸಮಯ, ಸಂದರ್ಭಕ್ಕೆ ತಕ್ಕಂಥ ಕಾರ್ಯಕ್ರಮಗಳನ್ನು ಅಂದಿನ ಆಕಾಶವಾಣಿ ಬಿತ್ತರಿಸುತ್ತಿತ್ತು. ಕಾರ್ಯಕ್ರಮಗಳ ಹೆಸರುಗಳೆಲ್ಲವೂ ಜನರ ಅನುಭವ, ಭಾವನೆಗಳನ್ನು ಬಿಂಬಿಸುವಂತೆ ಇರುತ್ತಿದ್ದವು. ಹೀಗಾಗಿ ಆಕಾಶವಾಣಿಯ ಧ್ಯೇಯವಾಕ್ಯ 'ಬಹುಜನ ಹಿತಾಯ, ಬಹುಜನ ಸುಖಾಯ' ಕೂಡ ಅದನ್ನೇ ಬಯಸುತ್ತಿತ್ತು. ಆದರೆ ಇಂದು ಹಲವಾರು ಕಾರ್ಯಕ್ರಮಗಳ ಹೆಸರು, ಸಮಯವನ್ನು ಬದಲಿಸಿರುವುದು ಖಂಡಿತವಾಗಿಯೂ ಜನರ ಚಿತ್ತಭಿತ್ತಿಯಿಂದ ಆಕಾಶವಾಣಿಯನ್ನು ಕಿತ್ತೊಗೆಯುವ ಹುನ್ನಾರವೆಂದರೆ ತಪ್ಪಿಲ್ಲ.

ಡಾ. ರಾಜಶೇಖರ ಸಿ.ಡಿ., ಹಾವೇರಿ

ಪ್ರತಿಭಟನೆ ಪರಿ ಸರಿಯೇ?

ಸಾರಿಗೆ ನೌಕರರ ಪ್ರತಿಭಟನೆ ಕೆಲವು ಅಹಿತಕರ, ಅಮಾನವೀಯ ಘಟನೆಗಳಿಂದ ತನ್ನ ಅರ್ಥ ಕಳೆದುಕೊಳ್ಳುತ್ತಿದೆ. ಪ್ರಜಾಪ್ರಭುತ್ವದಲ್ಲಿ ಸರಿಯಾದ ಬೇಡಿಕೆಗಳಷ್ಟೇ, ಅವುಗಳ ಈಡೇರಿಕೆಗೆ ಆಗ್ರಹಿಸಿ ನಡೆಯುವ ಪ್ರತಿಭಟನಾ ಮಾರ್ಗವೂ ಮುಖ್ಯವಾಗುತ್ತದೆ ಎಂಬುದನ್ನು ನೌಕರರು ಮರೆತಂತಿದೆ. ಅದರಲ್ಲೂ, ಬಾಗಲಕೋಟೆ ಭಾಗದಲ್ಲಿ ಕರ್ತವ್ಯನಿರತರಾಗಿದ್ದ ಹಿರಿಯ ಚಾಲಕ ನಬಿ ರಸೂಲ್ ಆವಟಿ ಅವರನ್ನು ಸಂಸ್ಥೆಯ ಸಹೋದ್ಯೋಗಿಗಳೇ ಕಲ್ಲು ಹೊಡೆದು ಸಾಯಿಸಿದ್ದಾರೆ ಎನ್ನಲಾದ ಪ್ರಕರಣ ನಾಗರಿಕ ಸಮಾಜ ತಲೆತಗ್ಗಿಸುವಂತಹದ್ದು.

ಅಪಘಾತರಹಿತ ಚಾಲನೆಗೆ ಪುರಸ್ಕಾರ ಪಡೆದು, ನಿವೃತ್ತಿಯ ಅಂಚಿನಲ್ಲಿದ್ದ ಆ ಹಿರಿಯ ಜೀವ ಹೀಗೆ ಸಾವಿಗೀಡಾದುದು ಅತ್ಯಂತ ಆಘಾತಕಾರಿ. ತಮಗೆ ಕಲ್ಲು ತಗುಲಿ ರಕ್ತ ಕಾರುತ್ತಿದ್ದರೂ ವಾಹನವನ್ನು ಎಚ್ಚರಿಕೆಯಿಂದ ರಸ್ತೆ ಪಕ್ಕಕ್ಕೆ ನಿಲ್ಲಿಸಿ ಪ್ರಯಾಣಿಕರ ಜೀವ ಉಳಿಸಿರುವ ರಸೂಲ್ ಅವರ ಕರ್ತವ್ಯಪ್ರಜ್ಞೆ ಶ್ಲಾಘನೀಯ. ತಮಗೆ ಅನ್ನ ನೀಡಿದ, ಜೀವನ ಕಟ್ಟಿಕೊಟ್ಟ ವಾಹನಗಳಿಗೆ ತಾವೇ ಕಲ್ಲು ತೂರುವುದು, ಕರ್ತವ್ಯಕ್ಕೆ ಹಾಜರಾದ ಸಹೋದ್ಯೋಗಿಗಳ ಮೇಲೆ ಹಲ್ಲೆ ನಡೆಸುವುದು ಸಮಾಜಘಾತುಕ ಕೃತ್ಯಗಳಾಗುತ್ತವೆ. ಇಂತಹ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು.

ಡಾ. ಆನಂದ್ ಎನ್.ಎಲ್., ಅಜ್ಜಂಪುರ

ಕಸಾಪ ಚುನಾವಣೆ: ಮರು ಆಲೋಚನೆ ಸೂಕ್ತ

ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕ ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿದೆ. ಆದರೆ ಶೇ 80ರಷ್ಟು ಮಂದಿ ಐವತ್ತು ವರ್ಷ ದಾಟಿರುವ ಮತದಾರರೇ ಇರುವ ಪರಿಷತ್ತಿಗೆ, ಕೊರೊನಾ ಸಂಕಷ್ಟದ ಈ ಸಮಯದಲ್ಲಿ ಚುನಾವಣೆ ನಡೆಸುವುದು ಸೂಕ್ತವೇ?

ಪರಿಷತ್ತಿನ ಆಜೀವ ಸದಸ್ಯರು ಮತ ಚಲಾಯಿಸಲು ಹೆಚ್ಚಾಗಿ ತಾಲ್ಲೂಕು ಕೇಂದ್ರಕ್ಕೆ ಬರಬೇಕಿದೆ. ಬಹುತೇಕರ ವಾಸಸ್ಥಳ ಬದಲಾಗಿದ್ದರೂ ಮತದಾರರ ಹೆಸರಿನ ಪಟ್ಟಿ ಇರುವುದು ಸದಸ್ಯತ್ವ ಪಡೆದಾಗ ಕೊಟ್ಟ ವಿಳಾಸದಲ್ಲಿಯೇ. ಹೀಗಾಗಿ ಮತದಾನ ಮಾಡುವವರು ಬೇರೆ ಬೇರೆ ಕಡೆ ಹಂಚಿಹೋಗಿದ್ದಾರೆ. ಕೋವಿಡ್ ರಣವೇಗದಲ್ಲಿ ಹಬ್ಬುತ್ತಿರುವ ಈ ಸಮಯದಲ್ಲಿ ನಿಗದಿತ ಸ್ಥಳಕ್ಕೆ ಬಂದು ಮತ ಚಲಾಯಿಸುವುದು ಅವರಿಗೆ ಕಷ್ಟವಾಗುತ್ತದೆ. ಹೀಗಾಗಿ ಕೊರೊನಾ ಸೋಂಕಿನ ಸ್ಥಿತಿಯು ರಾಜ್ಯದಲ್ಲಿ ಒಂದು ಹಂತಕ್ಕೆ ಬಂದು ನಿಲ್ಲುವವರೆಗಾದರೂ ಚುನಾವಣೆಯನ್ನು ಮುಂದೂಡುವುದು ಸೂಕ್ತ.

ಬಲ್ಲೇನಹಳ್ಳಿ ಮಂಜುನಾಥ, ಕೆ.ಆರ್.ಪೇಟೆ

ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ಬೇಸಿಗೆ!

ಕಲಬುರ್ಗಿ ಮತ್ತು ಬೆಳಗಾವಿ ವಿಭಾಗದ ಜಿಲ್ಲೆಗಳಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳ ಅವಧಿಯಲ್ಲಿ ರಾಜ್ಯ ಸರ್ಕಾರದ ಕಚೇರಿ ಕೆಲಸದ ವೇಳೆಯನ್ನು ಬದಲಾಯಿಸಿ, ಬೆಳಿಗ್ಗೆ 8ರಿಂದ ಮಧ್ಯಾಹ್ನ 1.30ರವರೆಗೆ ನಿಗದಿಪಡಿಸಲಾಗಿದೆ. ಆದರೆ ಈ ಅವಧಿಯಲ್ಲಿ 'ಬರುವುದು ತಡವಾಗಿ, ಹೋಗುವುದು ಮಾತ್ರ ಮುಂಚಿತ' ಎಂಬ ಸಾರ್ವಜನಿಕರ ಆರೋಪದಿಂದ ಬಹಳಷ್ಟು ನೌಕರರು ಮುಕ್ತರಾಗಿಲ್ಲ. ಕೋವಿಡ್ ಕಾರಣಕ್ಕೆ ಈ ಪದ್ಧತಿಯನ್ನು ಪ್ರಾರಂಭದಲ್ಲಿ ರಾಜ್ಯ ಸರ್ಕಾರ ಕೈಬಿಟ್ಟಿತ್ತು. ಆದರೆ ರಾಜ್ಯ ಸರ್ಕಾರಿ ನೌಕರರ ಸಂಘದ ಒತ್ತಡಕ್ಕೆ ಮಣಿದು, ಕಚೇರಿ ವೇಳೆಯನ್ನು ಮಧ್ಯಾಹ್ನದವರೆಗೆ ಮಾತ್ರ ನಿಗದಿಪಡಿಸಿ ಹೊಸ ಆದೇಶ ಹೊರಡಿಸಿದೆ.

ಫ್ಯಾನ್, ಏರ್‌ಕಂಡೀಷನರ್‌ಗಳು ಇಲ್ಲದ ಕಚೇರಿಗಳು ಈಗಿನ ದಿನಗಳಲ್ಲಿ ಕಡಿಮೆ. ಇಲ್ಲಿ ಸಾರ್ವಜನಿಕವಾಗಿ ವ್ಯಕ್ತವಾಗುವ ಪ್ರಶ್ನೆ ಎಂದರೆ, ಈ ಬೇಸಿಗೆ ಕೇವಲ ರಾಜ್ಯ ಸರ್ಕಾರದ ನೌಕರರಿಗಷ್ಟೇ ಇದೆಯೇ ಎಂಬುದು. ಈ ಜಿಲ್ಲೆಗಳಲ್ಲಿ ಕೆಲಸ ಮಾಡುವ ಕೇಂದ್ರ ಸರ್ಕಾರಿ, ರಾಜ್ಯ ಪೊಲೀಸ್ ಇಲಾಖೆ, ರಾಷ್ಟ್ರೀಕೃತ, ಗ್ರಾಮೀಣ ಬ್ಯಾಂಕ್, ಖಾಸಗಿ ಸಂಸ್ಥೆಗಳಿಗೆ ಸೇರಿದ ನೌಕರರಿಗೆ ಮಾತ್ರ ಇಂಥ 'ಭಾಗ್ಯ' ಇಲ್ಲ. ಅಷ್ಟೇ ಅಲ್ಲದೆ ದುಡಿದು ಬೆವರಿಳಿಸಿಕೊಳ್ಳುತ್ತಿರುವ ರೈತರು, ಕಾರ್ಮಿಕರು, ವಾಹನ ಚಾಲಕರನ್ನು ಬಿಟ್ಟು, ಕೇವಲ ರಾಜ್ಯ ಸರ್ಕಾರದ ನೌಕರರನ್ನಷ್ಟೇ ಬೇಸಿಗೆ ಬಾಧಿಸುತ್ತಿದೆಯೇ? ಅರ್ಧ ದಿನದ ಕೆಲಸಕ್ಕೆ ಅರ್ಧ ವೇತನ ನೀಡಲಾಗುತ್ತಿದೆಯೇ? ಹೋಗಲಿ, ಬದಲಾದ ಅವಧಿಯಲ್ಲಾದರೂ ನೌಕರರು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ ಎಂಬುದಕ್ಕೆ ಸರ್ಕಾರದ ಸ್ಪಷ್ಟನೆ ಏನು?

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಲ್ ಮತ್ತು ಫಿಡೆಲ್ ಕ್ಯಾಸ್ಟ್ರೊ

ಕ್ಯಾಸ್ಟ್ರೊ ತೆರೆಮರೆಗೆ ಕ್ಯೂಬಾಕ್ಕೆ ಹೊಸ ಯುಗ

ಕಮ್ಯುನಿಸ್ಟ್ ಪಾರ್ಟಿ ಆಫ್ ಕ್ಯೂಬಾ

ಫಿಡೆಲ್ 1959ರಲ್ಲಿ ಅಧಿಕಾರಕ್ಕೆ ಬಂದರೂ, ದೇಶದಲ್ಲಿ ಕಮ್ಯುನಿಸ್ಟ್ ಆಳ್ವಿಕೆ ಇದೆ ಎಂದು ಘೋಷಣೆಯಾಗಿರಲಿಲ್ಲ. ಬಟಿಸ್ಟಾ ವಿರುದ್ಧದ ಚಳವಳಿಯಲ್ಲಿ ಜತೆಯಾಗಿದ್ದ ಹಲವು ಬಂಡುಕೋರ ಪಕ್ಷಗಳನ್ನು ಒಟ್ಟುಗೂಡಿಸಿ 1961ರಲ್ಲಿ ಕ್ಯಾಸ್ಟ್ರೊ ಒಕ್ಕೂಟವೊಂದನ್ನು ರಚಿಸಿದ್ದರು. ಈ ಒಕ್ಕೂಟದ ಸರ್ಕಾರದಲ್ಲಿ ಫಿಡೆಲ್ ಕ್ಯಾಸ್ಟ್ರೊ ಪ್ರಧಾನಿಯಾಗಿದ್ದರು. 60ರ ದಶಕದ ಮೊದಲ ದಿನಗಳಲ್ಲೇ ಕ್ಯೂಬಾದ ಎಲ್ಲಾ ಕೈಗಾರಿಕೆಗಳು, ಉದ್ದಿಮೆಗಳನ್ನು ರಾಷ್ಟ್ರೀಕರಣ ಮಾಡಿ ಫಿಡೆಲ್ ಆದೇಶ ಹೊರಡಿಸಿದರು. ಕ್ಯೂಬಾದಲ್ಲಿದ್ದ ಅಮೆರಿಕದ ಉದ್ದಿಮೆಗಳಿಗೆ ಯಾವುದೇ ಪರಿಹಾರ ನೀಡದೆ ರಾಷ್ಟ್ರೀಕರಣ ಮಾಡಲಾಯಿತು. ಇದರ ಪರಿಣಾಮವಾಗಿ ಅಮೆರಿಕವು ಕ್ಯೂಬಾ ಮೇಲೆ ದಿಗ್ಬಂಧನ ಹೇರಿತು. ಇದರಿಂದ ಕ್ಯೂಬಾದ ಆರ್ಥಿಕ ವ್ಯವಸ್ಥೆ ಕುಸಿದುಬಿತ್ತು. ಆಗ ಕ್ಯೂಬಾ ನೆರವಿಗೆ ಬಂದಿದ್ದೇ ಯುಎಸ್ಎಸ್ಆರ್. ಅದರ ಜತೆಯಲ್ಲೇ ಕಮ್ಯುನಿಸ್ಟ್ ಚಿಂತನೆಗಳೂ ಕ್ಯೂಬಾದಲ್ಲಿ ಮುನ್ನೆಲೆಗೆ ಬರಲು ಆರಂಭಿಸಿದವು. 1965ರಲ್ಲಿ ಕ್ಯಾಸ್ಟ್ರೊ ಅವರು ಕಮ್ಯುನಿಸ್ಟ್ ಪಾರ್ಟಿ ಆಫ್ ಕ್ಯೂಬಾ (ಪಿಸಿಸಿ) ಸ್ಥಾಪಿಸುವುದಾಗಿ ಘೋಷಿಸಿದರು. ತಾವು ಮಾರ್ಕ್ಸ್-ಲೆನಿನ್ ಅನುಯಾಯಿ ಎಂದು ಬಹಿರಂಗವಾಗಿ ಘೋಷಿಸಿದರು.

ಸರ್ವಾಧಿಕಾರಿಯ ಛಾಯೆ

ಸರ್ವಾಧಿಕಾರಿ ಬಟಿಸ್ಟಾ ಆಳ್ವಿಕೆಯನ್ನು ಕಿತ್ತೊಗೆದು ಅಧಿಕಾರಕ್ಕೆ ಬಂದ ಫಿಡೆಲ್ ಸಹ ಸರ್ವಾಧಿಕಾರಿಯಾಗಿ ಬದಲಾದರು ಎಂಬುದನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಅವರು ದೇಶದ ಎಲ್ಲಾ ಉದ್ದಿಮೆಗಳನ್ನು ಏಕಪಕ್ಷೀಯವಾಗಿ ರಾಷ್ಟ್ರೀಕರಣ ಮಾಡಿದರು. ತಮ್ಮ ರಾಜಕೀಯ ಎದುರಾಳಿ ಬಟಿಸ್ಟಾ ಅವರ ಬೆಂಬಲಿಗರು ಮತ್ತು ಅನುಯಾಯಿಗಳಿಗೆ ಸೇರಿದ ಉದ್ದಿಮೆಗಳಿಗೆ ಯಾವುದೇ ಪರಿಹಾರ ನೀಡದೆ ರಾಷ್ಟ್ರೀಕರಣ ಮಾಡಿದರು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ.

ಅಧಿಕಾರಕ್ಕೆ ಬರುವ ಮುನ್ನ ಮಾಧ್ಯಮಗಳ ಮುಂದೆ ಕಾಣಿಸಿಕೊಳ್ಳುತ್ತಿದ್ದ ಫಿಡೆಲ್ ಅವರು, ಅಧಿಕಾರಕ್ಕೆ ಬಂದ ನಂತರ ತಮ್ಮ ವರ್ತನೆಯನ್ನು ಬದಲಿಸಿಕೊಂಡರು. ಆಯ್ದ ಮಾಧ್ಯಮಗಳಿಗೆ ಮಾತ್ರವೇ ಅವರ ಪತ್ರಿಕಾಗೋಷ್ಠಿ, ಹೇಳಿಕೆಗಳು, ಸಂದರ್ಶನಗಳು ದೊರೆಯುತ್ತಿದ್ದವು. ಕಮ್ಯುನಿಸ್ಟ್ ಸಿದ್ಧಾಂತಕ್ಕಿಂತ ಭಿನ್ನ ಸಿದ್ಧಾಂತದ ಪತ್ರಿಕೆಗಳ ಮೇಲೆ ಕಠಿಣ ಸೆನ್ಸಾರ್‌ಶಿಪ್ ಹೇರಿದ್ದರು. ಹಲವು ದಶಕ ಈ ನಿರ್ಬಂಧ ಜಾರಿಯಲ್ಲಿತ್ತು.

ಪ್ರಧಾನಿಯಾಗಿದ್ದ ತಮ್ಮ ಹುದ್ದೆಯನ್ನು ಕ್ಯಾಸ್ಟ್ರೊ ಅವರು, ಅಧ್ಯಕ್ಷ ಎಂದು ಬದಲಿಸಿಕೊಂಡದ್ದರ ಹಿಂದೆ ಸರ್ವಾಧಿಕಾರಿ ಧೋರಣೆಯನ್ನು ಗುರುತಿಸಲಾಗಿದೆ. ಅಧಿಕಾರಕ್ಕೆ ಬಂದ ನಂತರದ ಹಲವು ದಶಕ ಪಕ್ಷದ ಕಾಂಗ್ರೆಸ್ ಸಭೆ ನಡೆಸಲು ಅವಕಾಶ ದೊರೆತಿರಲಿಲ್ಲ. ಪಕ್ಷದ ಪಾಲಿಟ್‌ಬ್ಯೂರೊ ಸಹ ವರ್ಷದಲ್ಲಿ ಎರಡು ಸಭೆ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಸರ್ಕಾರದ ನೀತಿಗಳನ್ನು ಮತ್ತು ಪಕ್ಷದ ಸಿದ್ಧಾಂತಗಳನ್ನು ಉಲ್ಲಂಘಿಸಿದವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಹೀಗಾಗಿ 1959, 1963, 1970 ಮತ್ತು 1992ರ ಸಮಯದಲ್ಲಿ ವಿವಿಧ ಬಿಕ್ಕಟ್ಟುಗಳು ತಲೆದೋರಿದಾಗಲೆಲ್ಲಾ ಲಕ್ಷಾಂತರ ಜನರು ದೇಶಬಿಟ್ಟು ಓಡಿಹೋದರು. ಕೊನೆಯ ಗಡಿಪಾರಿನಲ್ಲಿ ಸ್ವತಃ ಫಿಡೆಲ್ ಕ್ಯಾಸ್ಟ್ರೊ ಅವರ ಮಗಳು ಸಹ ಕ್ಯೂಬಾದಿಂದ ಓಡಿಹೋದರು.

ಆದರೆ ಇಂತಹ ಕಠಿಣ ನಿಲುವಿನ ಕಾರಣದಿಂದಲೇ ಅಮೆರಿಕವನ್ನು ಎದುರು ಹಾಕಿಕೊಂಡೂ, ಕ್ಯೂಬಾ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಾಯಿತು. ಬೆನ್ನೆಲುಬಾಗಿದ್ದ ಯುಎಸ್ಎಸ್ಆರ್ ಪತನದ ನಂತರವೂ, ಕ್ಯೂಬಾ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿತು ಎಂಬುದನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಈ ಎಲ್ಲಾ ಸಂಘರ್ಷಗಳ ನಡುವೆಯೂ ಕ್ಯೂಬಾದ ಆರೋಗ್ಯ ಸೇವಾ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆ ಸುಧಾರಿಸುವಲ್ಲಿ ಫಿಡೆಲ್ ಮಹತ್ವದ ಪಾತ್ರ ವಹಿಸಿದ್ದಾರೆ.

ಸುಧಾರಣಾವಾದಿ ರಾಲ್

ಫಿಡೆಲ್ ಅವರ ಯಾವುದೇ ನಿಲುವು ಅಥವಾ ನಿರ್ಧಾರವನ್ನು ರಾಲ್ ಎಂದೂ ಪ್ರಶ್ನಿಸಿರಲಿಲ್ಲ. ಉಪಾಧ್ಯಕ್ಷನಾಗಿ ಅಧಿಕಾರದಲ್ಲಿ ಇದ್ದರೂ, ರಾಲ್ ಅವರು ಮಾಧ್ಯಮಗಳ ಎದುರು ಕಾಣಿಸಿಕೊಂಡಿದ್ದು ಕಡಿಮೆ. ಅಧ್ಯಕ್ಷರಾದ ನಂತರವೂ ಅವರು ಮಾಧ್ಯಮಗಳಿಂದ ದೂರವೇ ಇದ್ದರು.

1961ರಲ್ಲಿ ಅಮೆರಿಕವು ಕ್ಯೂಬಾ ಮೇಲೆ ದಿಗ್ಬಂಧನ ಹೇರಿದಾಗ, ಅಮೆರಿಕದ ಬಣದಲ್ಲಿದ್ದ ಎಲ್ಲಾ ರಾಷ್ಟ್ರಗಳು ಅದನ್ನು ಪಾಲಿಸಿದವು. ಕ್ಯೂಬಾದ ಸಕ್ಕರೆ ರಫ್ತು ಬಹುತೇಕ ಸ್ಥಗಿತವಾಯಿತು. ಕಬ್ಬಿಣದ ಅದಿರು ಆಮದು ನಿಂತುಹೋಯಿತು. ಇದರಿಂದ ಕೈಗಾರಿಕೆಗಳು ಕುಸಿದುಬಿದ್ದವು. ಕ್ಯೂಬಾಗೆ ಕಚ್ಚಾತೈಲದ ಆಮದೂ ನಿಂತುಹೋಯಿತು. ದೇಶದಲ್ಲಿನ ತೈಲಬಾವಿಯನ್ನೇ ಕ್ಯೂಬಾ ಅವಲಂಬಿಸಿತು. ಕ್ಯೂಬಾದಲ್ಲಿ ರಷ್ಯಾ ತನ್ನ ಅಣುಕ್ಷಿಪಣಿ ತಂದಿರಿಸಿದಾಗ, ಮೂರನೇ ಮಹಾಯುದ್ಧ ನಡೆಯುವ ಭೀತಿಯೂ ಎದುರಾಗಿತ್ತು. 15 ದಿನಗಳ ಸಂಘರ್ಷದ ನಂತರ ಕ್ಯೂಬಾದಿಂದ ಕ್ಷಿಪಣಿಯನ್ನು ತೆರವು ಮಾಡಿಸುವಲ್ಲಿ ಅಮೆರಿಕ ಯಶಸ್ವಿಯಾಯಿತು. ಅಮೆರಿಕದ ಜತೆಗಿನ ಈ ಶತ್ರುತ್ವ 21ನೇ ಶತಮಾನದಲ್ಲಿ, ಕ್ಷೀಣಿಸುವಲ್ಲಿ ರಾಲ್ ಅವರ ಪಾತ್ರ ದೊಡ್ಡದಿದೆ.

ಆದರೆ ಫಿಡೆಲ್ ಅವರ ನಿಧನದ ನಂತರ, ಕ್ಯೂಬಾದ ವಿದೇಶಾಂಗ ನೀತಿಯನ್ನು ರಾಲ್ ಬದಲಿಸಿದರು. 50 ವರ್ಷ ಜಾರಿಯಲ್ಲಿದ್ದ ಅಮೆರಿಕದ ಆರ್ಥಿಕ ದಿಗ್ಬಂಧನವು ಸಡಿಲವಾಗುವುದರಲ್ಲಿ ರಾಲ್ ಅವರ ಕೊಡುಗೆ ದೊಡ್ಡದಿದೆ. 2016ರ ನಂತರ ಕ್ಯೂಬಾದಲ್ಲಿ ಅಮೆರಿಕವು ತನ್ನ ರಾಯಭಾರ ಕಚೇರಿಯನ್ನು ಮತ್ತೆ ತೆರೆಯಿತು. ಅಮೆರಿಕದ ಜತೆಗೆ ವ್ಯಾಪಾರ ವಹಿವಾಟು ಸಣ್ಣಮಟ್ಟದಲ್ಲಿ ಆರಂಭವಾಯಿತು. ಸಕ್ಕರೆ ರಫ್ತಿಗೆ ಕಮ್ಯುನಿಸ್ಟ್ ದೇಶಗಳ ಮೇಲಿನ ಅವಲಂಬನೆ ಕಡಿಮೆಯಾಯಿತು. ರಾಲ್ ಅವರು, ಆಸ್ತಿ ಮಾಲೀಕತ್ವ ನೀತಿಯಲ್ಲಿ ಬದಲಾವಣೆ ತಂದರು. ವಿದೇಶಿ ಕಂಪನಿಗಳು ಕ್ಯೂಬಾದಲ್ಲಿ ಹೂಡಿಕೆ ಮಾಡಲು ಅವಕಾಶ ಮಾಡಿಕೊಟ್ಟರು. ಇದರಿಂದ ದೇಶದ ಆರ್ಥಿಕತೆ ಚೇತರಿಸಿಕೊಂಡಿತು.

ಕ್ಯೂಬಾ ಮತ್ತು ಕ್ಯಾಸ್ಟ್ರೊ ಎರಡು ಬೇರೆ ಬೇರೆ ಅಲ್ಲ; ಸುಮಾರು 60 ವರ್ಷ ಕ್ಯೂಬಾ ದೇಶವನ್ನು ಕ್ಯಾಸ್ಟ್ರೊ ಕುಟುಂಬದ ಇಬ್ಬರು ಆಳಿದ್ದಾರೆ. ಈಗ, ಅಧಿಕಾರವು ಈ ಕುಟುಂಬದ ಹೊರಗಿನ ವ್ಯಕ್ತಿಯೊಬ್ಬರಿಗೆ ಹಸ್ತಾಂತರ ಆಗಲಿದೆ.

ಕ್ಯೂಬಾದ ನಿರಂಕುಶಾಧಿಕಾರಿ ಅಧ್ಯಕ್ಷ ಫುಲೆನ್ಸಿಯೊ ಬಟಿಸ್ಟಾ ಸರ್ಕಾರವನ್ನು ಫಿಡೆಲ್ ಕ್ಯಾಸ್ಟ್ರೊ ನೇತೃತ್ವದ ಕ್ರಾಂತಿಕಾರಿಗಳು ಸಶಸ್ತ್ರ ಕ್ರಾಂತಿಯ ಮೂಲಕ 1959ರಲ್ಲಿ ಉರುಳಿಸಿದ್ದರು. ಹೋರಾಟದ ನೇತೃತ್ವ ವಹಿಸಿದ್ದ ಫಿಡೆಲ್ ಮತ್ತು ಮುಂಚೂಣಿಯಲ್ಲಿದ್ದ ಫಿಡೆಲ್ ಸಹೋದರ ರಾಲ್ ಕ್ಯಾಸ್ಟ್ರೊ ಸಹಜವಾಗಿಯೇ ದೇಶದ ಅಧಿಕಾರ ಕೇಂದ್ರಕ್ಕೆ ಬಂದರು. ಸರ್ಕಾರ ಮತ್ತು ನಿಜವಾದ ಅಧಿಕಾರ ಕೇಂದ್ರವಾದ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಮೇಲೆ ಕ್ಯಾಸ್ಟ್ರೊ ಸಹೋದರರ ಹಿಡಿತ ಇಷ್ಟೆಲ್ಲ ವರ್ಷಗಳಲ್ಲಿ ಒಂದಿನಿತೂ ಸಡಿಲವಾದದ್ದಿಲ್ಲ.

ದೇಶದಲ್ಲಿ ಕಮ್ಯುನಿಸ್ಟ್ ಪಕ್ಷದ ಆಡಳಿತ ಇದ್ದರೂ ಪಕ್ಷದ ಮುಖ್ಯಸ್ಥನ ಕೈಯಲ್ಲಿಯೇ ಅಧಿಕಾರವೆಲ್ಲವೂ ಕೇಂದ್ರೀಕೃತ. ಪಕ್ಷದ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿಯೇ ಪಕ್ಷದ ಮುಖ್ಯಸ್ಥ. 1961ರ ಜುಲೈಯಲ್ಲಿ ಕ್ಯೂಬಾದ ಕ್ರಾಂತಿಕಾರಿ ಸಂಘಟನೆಯ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿಯಾಗಿ ಫಿಡೆಲ್ ಅಧಿಕಾರ ವಹಿಸಿಕೊಳ್ಳುತ್ತಾರೆ. ನಂತರ, ಈ ಪಕ್ಷವು ಯುನೈಟೆಡ್ ಪಾರ್ಟಿ ಫಾರ್ ಸೋಷಿಯಲಿಸ್ಟ್ ರೆವಲ್ಯೂಷನರಿ ಕ್ಯೂಬಾ ಎಂದು 1962ರಲ್ಲಿ ಹೆಸರು ಪಡೆದುಕೊಳ್ಳುತ್ತದೆ. ಮುಂದೆ 1965ರಲ್ಲಿ ಕ್ಯೂಬಾ ಕಮ್ಯುನಿಸ್ಟ್ ಪಕ್ಷವಾಗುತ್ತದೆ. ಉದ್ದಕ್ಕೂ ಪಕ್ಷದ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿ ಆಗಿದ್ದದ್ದು ಫಿಡೆಲ್ ಕ್ಯಾಸ್ಟ್ರೊ. ದ್ವಿತೀಯ ಕಾರ್ಯದರ್ಶಿ ಆಗಿದ್ದದ್ದು ಅಣ್ಣನ ನೆರಳಿನಂತೆಯೇ ಇದ್ದ ರಾಲ್ ಕ್ಯಾಸ್ಟ್ರೊ.

2006ರಲ್ಲಿ ಫಿಡೆಲ್ ಅನಾರೋಗ್ಯಕ್ಕೆ ಒಳಗಾದಾಗ ಅಧಿಕೃತವಾಗಿ ಆದರೆ ತಾತ್ಕಾಲಿಕವಾಗಿ ದೇಶದ ಚುಕ್ಕಾಣಿಯನ್ನು ರಾಲ್‌ಗೆ ವಹಿಸಿಕೊಡಲಾಯಿತು. 2008ರಲ್ಲಿ ಫಿಡೆಲ್ ಅವರು ದೇಶದ ಅಧ್ಯಕ್ಷ ಸ್ಥಾನವನ್ನೂ ರಾಲ್‌ಗೆ ನೀಡಿದರು. ಹೀಗೆ 47 ವರ್ಷ ಸೇನೆಯ ಮುಖ್ಯಸ್ಥನಾಗಿದ್ದ ಅತ್ಯಂತ ಪ್ರಭಾವಿ ವ್ಯಕ್ತಿಗೆ ದೇಶದ ಚುಕ್ಕಾಣಿ ದೊರೆಯಿತು. 2011ರಲ್ಲಿ ಪಕ್ಷದ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿಯಾಗಿಯೂ ರಾಲ್ ನೇಮಕಗೊಂಡರು. 2016ರಲ್ಲಿ ಫಿಡೆಲ್ ಸಾವಿನೊಂದಿಗೆ ಪಕ್ಷ ಮತ್ತು ದೇಶದ ಪ್ರಶ್ನಾತೀತ ನಾಯಕರಾಗಿ ರಾಲ್ ಹೊರ ಹೊಮ್ಮಿದರು.


ಕನೆಲ್

ದೇಶದ ಅಧ್ಯಕ್ಷ ಸ್ಥಾನವನ್ನು ರಾಲ್ ಅವರು ಮಿಗೆಲ್ ಡಿಯಝ್ ಕನೆಲ್‌ಗೆ 2018ರಲ್ಲಿಯೇ ವಹಿಸಿಕೊಟ್ಟಿದ್ದಾರೆ. ಈಗ, 89 ವರ್ಷದ ರಾಲ್ ಅವರು ಪಕ್ಷದ ಮುಖ್ಯಸ್ಥನ ಹುದ್ದೆಗೂ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಇದೇ 16ರಂದು ಆರಂಭವಾದ ಪಕ್ಷದ ಸಮಾವೇಶವು ಸೋಮವಾರ (ಏಪ್ರಿಲ್ 19) ಕೊನೆಗೊಳ್ಳಲಿದೆ. ಈ ಸಮಾವೇಶದಲ್ಲಿ ಹೊಸ ಪ್ರಥಮ ಕಾರ್ಯದರ್ಶಿ ಯಾರು ಎಂಬುದು ಘೋಷಣೆಯಾಗಲಿದೆ. ಕನೆಲ್ ಅವರಿಗೆ ಪಕ್ಷದ ಹೊಣೆಗಾರಿಕೆಯೂ ದೊರೆಯಲಿದೆ ಎಂದು ಹೇಳಲಾಗುತ್ತಿದೆ. ಆದರೆ, ರಾಲ್ ಅವರು ತಮ್ಮ ಉತ್ತರಾಧಿಕಾರಿ ಯಾರು ಎಂಬ ಬಗ್ಗೆ ಯಾವುದೇ ಸುಳಿವು ನೀಡಿಲ್ಲ.

1959ರ ಕ್ರಾಂತಿಯ ನೇರ ಅನುಭವ ಇಲ್ಲದ ಹೊಸ ತಲೆಮಾರು ದೇಶದಲ್ಲಿ ಸೃಷ್ಟಿಯಾಗಿದೆ. ಇಂತಹ ಸಂದರ್ಭದಲ್ಲಿ ದೇಶದ ಆಳ್ವಿಕೆಯು ಕ್ಯಾಸ್ಟ್ರೊ ಕುಟುಂಬದಿಂದ ಹೊರಗಿನ ವ್ಯಕ್ತಿಯೊಬ್ಬರಿಗೆ ದೊರೆಯಲಿದೆ. ಕನೆಲ್ ಅವರು ಕೂಡ 1959ರ ಕ್ರಾಂತಿಯ ಬಳಿಕ ಜನಿಸಿದವರು ಎಂಬುದು ವಿಶೇಷ.

ಆರ್ಥಿಕ ಚೇತರಿಕೆ ಅಮೆರಿಕದ ಮೇಲೆ ಅವಲಂಬಿತ

ಮಿಗೆಲ್ ಡಿಯಝ್ ಕನೆಲ್ ಕ್ಯೂಬಾದ ಹೊಸ ತಲೆಮಾರಿನ ನಾಯಕ. ಇಲ್ಲಿಯವರೆಗೂ ಕ್ಯಾಸ್ಟ್ರೊ ಸಹೋದರರು ನಿಭಾಯಿಸಿದ್ದ, ದೇಶದ ಅತ್ಯಂತ ಪ್ರಭಾವಿ ಹುದ್ದೆಗೆ ಅವರು ಆಯ್ಕೆಯಾಗಿದ್ದಾರೆ. ಆದರೆ, ಜಗತ್ತಿನ ಐದು ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಒಂದೆನಿಸಿರುವ ಕ್ಯೂಬಾ, ಹಿಂದಿನ ಇಬ್ಬರು ನಾಯಕರ ನೀತಿಗಳನ್ನೇ ಮುಂದುವರಿಸಲಿದೆಯೇ, ಬದಲಾಗಿರುವ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯಲ್ಲಿ ಅದು ಸಾಧ್ಯವಾಗಬಹುದೇ ಎಂಬುದು ಪ್ರಶ್ನೆಯಾಗಿದೆ.

ಕನೆಲ್ ಅವರು ಕ್ಯಾಸ್ಟ್ರೊ ಸಹೋದರರಿಗಿಂತ ಭಿನ್ನ. ಸೂಟ್–ಟೈ ಧರಿಸುವ, ತಂತ್ರಜ್ಞಾನವನ್ನು ಪ್ರೀತಿಸುವ, ವಿದೇಶಿ ಸಂಗೀತ ಆಲಿಸುವ ಅವರು ನಿಜಾರ್ಥದಲ್ಲಿ ಹೊಸ ತಲೆಮಾರಿನ ನಾಯಕ. ಪಕ್ಷದ ಸಿದ್ಧಾಂತಕ್ಕೆ ನಿಷ್ಠರಾಗಿರುವುದರಿಂದ ಅವರ ನೀತಿಗಳಲ್ಲಿ ಹೆಚ್ಚಿನ ಬದಲಾವಣೆಗಳು ಇರಲಿಕ್ಕಿಲ್ಲ ಎಂದು ವಿಶ್ಲೇಷಕರು ಹೇಳುತ್ತಾರೆ. ಆದರೆ, ಅಮೆರಿಕದ ನೀತಿಗಳು ಹೇಗೆ ಬದಲಾಗುತ್ತವೆ ಎಂಬುದರ ಮೇಲೆ ಕ್ಯೂಬಾದ ಆರ್ಥಿಕ ಚೇತರಿಕೆ ಹಾಗೂ ಮುಂದಿನ ಕೆಲವು ವರ್ಷಗಳ ಭವಿಷ್ಯ ನಿರ್ಧಾರವಾಗಲಿದೆ.

ಒಬಾಮ ಅಮೆರಿಕದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಅಮೆರಿಕ– ಕ್ಯೂಬಾ ನಡುವಿನ ಹಲವು ದಶಕಗಳ ವೈರತ್ವವನ್ನು ತಿಳಿಗೊಳಿಸುವ ಕೆಲಸ ಆರಂಭಿಸಿದ್ದರು. ಕ್ಯೂಬಾ ಮೇಲೆ ಅಮೆರಿಕ ಹೇರಿದ್ದ ನಿರ್ಬಂಧಗಳನ್ನು ಹಂತಹಂತವಾಗಿ ತೆರವು ಮಾಡುತ್ತಾ ಬಂದಿದ್ದರು. ಪರಿಣಾಮ ಕ್ಯೂಬಾದ ಪ್ರವಾಸೋದ್ಯಮ, ಹೋಟೆಲ್ ಉದ್ಯಮ ಬೆಳವಣಿಗೆ ಕಾಣಲಾರಂಭಿಸಿತು. ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ತೆರೆದುಕೊಂಡವು. ಹಣದ ವರ್ಗಾವಣೆಯ ನಿರ್ಬಂಧವನ್ನು ಸಡಿಲಿಸಿದ್ದರಿಂದ ಕ್ಯೂಬಾ ಮೂಲದ ಅಮೆರಿಕನ್ನರು ಬೇಕಾದಷ್ಟು ಹಣವನ್ನು ತಮ್ಮ ದೇಶಕ್ಕೆ ಕಳುಹಿಸಲು ಸಾಧ್ಯವಾಯಿತು. ಕ್ಯೂಬಾ– ಅಮೆರಿಕ ಮಧ್ಯೆ ಐದು ದಶಕಗಳ ನಂತರ ವಿಮಾನ ಹಾರಾಟ ಆರಂಭವಾಯಿತು.

ಆದರೆ, ಟ್ರಂಪ್ ಅಧಿಕಾರಕ್ಕೆ ಬರುತ್ತಿದ್ದಂತೆ ಮತ್ತೆ ನಿರ್ಬಂಧಗಳನ್ನು ಹೇರಿದರು. ಹವಾನಾ ಬಿಟ್ಟರೆ ಬೇರೆ ನಗರಗಳಿಗೆ ಅಮೆರಿಕದ

ಒಬಾಮ ಜತೆಗೆ ರಾಲ್

ವಿಮಾನ ಹಾರಾಟವನ್ನು ಸ್ಥಗಿತಗೊಳಿಸಿದರು, ವ್ಯಾಪಾರ ವಹಿವಾಟಿನ ಮೇಲೂ ನಿರ್ಬಂಧಗಳಾದವು. ಕ್ಯೂಬಾಗೆ ಹಣ ವರ್ಗಾವಣೆಯ ಮೇಲೆ ಮಿತಿ ಹೇರಲಾಯಿತು, ಪ್ರವಾಸಿಗರಿಗೂ ನಿಷೇಧ ಹೇರಲಾಯಿತು. ಅದರ ಜತೆಗೆ ಕಳೆದ ವರ್ಷ ಕೊರೊನಾ ಪಿಡುಗು ಆ ರಾಷ್ಟ್ರಕ್ಕೆ ಇನ್ನಷ್ಟು ಸಂಕಷ್ಟವನ್ನು ತಂದೊಡ್ಡಿದೆ.

ಈಗ ಅಮೆರಿಕದ ಆಡಳಿತದಲ್ಲೂ ಬದಲಾವಣೆಯಾಗಿದೆ. ಕ್ಯೂಬಾ ವಿಚಾರದಲ್ಲಿ ಟ್ರಂಪ್ ನೀತಿಗಳನ್ನು ಬದಲಿಸಿ ಮತ್ತೆ ಒಬಾಮ ಕಾಲದ ನೀತಿಗೆ ಮರಳುವುದಾಗಿ ಜೋ ಬೈಡನ್ ಆಡಳಿತ ಹೇಳಿದೆ. ಅದು ಎಷ್ಟು ಶೀಘ್ರದಲ್ಲಿ ಕಾರ್ಯರೂಪಕ್ಕೆ ಬರುತ್ತದೆ ಎಂಬುದರ ಮೇಲೆ ಕ್ಯೂಬಾದ ಆರ್ಥಿಕತೆಯ ಚೇತರಿಕೆ ಅವಲಂಬಿಸಿದೆ.

ಆಧಾರ: ಎಎಫ್‌ಪಿ, ರಾಯಿಟರ್ಸ್, ಬಿಬಿಸಿ

ಜಾರ್ಖಂಡ್ ಹೈಕೋರ್ಟ್ ಜಾಮೀನು ನೀಡಿದ ಬಳಿಕ ಪಟ್ನಾದಲ್ಲಿರುವ ಆರ್‌ಜೆಡಿ ಕಚೇರಿ ಎದುರು ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದ್ದರು —ಪಿಟಿಐ ಚಿತ್ರ

ಲಾಲು ಬಿಡುಗಡೆ ಎನ್‌ಡಿಎಗೆ ತಳಮಳ

• ಅಭಯ್ ಕುಮಾರ್

ಲಾಲು ಪ್ರಸಾದ್

ಪಟ್ನಾ: ಮೇವು ಹಗರಣದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಅವರಿಗೆ ಜಾರ್ಖಂಡ್ ಹೈಕೋರ್ಟ್ ಜಾಮೀನು ನೀಡಿದೆ. ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಏಮ್ಸ್) ಲಾಲು ಚಿಕಿತ್ಸೆ ಪಡೆಯುತ್ತಿದ್ದರೂ, ಅವರು ಬಿಡುಗಡೆ ಆಗುವ ಸುದ್ದಿಯು ಆರ್‌ಜೆಡಿ ಕಾರ್ಯಕರ್ತರಲ್ಲಿ ಹುರುಪು ಮೂಡಿಸಿದೆ. ಹಲವು ರೋಗಗಳಿಂದ ಬಳಲುತ್ತಿರುವ ಲಾಲು ಅವರನ್ನು ಪಟ್ನಾಕ್ಕೆ ಕರೆದೊಯ್ಯಲು ಇನ್ನೂ ಕೆಲವು ದಿನಗಳು ಬೇಕಾಗಬಹುದು. ಪಟ್ನಾಕ್ಕೆ ಹೋಗುವ ಮುನ್ನ ಅವರು ಹಲವು ಕಾನೂನು ಪ್ರಕ್ರಿಯೆಗಳನ್ನು ಪೂರೈಸಬೇಕಿದೆ. ವೈದ್ಯಕೀಯ ಅನುಮತಿಯನ್ನೂ ಪಡೆದುಕೊಳ್ಳಬೇಕಿದೆ.

ಕಾರ್ಯಕರ್ತರಲ್ಲಿ ಭಾರಿ ಉತ್ಸಾಹ ಇದ್ದರೂ ಅವರು ಅದನ್ನು ಬಹಿರಂಗವಾಗಿ ತೋರಿಸುತ್ತಿಲ್ಲ. ಕೋವಿಡ್ ಸಂದರ್ಭದಲ್ಲಿ ಯಾವುದೇ ರೀತಿಯ ಸಂಭ್ರಮ ಆಚರಣೆ ಮಾಡಬಾರದು ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ನೀಡಿದ ಕಟ್ಟುನಿಟ್ಟು ಸೂಚನೆ ಇದಕ್ಕೆ ಕಾರಣ.

2017ರ ಡಿಸೆಂಬರ್‌ನಿಂದಲೇ ಜೈಲಿನಲ್ಲಿರುವ ಲಾಲು ಅವರ ಬಿಡುಗಡೆ ಬಗ್ಗೆ ಬಿಹಾರದ ಅಧಿಕಾರರೂಢ ಎನ್‌ಡಿಎ ಮೌನವಾಗಿಯೇ ಇದೆ. ಆದರೆ, ಈ ಮೈತ್ರಿಕೂಟದಲ್ಲಿ ಕಳವಳವಂತೂ ಇದ್ದೇ ಇದೆ. 2020ರ ನವೆಂಬರ್‌ನಲ್ಲಿ ನಡೆದ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಹಣಾಹಣಿ ತೀವ್ರವಾಗಿತ್ತು. ಈ ತೀವ್ರ ಹಣಾಹಣಿಯಲ್ಲಿ ಎನ್‌ಡಿಎ ಗೆದ್ದರೂ, ಮೈತ್ರಿಕೂಟಕ್ಕೆ ಸರಳ ಬಹುಮತವಷ್ಟೇ ಇದೆ.

ಬಿಜೆಪಿ 74, ಜೆಡಿಯು 43 ಮತ್ತು ಮೈತ್ರಿಕೂಟದಲ್ಲಿ ಇರುವ ಎಚ್‌ಎಎಂ ಮತ್ತು ವಿಐಪಿ ಪಕ್ಷಗಳು ತಲಾ ನಾಲ್ಕು ಕ್ಷೇತ್ರಗಳಲ್ಲಿ ಗೆದ್ದಿವೆ. 243 ಸದಸ್ಯ ಬಲದ ವಿಧಾನಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಬಲ 125 ಮಾತ್ರ. ಇದು ಸರಳ ಬಹುಮತಕ್ಕಿಂತ ಮೂರು ಸ್ಥಾನ ಹೆಚ್ಚು.

ಬಿಎಸ್‌ಪಿಯ ಒಬ್ಬ ಮತ್ತು ಎಲ್‌ಜೆಪಿಯ ಒಬ್ಬ ಶಾಸಕರನ್ನು ಜೆಡಿಯು ಸೇರುವಂತೆ ಮಾಡುವಲ್ಲಿ ಜೆಡಿಯು ಮುಖ್ಯಸ್ಥ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಯಶಸ್ವಿಯಾಗಿದ್ದಾರೆ ಎಂಬುದು ಬೇರೆ ವಿಚಾರ. ಆದರೆ, ಪರಿಸ್ಥಿತಿ ಹೇಗಿದೆ ಎಂದರೆ ಎಂಟರಿಂದ ಹತ್ತು ಶಾಸಕರು ನಿಷ್ಠೆ ಬದಲಿಸಿದರೆ ಸರ್ಕಾರ ಉರುಳುತ್ತದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಲಾಲು ಅವರ ಅನುಪಸ್ಥಿತಿ ಎದ್ದು ಕಾಣಿಸಿತ್ತು. ಬಿಹಾರದ ಅತ್ಯಂತ ಜನಪ್ರಿಯ ನಾಯಕ ಎಂದು ಹೇಳಲಾಗುವ ಲಾಲು ಅವರು ಆರ್‌ಜೆಡಿ ನೇತೃತ್ವದ ಮೈತ್ರಿಕೂಟದ ಪರವಾಗಿ ಪ್ರಚಾರ ಮಾಡಲು ಆಗಿರಲಿಲ್ಲ. ಹಾಗಿದ್ದರೂ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಪ್ರಚಾರದ ಹೊಣೆಯನ್ನು ಒಬ್ಬರೇ ವಹಿಸಿಕೊಂಡಿದ್ದರು. 75 ಕ್ಷೇತ್ರಗಳಲ್ಲಿ ಗೆದ್ದ ಆರ್‌ಜೆಡಿ ಅತಿ ದೊಡ್ಡ ಪಕ್ಷವಾಗಿ ಮೂಡಿ ಬಂದದ್ದರಲ್ಲಿ ಅವರ ಶ್ರಮವೇ ಹೆಚ್ಚು.

‘ಜನಾದೇಶ ಸಿಕ್ಕಿದ್ದು ನಮ್ಮ ಪಕ್ಷಕ್ಕೆ. ಆದರೆ, ನಿತೀಶ್ ಕುಮಾರ್ ಅವರು ಹಿಂಬಾಗಿಲ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ’ ಎಂದು ತೇಜಸ್ವಿ ಹಲವು ಬಾರಿ ಹೇಳಿದ್ದಾರೆ. ಅಧಿಕಾರಿಗಳನ್ನು ಬಳಸಿಕೊಂಡು ಸುಮಾರು 10 ಕ್ಷೇತ್ರಗಳ ಚುನಾವಣಾ ಫಲಿತಾಂಶವನ್ನು ತಿರುಚಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಈ ಕ್ಷೇತ್ರಗಳಲ್ಲಿ ಕೆಲವೇ ನೂರು ಮತಗಳ ಅಂತರದಲ್ಲಿ ಜೆಡಿಯು ಅಥವಾ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದಾರೆ.

ಎನ್‌ಡಿಎ ಸರ್ಕಾರ ಉರುಳಲು ದಿನಗಣನೆ ಆರಂಭವಾಗಿದೆ ಎಂದು ಲಾಲು ಅವರ ಹಿರಿಯ ಮಗ ತೇಜ್ ಪ್ರತಾಪ್ ಹೇಳಿದ್ದಾರೆ.

ಒಂದು ವಾರದಲ್ಲಿ ಲಾಲು ಅವರು ಬಿಹಾರಕ್ಕೆ ಮರಳಲಿದ್ದಾರೆ. ಯಾವುದೇ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಬಲ್ಲ ಚತುರ ರಾಜಕಾರಣಿ ಲಾಲು. ಹಾಗಾಗಿ, ರಾಜಕೀಯ ಚಟುವಟಿಕೆಗಳ ಬಗ್ಗೆ ಕುತೂಹಲ ಮೂಡಿದೆ. 2020ರಲ್ಲಿ ಅಧಿಕಾರಕ್ಕೆ ಏರಲು ತೇಜಸ್ವಿಗೆ ಸಾಧ್ಯವಾಗಲಿಲ್ಲ. ಅದನ್ನು ಲಾಲು ಸಾಧ್ಯ ಮಾಡಿ ಕೊಡಬಹುದೇ ಎಂಬ ಪ್ರಶ್ನೆ ಈಗ ಇದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹರಿದ್ವಾರದಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಜನರು ಸೇರುತ್ತಲೇ ಇಲ್ಲ. ಕುಂಭ ಮೇಳಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಕೆಲವರು ನಕಲಿ ಚಿತ್ರಗಳನ್ನು ಕುಂಭಮೇಳದ್ದು ಎಂದು ಹಂಚಿಕೊಳ್ಳುತ್ತಿದ್ದಾರೆ. ನಿಜವಾದ ಸ್ಥಿತಿ ಏನಿದೆ ಎಂಬುದನ್ನು ಇಲ್ಲಿ ನೋಡಿ ಎಂದು ಬಿಜೆಪಿಯ ಪ್ರೀತಿ ಗಾಂಧಿ ಅವರು ವಿಡಿಯೊ ಒಂದನ್ನು ಟ್ವೀಟ್ ಮಾಡಿದ್ದಾರೆ. ಹರಿದ್ವಾರದಲ್ಲಿ ಗಂಗಾ ನದಿಯ ದಂಡೆಯಲ್ಲಿ ಕೆಲವೇ ಸಂತರು ಇರುವ ದೃಶ್ಯ ಆ ವಿಡಿಯೊದಲ್ಲಿ ಇದೆ. ಇದೇ ವಿಡಿಯೊ ಮತ್ತು ವಿವರವನ್ನು ಹಲವರು ಹಂಚಿಕೊಂಡಿದ್ದಾರೆ. ಈವರೆಗೆ ಸಾವಿರಾರು ಸಂಖ್ಯೆಯಲ್ಲಿ ಇದನ್ನು ಮರುಟ್ವೀಟ್ ಮಾಡಲಾಗಿದೆ.

ಈ ಪೋಸ್ಟ್‌ನಲ್ಲಿ ಸತ್ಯವನ್ನು ಮರೆಮಾಚಲಾಗಿದೆ. ಆ ಮೂಲಕ ಜನರ ಹಾದಿ ತಪ್ಪಿಸಲಾಗುತ್ತಿದೆ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ಟ್ವೀಟ್‌ಗಳಲ್ಲಿ ಇರುವ ವಿಡಿಯೊವನ್ನು ಹರಿದ್ವಾರದ ಗಂಗಾ ಪಾರ್ಕ್ ಎಂಬ ಹೋಟೆಲಿನ ಎದುರು ಚಿತ್ರೀಕರಿಸಲಾಗಿದೆ. ‘ವಿಡಿಯೊವನ್ನು ಮಧ್ಯಾಹ್ನ 3ರ ವೇಳೆಯಲ್ಲಿ ಚಿತ್ರೀಕರಿಸಲಾಗಿದೆ. ಆ ವೇಳೆಯಲ್ಲಿ ಅಲ್ಲಿ ಯಾವುದೇ ಆಚರಣೆ ನಡೆಯುವುದಿಲ್ಲ, ಆಗ ಜನರು ಹರ್ ಕಿಪೂರಿ ಎಂಬಲ್ಲಿಗೆ ತೆರಳಿರುತ್ತಾರೆ. ಇಲ್ಲಿ ಸಂಜೆ 7ರ ನಂತರ ಜನ ಸೇರುತ್ತಾರೆ. ಬೆಳಿಗ್ಗೆ 7-8ರವರೆಗೆ ಕಿಕ್ಕಿರಿದು ತುಂಬಿರುತ್ತಾರೆ. ನಂತರ ಇಲ್ಲಿಂದ ಹರ್ ಕಿ ಪೌಡಿಗೆ ತೆರಳುತ್ತಾರೆ. ಹೀಗಾಗಿ ಮಧ್ಯಾಹ್ನದ ವೇಳೆ ಇಲ್ಲಿ ಜನರು ಇರುವುದಿಲ್ಲ’ ಎಂದು ಹೋಟೆಲ್‌ನ ಮಾಲೀಕ ತಿಳಿಸಿದ್ದಾರೆ. ಇದೇ ಸ್ಥಳದಲ್ಲಿ ದೂರದರ್ಶನ ವಾಹಿನಿಯವರು ಸಂಜೆ ಚಿತ್ರೀಕರಿಸಿರುವ ವಿಡಿಯೊದಲ್ಲಿ ಸಾವಿರಾರು ಮಂದಿ ಸೇರಿರುವುದು ದಾಖಲಾಗಿದೆ. ಅವರಲ್ಲಿ ಯಾರೂ ಮಾಸ್ಕ್ ಧರಿಸಿಲ್ಲ ಮತ್ತು ಅಂತರ ಕಾಯ್ದುಕೊಂಡಿಲ್ಲ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಹೊಸ ಯೋಜನೆಯ ಸಮಸ್ಯೆ

ಅಮಾತ್ಯರೆಲ್ಲ ಮಹೋಷಧಕುಮಾರನ ಬುದ್ಧಿವಂತಿಕೆಗೆ ಶರಣಾದ ಮೇಲೆ ಕುಮಾರನೇ ಪ್ರಧಾನ ಅಮಾತ್ಯ ಹಾಗೂ ಅರ್ಥಧರ್ಮಾನುಶಾಸಕನಾದ. ತನ್ನ ರಾಜ್ಯವನ್ನು, ರಾಜನನ್ನು ಕಾಪಾಡುವ ಅದನ್ನು ಅಭಿವೃದ್ಧಿಗೊಳಿಸುವ ಒಂದೇ ಚಿಂತನೆ ಅವನದು. ನಗರವನ್ನು ಅತ್ಯಂತ ಬಲಿಷ್ಠ ಮಾಡುವುದಕ್ಕಾಗಿ ಆತ ನಗರದ ಸುತ್ತಲೂ ಕಂದಕಗಳನ್ನು ನಿರ್ಮಿಸಿದ. ಒಂದು ನೀರಿನ ಕಂದಕ, ಮತ್ತೊಂದು ಕೆಸರಿನ ಕಂದಕ, ಇನ್ನೊಂದು ಮರಳಿನ ಕಂದಕ. ನಗರದ ಹಳೆಯ ಮನೆಗಳನ್ನು ದುರಸ್ತಿ ಮಾಡಿಸಿದ. ದೊಡ್ಡ ಕೆರೆಗಳನ್ನು ಕಟ್ಟಿಸಿ, ಮಳೆಗಾಲದಲ್ಲಿ ಬಂದ ನದಿಯ ನೀರಿನಿಂದ ಅವುಗಳನ್ನು ತುಂಬಿಸಿದ. ನಗರದಲ್ಲಿ ವಿಶಾಲವಾದ ಉಗ್ರಾಣಗಳನ್ನು ಕಟ್ಟಿಸಿ, ಅಪಾರವಾದ ಧಾನ್ಯ ಸಂಗ್ರಹ ಮಾಡಿಸಿದ. ನೀರಿನ ಕಾಲುವೆಗಳನ್ನು, ಚರಂಡಿಗಳನ್ನು ಸ್ವಚ್ಛ ಮಾಡಿಸಿ ಹಿಮಾಲಯದಿಂದ ತರಿಸಿದ ಜಲ-ಕಮಲಗಳನ್ನು ಬೆಳೆಸಿದ.

ನಂತರ, ನಗರದ ಬಂದ ವ್ಯಾಪಾರಿಗಳನ್ನು ಭೆಟ್ಟಿಯಾಗಿ, ಅವರು ಬಂದ ದೇಶ, ರಾಜರುಗಳ ವಿವರಗಳನ್ನು ತೆಗೆದುಕೊಂಡು, ಯಾರಿಂದ ತಮಗೆ ಸಹಾಯವಾಗಬಹುದು, ಯಾರಿಂದ ಅಪಾಯ ಬರಬಹುದು ಎಂದು ಯೋಚಿಸಿ ಪಟ್ಟಿ ಮಾಡಿಟ್ಟ. ತನ್ನ ಅತ್ಯಂತ ನಂಬಿಕಸ್ಥರಾದ ಸೈನಿಕರನ್ನು ಮಾರುವೇಷದಲ್ಲಿ ಸುತ್ತಮುತ್ತಲಿನ ಎಲ್ಲ ರಾಜ್ಯಗಳಿಗೆ ಕಳುಹಿಸಿ ಅಲ್ಲಿಯ ರಾಜರ ಚಲನವಲನಗಳನ್ನು ಕಾಲಕಾಲಕ್ಕೆ ತಿಳಿಯುತ್ತಿದ್ದ. ಬಹಳಷ್ಟು ಜನ ಮರಳಿ ಬಂದು ವಿದೇಹ ರಾಜನ ಬಗ್ಗೆ ಯಾರಿಗೂ ತಕರಾರು ಇಲ್ಲವೆಂದು ಹೇಳಿದರು. ಆದರೆ ಉತ್ತರದ ಪಾಂಚಾಲನಗರದ ರಾಜನ ಬಗ್ಗೆ ಮಾತ್ರ ವಿರುದ್ಧ ಅಭಿಪ್ರಾಯ ಬಂದಿತು. ಆ ದೇಶದ ರಾಜ ಬ್ರಹ್ಮದತ್ತ. ಅವನಿಗೆ ಪಂಡಿತನಾದ, ಚತುರನಾದ ಕೇವಟ ಎನ್ನುವವನು ಅಮಾತ್ಯನಾಗಿದ್ದ. ಆತ ಪ್ರಚಂಡ. ಆ ರಾಜನನ್ನು ಹಾಗೂ ಮಂತ್ರಿಯನ್ನು ಹಿಂಬಾಲಿಸಲು ಮಹೋಷಧಕುಮಾರ ತಾನು ಅತ್ಯಂತ ಪ್ರೀತಿಯಿಂದ ಸಾಕಿದ್ದ ಗಿಳಿಮರಿಯನ್ನು ಕಳುಹಿಸಿದ.

ಒಂದು ದಿನ ಬೆಳಿಗ್ಗೆ ಕೇವಟ ಕನಸಿನಲ್ಲಿ ತಾನು ಅತ್ಯಂತ ಅಲಂಕೃತವಾದ ಶಯನಾಗಾರದಲ್ಲಿ ಇದ್ದಂತೆ, ಸುತ್ತಲೂ ಅತುಲ ಐಶ್ವರ್ಯವಿದ್ದಂತೆ ಕಂಡ. ತಾನು ಹಾಗೆಯೇ ಆಗಬೇಕಾದರೆ ರಾಜ ಬ್ರಹ್ಮದತ್ತನನ್ನು ಇಡೀ ಜಂಬೂದ್ವೀಪಕ್ಕೆ ಒಡೆಯನನ್ನಾಗಿ ಮಾಡಿ ತಾನು ರಾಜಪುರೋಹಿತನಾಗಬೇಕು. ಅದನ್ನು ಆಗ ಮಾಡುವುದು ಹೇಗೆ ಎಂದು ಯೋಚಿಸಿ ಒಂದು ಯೋಜನೆಯನ್ನು ಮಾಡಿದ.

ಮರುದಿನ ರಹಸ್ಯಾಲೋಚನೆ ಎಂದು ಹೇಳಿ ರಾಜನನ್ನು ಕರೆದುಕೊಂಡು ಉದ್ಯಾನವನಕ್ಕೆ ಬಂದು ಮರದ ಕೆಳಗೆ ಕುಳಿತ. ಮಹೋಷಧಕುಮಾರ ಕಳುಹಿಸಿದ ಗಿಳಿಮರಿ ಮರದ ಮೇಲೆ ಕುಳಿತು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿತ್ತು. ಕೇವಟ ಹೇಳಿದ, ‘ಮಹಾರಾಜ, ನನ್ನದೊಂದು ಯೋಜನೆ ಇದೆ. ಅದರಂತೆ ಮಾಡಿದರೆ ತಾವು ಇಡೀ ಜಂಬೂದ್ವೀಪಕ್ಕೆ ಒಡೆಯರಾಗುತ್ತೀರಿ’. ರಾಜನೂ ಮಹಾತೃಷ್ಣೆಗೆ ಒಳಗಾಗಿದ್ದ. ‘ನಾನು ಏನು ಮಾಡಬೇಕು?’ ಎಂದು ಕೇಳಿದ. ಅಮಾತ್ಯ ಹೇಳಿದ, ‘ಮಹಾರಾಜಾ, ನಾವು ಸೇನೆಯನ್ನು ಬಲಪಡಿಸಿ ಮೊದಮೊದಲು ಸಣ್ಣ ಸಣ್ಣ ನಗರಗಳನ್ನು ಮುತ್ತೋಣ. ಚಿಕ್ಕ ದ್ವಾರಗಳಿಂದ ಅರಮನೆಯನ್ನು ಕೆಲವರು ಸೇರಿ ರಾಜನನ್ನು ಸೆರೆಹಿಡಿದು ನಮ್ಮ ಅಧಿಪತ್ಯವನ್ನು ಒಪ್ಪಿಕೊಂಡರೆ ನಿನ್ನನ್ನೇ ರಾಜನಾಗಿ ಮುಂದುವರೆಸುತ್ತೇವೆ, ಇಲ್ಲವಾದರೆ ನಮ್ಮ ಭಾರೀ ಸೈನ್ಯ ಹೊರಗೆ ಕಾದಿದೆ, ನಿಮ್ಮ ರಾಜ್ಯವನ್ನು ನಿರ್ನಾಮ ಮಾಡುತ್ತೇವೆ ಎಂದು ಹೇಳಿ ಅವರನ್ನು ನಮ್ಮ ಹಿಡಿತದಲ್ಲಿ ತೆಗೆದುಕೊಳ್ಳೋಣ. ಇಂಥ ನೂರು ರಾಜರನ್ನು ನಮ್ಮ ಉದ್ಯಾನವನದಲ್ಲಿ ಸುರಾಪಾನಕ್ಕೆ ಕರೆದು, ಅದರಲ್ಲಿ ವಿಷ ಹಾಕಿ ಕೊಂದರೆ ಎಲ್ಲ ರಾಜ್ಯಗಳೂ ನಮ್ಮದೇ ಆಗುತ್ತವೆ’. ರಾಜನಿಗೆ ಇದು ಒಪ್ಪಿತವಾಯಿತು. ಗಿಳಿಮರಿ ಈ ವಿಷಯವನ್ನು ತಂದು ಮಹೋಷಧಕುಮಾರನಿಗೆ ಹೇಳಿತು. ಅದನ್ನು ಕೇಳಿ ನಕ್ಕ ಕುಮಾರ ಪ್ರತಿ ಯೋಜನೆಯನ್ನು ಮಾಡಿದ.

ದಿನ ಭವಿಷ್ಯ

ಸೋಮವಾರ 19 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನಿ ಸಪ್ತಮಿ ಗಂ. 30-47 (ಸಾ. 6-31) ಸೋಮವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 49-6 (ರಾ. 1-50) ಸುಕರ್ಮ ನಾಮ ಯೋಗ ಗಂ 23-51 ವಣಿಜ ಕರಣ ಗಂ. 30-47 ವಿಷ ಗಂ. 17-4 ಅಮೃತ ಗಂ. 42-16 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-09 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 3, 6

ಮೇಷ: ವೈಯಕ್ತಿಕ ವಿಚಾರಗಳತ್ತ ಲಕ್ಷ್ಯ ಕೊಡಿ. ಹೊಸ ಉದ್ಯಮವೊಂದನ್ನು ಪ್ರಾರಂಭಿಸುವ ಬಗೆಗೆ ಮಾತುಕತೆ ನಡೆಸುವಿರಿ. ಹಿತಮಿತವಾದ ಮಾತುಗಳಿಂದ ಕಾರ್ಯಸಿದ್ಧಿ. ಮನೆಯಲ್ಲಿ ಆರೋಗ್ಯದೊಂದಿಗೆ ನೆಮ್ಮದಿ ನೆಲೆಸಲಿದೆ.

ವೃಷಭ: ಮಹಿಳೆಯರಿಗೆ ಆರ್ಥಿಕ ಸಬಲತೆಗೆ ಬೇಕಾದ ಅನುಕೂಲತೆಗಳು ದೊರಕಲಿವೆ. ಸರ್ಕಾರಿ ಸಂಸ್ಥೆಗಳಲ್ಲಿ ದುಡಿಯುವವರಿಗೆ ಬಡ್ತಿ ಸಾಧ್ಯತೆ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಸಹಾಯ ನೀಡಬೇಕಾದೀತು.

ಮಿಥುನ: ರಾಜಕೀಯ ಮುತ್ಸದ್ದಿಗಳಿಗೆ ಉನ್ನತ ಹುದ್ದೆ ಅಲಂಕರಿಸುವ ಅವಕಾಶ. ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಆಕಸ್ಮಿಕ ಧನಲಾಭ. ವಿವಾಹ ಸಂಬಂಧದ ಮಾತುಕತೆಗಳು ಮುಂದುವರಿದು ಯಶ ಕಾಣಲಿದೆ.

ಕರ್ಕಾಟಕ: ಸೌಂದರ್ಯವರ್ಧಕ ವಸ್ತುಗಳ ವ್ಯವಹಾರವನ್ನು ಆರಂಭಿಸುವ ಬಗ್ಗೆ ಚಿಂತನೆ ನಡೆಸಲಿದ್ದೀರಿ. ನೆರೆಹೊರೆಯವರೊಂದಿಗೆ ಬಾಂಧವ್ಯ ವೃದ್ಧಿಯಾಗಲಿದೆ. ಹಣಕಾಸಿನ ವಿಷಯದಲ್ಲಿ ಅನುಕೂಲತೆಗಳು.

ಸಿಂಹ: ಬಂಧು ಮಿತ್ರರೊಂದಿಗೆ ದೇವತಾ ಕಾರ್ಯದಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಉದರ ಸಂಬಂಧಿ ಕಾಯಿಲೆಗಳು ಕಿರಿ ಕಿರಿ ಉಂಟುಮಾಡಬಹುದು. ವ್ಯವಹಾರ ನಿಮಿತ್ತ ಮಿತ್ರರೊಂದಿಗೆ ದೂರದ ಪ್ರಯಾಣ ಸಾಧ್ಯತೆ. ಬಂಧುಗಳಿಂದ ಸಹಕಾರ.

ಕನ್ಯಾ: ಮನೆಯ ನವೀಕರಣ ಅಥವಾ ನಿರ್ಮಾಣದ ಕೆಲಸಗಳು ಪ್ರಾರಂಭವಾಗುವವು. ಬಡವರಿಗೆ ಧಾನ್ಯಗಳನ್ನು ದಾನ ಮಾಡುವ ಅವಕಾಶ. ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳುವಿರಿ.

ತುಲಾ: ನ್ಯಾಯಾಲಯದಲ್ಲಿನ ತಗಾದೆಗಳು ನಿಮ್ಮ ಪರವಾಗಿ ಇತ್ಯರ್ಥವಾಗುವುದರಿಂದ ಮಾನಸಿಕ ನೆಮ್ಮದಿ. ಹಿರಿಯ ಅಧಿಕಾರಿಗಳಿಂದ ಮಾನಸಿಕ ಕಿರಿಕಿರಿ. ಆರ್ಥಿಕ ವ್ಯವಹಾರದಲ್ಲಿನ ಉನ್ನತಿಗಾಗಿ ಗಣೇಶ ಪ್ರಾರ್ಥನೆ ಮಾಡಿ.

ವೃಶ್ಚಿಕ: ಸಭೆಯೊಂದರಲ್ಲಿ ಭಾಗವಹಿಸಿ ವಿಷಯವೊಂದರ ಕುರಿತು ಅಭಿಪ್ರಾಯ ಮಂಡಿಸುವ ಸಾಧ್ಯತೆ. ಕಳೆದುಕೊಂಡ ವಸ್ತುಗಳು ಕೈ ಸೇರುವ ಸಂಭವ. ಸಂಸಾರ ಸಮೇತ ದೂರದ ಪ್ರಯಾಣ ಮಾಡಲಿದ್ದೀರಿ. ಮಾನಸಿಕ ನೆಮ್ಮದಿ.

ಧನು: ರಾಜಕೀಯ ಪ್ರೇರಿತ ಕೆಲಸಗಳಲ್ಲಿ ಯಶಸ್ಸು. ಉನ್ನತ ಹುದ್ದೆ ಅಲಂಕರಿಸಿರುವ ಅಧಿಕಾರಿಗಳಿಗೆ ಹೊಂದಿದವರಿಗೆ ವರ್ಗಾವಣೆ ಸಾಧ್ಯತೆ. ಸಾಮಾಜಿಕ ಕ್ಷೇತ್ರದಲ್ಲಿರುವವರಿಗೆ ಉತ್ತಮ ಮನ್ನಣೆ ದೊರಕಲಿದೆ.

ಮಕರ: ವಿದ್ಯಾಭ್ಯಾಸದ ಬಗ್ಗೆ ಹಣಕಾಸಿನ ವ್ಯವಸ್ಥೆ ಮಾಡಬೇಕಾದೀತು. ನೌಕರಸ್ಥರು ಸಹೋದ್ಯೋಗಿಗಳೊಡನೆ ನೇರವಾಗಿ ವ್ಯವಹರಿಸಿ. ಎಲೆಕ್ಟ್ರಿಕಲ್ ಗುತ್ತಿಗೆದಾರರು, ಮಾರಾಟಗಾರರಿಗೆ ಬಿಡುವಿಲ್ಲದ ಕೆಲಸ.

ಕುಂಭ: ವಿಶ್ವಾಸಿಗಳಿಗೆ ಅನಿವಾರ್ಯ ಹಣ ಸಹಾಯ ಮಾಡುವ ಅವಕಾಶ. ಎಂಜಿನಿಯರ್‌ಗಳು, ತಂತ್ರಜ್ಞರು ಮತ್ತು ಗುಪ್ತಚರ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಅನುಕೂಲ. ಲಕ್ಷ್ಮೀ ನೃಸಿಂಹ ಸ್ತೋತ್ರ ಪಠಿಸಿ.

ಮೀನ: ವ್ಯವಹಾರಗಳು ಸುಗಮವಾಗಿ ನೆರವೇರುವವು. ಬರಬೇಕಾಗಿರುವ ಹಣ ನಿಮ್ಮ ಕೈ ಸೇರುವುದರಲ್ಲಿ ಅನುಮಾನವಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗದ ವಿಷಯದಲ್ಲಿ ಮಾಡಿದ ಪ್ರಯತ್ನಗಳು ಫಲ ನೀಡಲಿವೆ.

ನಿಮ್ಮ ಜನ್ಮದಿನ 19-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಮನೆಯ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದರಿಂದ ಚಿಂತೆಯಿಂದ ಮುಕ್ತರಾಗುವಿರಿ. ಸರ್ಕಾರದಿಂದ ಆಗಬೇಕಾದ ಕೆಲಸ ಕಾರ್ಯಗಳು ಕೈಗೂಡಲಿವೆ. ಮನೆಮಂದಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಉತ್ತಮ ಪ್ರೋತ್ಸಾಹ ದೊರಕುವುದು. ಜೀವನದ ಅತ್ಯಂತ ಮಹತ್ವದ ದಾರಿಯಲ್ಲಿ ಹೆಜ್ಜೆ ಹಾಕುವ ಸಾಧ್ಯತೆ.

ಪದಬಂಧ 4571

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಾಕಕ್ಕೆ ಸಿಕ್ಕಿರುವ ಬಹುಮಾನ (5)
4.ವಾಕ್ಯದೊಳಗಿರುವ ಮುಪ್ಪು! (3)
5.ಶ್ರೀ ಕೃಷ್ಣನ ಸ್ನೇಹಿತ (3)
6.ನೋವಿನ ವಿರುದ್ಧ ಪದ (3)
8.ಅಗುಳು ನೋಡುತ್ತಲೇ ಒತ್ತರಿಸಿದ ದುಃಖ (2)
9.ಠರಾವು ಮಂಡಿಸುವಾಗಿನ ದಿಗ್ಭ್ರಮೆ! (2)
11.ಅತ್ಯಂತ ಶ್ರೇಷ್ಠವಾದದ್ದನ್ನು ಹೀಗನ್ನಿ (3)
14.ಉಗುರಿನ ತುದಿ (3)
15.ತಪಸ್ಸು ಮಾಡುವವನು (3)
16.ನೀರಿನಿಂದಾದ ಅನಿಲ (5)

ಮೇಲಿಂದ ಕೆಳಕ್ಕೆ
1.ಅನ್ಯರಿಗೆ ಅಧೀನವಾಗಿರುವುದು (4)
2.ಹೆಬ್ಬೆರಳ ಪಕ್ಕದ ಬೆರಳು (5)
3.ಕಡಸುವಿನಲ್ಲಿರುವ ಶಕ್ತಿ (3)
4.ವಿಷ್ಣುವಿನ ಐದನೆಯ ಅವತಾರ (3)
7.ಲೀಲಾಜಾಲವಾಗಿ ನಡೆದ ಏಲಂ (3)
8.ಮಧುರವಾಗಿರುವ ತುಟಿ (3)
9.ವಿರಾಜಮಾನವಾಗಿರುವ ಚಕ್ರವರ್ತಿ (5)
10.ಉಂಗುರದ ಬೆರಳು (4)
12.ಮನಸ್ಸಿಗೆ ಬಂದಂತೆ ನಡೆಯುವವ (3)
13.ಅಗ್ರಹ ತೋರಿರುವ ಅಣ್ಣ (3)



4570ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಪಾನು 5.ಚಂದನ 6.ಜನಜನಿತ 9.ಪಾರಜ 10.ಕಡಿತ 11.ಕಹಿನೆನಪು 14.ಇಂಗಿತ 15.ರಾಜಿ

ಮೇಲಿಂದ ಕೆಳಕ್ಕೆ: 1.ಮನುಜ 2.ಅವನಿ 3.ಮಂದಮಾರುತ 7.ಜಲಜನಕ 8.ತಪ್ಪುಕಲ್ಪನೆ 9.ಪಾತರಗಿತ್ತಿ 12.ಹಿಕ್ಮತ್ತು 13.ಪುರಾವೆ

ಸುಡೊಕು 4957

				2		7		3
6		9	5		7		4	
	3			8		6		
	7			9			3	
	9	3	6		8		1	4
4				5		8		
7			8		9			
	5							7
	8			4		9		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4956 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಆರೋಗ್ಯ ವಿಮೆಯಲ್ಲಿ ಟಾಪ್ ಅಪ್ ಯೋಜನೆ ಅಂದರೇನು?

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಆರೋಗ್ಯ ವಿಮೆ ನಿಮ್ಮ ವೈದ್ಯಕೀಯ ವೆಚ್ಚಗಳಿಗೆ ನೆರವಾಗುತ್ತದೆ. ಆದರೆ ಒಂದೊಮ್ಮೆ ಆಸ್ಪತ್ರೆ ವೆಚ್ಚ ಆರೋಗ್ಯ ವಿಮೆಯ ಕವರೇಜ್ ಮೊತ್ತದ ಮಿತಿಯನ್ನು ದಾಟಿದಾಗ, ಹೆಚ್ಚುವರಿಯಾಗಿ ಪಾವತಿ ಮಾಡಬೇಕಿರುವ ಹಣವನ್ನು ನಿಮ್ಮ ಕೈಯಿಂದ ಕಟ್ಟಬೇಕಾಗುತ್ತದೆ. ಈ ಸಮಸ್ಯೆಗೆ ಪರಿಹಾರದ ರೂಪದಲ್ಲಿ ಟಾಪ್-ಅಪ್ ಯೋಜನೆಗಳು ಬಂದಿವೆ.

ಟಾಪ್-ಅಪ್ ಯೋಜನೆ ಅಂದರೆ ಏನು? ಅದು ಹೇಗೆ ನಿಮಗೆ ನೆರವಾಗುತ್ತದೆ? ಟಾಪ್-ಅಪ್ ಯೋಜನೆಗೂ ಸೂಪರ್ ಟಾಪ್-ಅಪ್ ಯೋಜನೆಗೂ ಇರುವ ವ್ಯತ್ಯಾಸವೇನು ಎನ್ನುವುದರ ಬಗ್ಗೆ ತಿಳಿದುಕೊಳ್ಳೋಣ.

ಟಾಪ್-ಅಪ್ ಯೋಜನೆ: ಉದಾಹರಣೆಗೆ 'ಎ' ಎಂಬ ವ್ಯಕ್ತಿ ₹ 5 ಲಕ್ಷ ನೀಡಿ ಆರೋಗ್ಯ ವಿಮೆ ಮಾಡಿಸಿಕೊಂಡಿದ್ದರು ಎಂದಿಟ್ಟುಕೊಳ್ಳೋಣ. ಅವರು ಅನಾರೋಗ್ಯದ ಕಾರಣದಿಂದಾಗಿ ಆಸ್ಪತ್ರೆಗೆ ದಾಖಲಾದಾಗ ₹ 5 ಲಕ್ಷದವರೆಗಿನ ಆಸ್ಪತ್ರೆ ವೆಚ್ಚಗಳಿಗೆ ಮಾತ್ರ ವಿಮಾ ಕಂಪನಿ ಹಣ ನೀಡುತ್ತದೆ. ಒಂದೊಮ್ಮೆ ₹ 5 ಲಕ್ಷದ ವಿಮಾ ಕವರೇಜ್ ಮೊತ್ತವನ್ನೂ ಚಿಕಿತ್ಸಾ ವೆಚ್ಚ ಮೀರಿದರೆ ಏನು ಮಾಡುವುದು ಎನ್ನುವುದಕ್ಕೆ ಉತ್ತರ ಟಾಪ್-ಅಪ್ ಯೋಜನೆ.

ಟಾಪ್-ಅಪ್ ಯೋಜನೆಯಲ್ಲಿ ಕಡಿಮೆ ದರಕ್ಕೆ ವಿಮಾ ಕವರೇಜ್ ಮೊತ್ತ ಹೆಚ್ಚಿಸಿಕೊಳ್ಳಬಹುದು. ಅಂದರೆ, ನೀವು ಈಗ ಹೊಂದಿರುವ ವಿಮಾ ಕವರೇಜ್ ಮೊತ್ತ ಸಾಕಾಗುವುದಿಲ್ಲ ಎಂದರೆ ನೀವು ಟಾಪ್-ಅಪ್ ಯೋಜನೆ ಮೂಲಕ ವಿಮಾ ಕವರೇಜ್ ವಿಸ್ತರಿಸಿಕೊಳ್ಳಬಹುದು.

ಸೂಪರ್ ಟಾಪ್-ಅಪ್ ಅಂದರೆ?: ಟಾಪ್-ಅಪ್ ಯೋಜನೆಯ ಅಡಿಯಲ್ಲಿ ಕ್ಲೇಮ್ ಪಡೆದುಕೊಂಡು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಬಳಿಕ ಮತ್ತೆ ಅನಾರೋಗ್ಯಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾದರೆ ಈಗಾಗಲೇ ನೀವು ಪಡೆದಿದ್ದ ಟಾಪ್-ಅಪ್ ಯೋಜನೆಯ ಅಡಿಯಲ್ಲಿ ಮತ್ತೆ ಕ್ಲೇಮ್ ಸಿಗುವುದಿಲ್ಲ. ಟಾಪ್-ಅಪ್ ಅನ್ನು ನೀವು ಮತ್ತೆ ಪಡೆದುಕೊಳ್ಳಬೇಕಾಗುತ್ತೆ. ಒಂದೊಮ್ಮೆ ನೀವು ಟಾಪ್-ಅಪ್ ಯೋಜನೆಯ ಬದಲು ಸೂಪರ್ ಟಾಪ್-ಅಪ್ ಯೋಜನೆ ಪಡೆದುಕೊಂಡರೆ ಈ ಸಮಸ್ಯೆ ಇರುವುದಿಲ್ಲ. ಗುಣಮುಖರಾಗಿ ಮನೆಗೆ ಬಂದು ಮತ್ತೆ ಕೆಲ ದಿನಗಳ ಬಳಿಕ ಆಸ್ಪತ್ರೆಗೆ ದಾಖಲಾಗುವ ಸಂದರ್ಭ ಬಂದರೂ ಸೂಪರ್ ಟಾಪ್-ಅಪ್ ಯೋಜನೆಯ ಅನ್ವಯಿಸುತ್ತದೆ.

ಟಾಪ್-ಅಪ್ ಯೋಜನೆಗಳ ಬಗ್ಗೆ ನೀವು ತಿಳಿದುಕೊಳ್ಳಬೇಕಾದ ವಿಚಾರಗಳು:

- ನಿಮ್ಮ ವಿಮಾ ಯೋಜನೆಯ ಗರಿಷ್ಠ ಸಮ್ ಅಶೂರ್ಡ್ ಮೊತ್ತ ಖಾಲಿಯಾದಾಗ ಮಾತ್ರ ಟಾಪ್-ಅಪ್ ಯೋಜನೆಯಿಂದ ಆಸ್ಪತ್ರೆ ಖರ್ಚು ವೆಚ್ಚಗಳಿಗೆ ವಿಮಾ ಕವರೇಜ್ ಸಿಗುತ್ತದೆ. ಉದಾಹರಣೆಗೆ 'ಎ' ವ್ಯಕ್ತಿ ₹ 5 ಲಕ್ಷ ನೀಡಿ ಆರೋಗ್ಯ ವಿಮೆ ಮಾಡಿಸಿಕೊಂಡಿದ್ದರು ಎಂದಿಟ್ಟುಕೊಳ್ಳೋಣ. ಅವರು ಅನಾರೋಗ್ಯದ ಕಾರಣದಿಂದಾಗಿ ಆಸ್ಪತ್ರೆಗೆ ದಾಖಲಾದಾಗ ₹ 5 ಲಕ್ಷದ ಕವರೇಜ್ ಮಿತಿಯೂ ಬಳಕೆಯಾಯಿತು ಎಂದು ಭಾವಿಸೋಣ. ಇಂತಹ ಸಂದರ್ಭದಲ್ಲಿ ಟಾಪ್-ಅಪ್ ವಿಮಾ ಹಣದಿಂದ ವಿಮಾ ಕಂಪನಿ ವ್ಯಕ್ತಿಯ ಚಿಕಿತ್ಸೆಗೆ ಹಣ ಹೊಂದಿಸುತ್ತದೆ.
- ವೈಯಕ್ತಿಕ ಆರೋಗ್ಯ ವಿಮೆ ಅಥವಾ ಫ್ಯಾಮಿಲಿ ಫ್ಲೋಟರ್ ವಿಮೆಯ ಕವರೇಜ್ ಮೊತ್ತ ಪೂರ್ತಿ ಬಳಕೆಯಾದ ಸಂದರ್ಭದಲ್ಲಿ ಮಾತ್ರ ಟಾಪ್-ಅಪ್ ಯೋಜನೆಗೆ ಅವಕಾಶವಿರುತ್ತದೆ. ಅಂದರೆ, ನಿರ್ದಿಷ್ಟ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿ ವಿಮಾ ಮೊತ್ತ ಸಾಲದಿದ್ದಾಗ ಮಾತ್ರ ಟಾಪ್-ಅಪ್ ಯೋಜನೆಯ ಮೊರೆ ಹೋಗಬಹುದು.
- ಟಾಪ್-ಅಪ್ ಯೋಜನೆ ಒಂದು ನಿರ್ದಿಷ್ಟ ಆರೋಗ್ಯ ಸಮಸ್ಯೆಗೆ ಪಡೆದುಕೊಳ್ಳಬಹುದಾದ ವಿಮಾ ಯೋಜನೆ. ನಿಮ್ಮ ಬಳಿ ಇರುವ ಯಾವುದೇ ಮಾದರಿಯ ವಿಮಾ ಯೋಜನೆ ಜೊತೆಗೆ ಇದನ್ನು ತೆಗೆದುಕೊಳ್ಳಬಹುದು. ಇಂಥದ್ದೇ ಕಂಪನಿಯ ಬಳಿ ಟಾಪ್-ಅಪ್ ಪಡೆಯಬೇಕು ಎಂಬ ನಿರ್ಬಂಧವಿಲ್ಲ.
- ಟಾಪ್-ಅಪ್ ಮತ್ತು ಸೂಪರ್ ಟಾಪ್-ಅಪ್ ಯೋಜನೆಗಳನ್ನು ಪಡೆಯುವಾಗ ನಿಬಂಧನೆಗಳನ್ನು ಓದಿ ಸರಿಯಾಗಿ ಅರ್ಥ ಮಾಡಿಕೊಂಡು ಮುನ್ನಡೆಯಿರಿ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆಯನ್ನು ಮಂಕಾಗಿಸಿದ ಕೋವಿಡ್‌ನ ಎರಡನೇ ಅಲೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ವಾರ ಕುಸಿತ ದಾಖಲಿಸಿವೆ. 48,832 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇಕಡ 1.5ರಷ್ಟು ಕುಸಿದಿದೆ. 14,617 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇ 1.4ರಷ್ಟು ಕುಸಿತ ಕಂಡಿದೆ. ಸೆನ್ಸೆಕ್ಸ್ ಮಿಡ್ ಕ್ಯಾಪ್ ಸೂಚ್ಯಂಕ ಶೇ 2.9ರಷ್ಟು ತಗ್ಗಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.6ರಷ್ಟು ಇಳಿಕೆಯಾಗಿದೆ.

ಇನ್ನು ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 1ಕ್ಕಿಂತ ಹೆಚ್ಚು ಕುಸಿದಿದೆ. ಫಾರ್ಮಾ ವಲಯ ಹೊರತುಪಡಿಸಿ ಉಳಿದೆಲ್ಲ ವಲಯಗಳು ನಕಾರಾತ್ಮಕ ಫಲಿತಾಂಶ ಕೊಟ್ಟಿವೆ. ದೇಶದಲ್ಲಿ ಹೆಚ್ಚುತ್ತಿರುವ ಕೋವಿಡ್-19 ಪ್ರಕರಣಗಳು ಸದ್ಯ ಮಾರುಕಟ್ಟೆಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿವೆ.

ಹಾಗಾಗಿ ಅಲ್ಪಾವಧಿಯಲ್ಲಿ ಷೇರುಪೇಟೆಯಲ್ಲಿ ಅನಿಶ್ಚಿತತೆ ಮುಂದುವರಿಯಲಿದೆ. ಅಲ್ಲಲ್ಲಿ ಲಾಕ್‌ಡೌನ್ ಆಗುತ್ತಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುತ್ತಿರುವುದು, ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ ಕಂಡಿರುವುದು ಸೇರಿ ಹಲವು ಅಂಶಗಳು ಷೇರುಪೇಟೆ ಏರಿಳಿತಕ್ಕೆ ಕಾರಣವಾಗಿವೆ. ಕಂಪನಿಗಳು ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದ ಫಲಿತಾಂಶ ಪ್ರಕಟಿಸುತ್ತಿವೆ. ಆದರೆ ಕೋವಿಡ್-19 ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವುದರಿಂದ ಹೂಡಿಕೆದಾರರು ಫಲಿತಾಂಶವನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಸಿಪ್ಲಾ ಶೇ 6ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6ರಷ್ಟು, ಎಚ್‌ಡಿಎಫ್‌ಸಿ ಶೇ 4ರಷ್ಟು ಮತ್ತು ಡಿಆರ್‌ಎಲ್ ಶೇ 2.3ರಷ್ಟು ಗಳಿಸಿವೆ. ಅದಾನಿ ಪೋರ್ಟ್ಸ್ ಶೇ 6ರಷ್ಟು, ಗ್ರಾಸಿಮ್ ಶೇ 5.5ರಷ್ಟು ಮತ್ತು ಇನ್ಫೊಸಿಸ್ ಶೇ 6.8ರಷ್ಟು ಇಳಿಕೆ ಕಂಡಿವೆ.

ಬ್ರಾಡರ್ ಮಾರ್ಕೆಟ್ ಸೂಚ್ಯಂಕದಲ್ಲಿ ಗ್ಲೆನ್ ಮಾರ್ಕ್ ಫಾರ್ಮಾ ಶೇ 10ರಷ್ಟು, ಜೆಎಸ್‌ಪಿಎಲ್ ಶೇ 4ರಷ್ಟು, ಡಾಬರ್ ಶೇ 3ರಷ್ಟು ಗಳಿಸಿವೆ. ಇಂಡಿಯಾ ಬುಲ್ಸ್ ಹೌಸಿಂಗ್ ಫೈನಾನ್ಸ್ ಶೇ 11ರಷ್ಟು, ಟಾಟಾ ಪವರ್ ಶೇ 9ರಷ್ಟು, ಡಿಎಲ್‌ಎಫ್ ಶೇ 9ರಷ್ಟು, ಅದಾನಿ ಪವರ್ ಶೇ 5ರಷ್ಟು, ಅದಾನಿ ಎಂಟರ್‌ಪ್ರೈಸಸ್ ಶೇ 4ರಷ್ಟು, ಬ್ಯಾಂಕ್ ಆಫ್ ಇಂಡಿಯಾ ಶೇ 3ರಷ್ಟು, ಟಾಟಾ ಕೆಮಿಕಲ್ಸ್ ಶೇ 4ರಷ್ಟು ಮತ್ತು ಅಂಬುಜಾ ಸಿಮೆಂಟ್ಸ್ ಶೇ 4ರಷ್ಟು ಕುಸಿದಿವೆ.

ಮುನ್ನೋಟ: ಜಾಗತಿಕ ಮಾರುಕಟ್ಟೆಗಳಲ್ಲಿ ಸದ್ಯದ ಮಟ್ಟಿಗೆ ಸಕಾರಾತ್ಮಕತೆ ಕಂಡುಬಂದರೂ ದೇಶೀಯವಾಗಿ ಹೆಚ್ಚಳವಾಗುತ್ತಿರುವ ಕೋವಿಡ್ ಪ್ರಕರಣಗಳು ಷೇರುಪೇಟೆ ಹೂಡಿಕೆದಾರರನ್ನು ಚಿಂತೆಗೀಡು ಮಾಡಿವೆ. ಈವಾರ ಎಚ್‌ಸಿಎಲ್ ಟೆಕ್, ಮಹೀಂದ್ರ ಆ್ಯಂಡ್ ಮಹೀಂದ್ರ ಫೈನಾನ್ಸಿಯಲ್ ಸರ್ವೀಸಸ್, ಐಸಿಐಸಿಐ ಬ್ಯಾಂಕ್, ನೆಟ್ವರ್ಕ್ 18, ಎಸಿಸಿ, ನೆಸ್ಲೆ ಇಂಡಿಯಾ, ಕ್ರಿಸಿಲ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹510
12 ಮೊಟ್ಟೆಗೆ ₹66
ಮೈಸೂರು
100 ಮೊಟ್ಟೆಗೆ ₹514

ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ facebook LIVE
fb.com/prajavani.net
ರಾಮನವಮಿ ವಿಶೇಷ
ಶ್ರೀರಾಮ ಸಂಗೀತ ಮಾಧುರ್ಯ
ಹಾಡುಗಾರಿಕೆ: ವಿದುಷಿ ಬೆಂಗಳೂರು ಶುಭಲಕ್ಷ್ಮೀ ಕೃಷ್ಣಮೂರ್ತಿ
(ಇಸ್ರೋ ವಿಜ್ಞಾನಿ, ಉಪ ನಿರ್ದೇಶಕಿ)
ವಯಲಿನ್: ವಿದುಷಿ ಜ್ಯೋತ್ಸ್ನಾ ಮಂಜುನಾಥ್,
ಆದಾಯ ತೆರಿಗೆ ಅಧಿಕಾರಿ
ಮೃದಂಗಂ: ವಿದ್ವಾನ್ ವಿನಯ್ ನಾಗರಾಜನ್

ಜ್ಯೋತ್ಸ್ನಾ ಮಂಜುನಾಥ್ | ಶುಭಲಕ್ಷ್ಮೀ ಕೃಷ್ಣಮೂರ್ತಿ | ವಿನಯ್ ನಾಗರಾಜನ್
21 ನೇ ಏಪ್ರಿಲ್, 2021 ಸಂಜೆ 7.00 ಗಂಟೆಯಿಂದ

SAD DEMISE

DOB: 17.11.1929 DOD: 18.04.2021
DR. M. K. BALAMANI
LMP, MBBS, Retd. Surgeon
W/o, (Late) K. S. Channappa, Ex-MLC
Melur, Shidlaghatta (T)
Attained the lotus feet of the lord in her sleep at her Bangalore residence on 18th April 2021.
Mourning her loss: Bereaved Family members
+91 9972 656 384

ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆ

ಶ್ರೀ ಎಂ.ಜಿ. ಅಂಜನ ಮೂರ್ತಿ, BSc, LLB.
Ex. Consumer Forum Member Bangalore
Ex.Govt.Pleader, High Court of Karnataka,
ಇವರು ದಿನಾಂಕ 10.04.2021, ಶನಿವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬದ್ಧವಾದ ಇವರ ಉತ್ತರಕ್ರಿಯಾದಿ ಕಾರ್ಯಕ್ರಮವನ್ನು ದಿನಾಂಕ : 20.04.2021 ರಂದು ಮಂಗಳವಾರ ಬೆಳಗ್ಗೆ 10.00 ರಿಂದ 1.00 ಗಂಟೆಯವರೆಗೆ ಮೋಟಗಾನಹಳ್ಳಿ ಗ್ರಾಮ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇಲ್ಲಿ ಏರ್ಪಡಿಸಲಾಗಿದೆ. ಬಂಧುಗಳು, ಆತ್ಮೀಯರು ಹಾಗೂ ಹಿತೈಷಿಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಇವರ ಉತ್ತರಕ್ರಿಯಾದಿ ಕಾರ್ಯಕ್ರಮಕ್ಕೆ ತಪ್ಪದೇ ಆಗಮಿಸಬೇಕೆಂದು ವಿನಂತಿ.
ಇಂತಿ ದುಃಖತಪ್ತರು
ಕುಟುಂಬವರ್ಗ ಮತ್ತು ಬಂಧುಮಿತ್ರರು
ಮೊಬೈಲ್ : 9880571580, 9945702639

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಅಡೋಬಿ ಸಹ ಸಂಸ್ಥಾಪಕ ಚಾರ್ಲ್ಸ್ 'ಚಕ್' ಗೆಶ್ಕೆ ನಿಧನ

ಲಾಸ್ ಅಲ್ಟೊಸ್ (ಅಮೆರಿಕ) (ಎಪಿ): ಸಾಫ್ಟ್‌ವೇರ್ ಕಂಪನಿ ಅಡೋಬಿಯ ಸಹ-ಸಂಸ್ಥಾಪಕ ಹಾಗೂ ಪೋರ್ಟೆಬಲ್ ಡಾಕ್ಯುಮೆಂಟ್ ಫಾರ್ಮ್ಯಾಟ್ (ಪಿಡಿಎಫ್) ತಂತ್ರಜ್ಞಾನವನ್ನು ರೂಪಿಸುವಲ್ಲಿ ನೆರವಾಗಿದ್ದ ಚಾರ್ಲ್ಸ್ 'ಚಕ್' ಗೆಶ್ಕೆ (81) ಶುಕ್ರವಾರ ನಿಧನರಾಗಿದ್ದಾರೆ.

'ಅವರ ನಿಧನದಿಂದ ಅಡೋಬಿ ಸಮುದಾಯ ಮತ್ತು ತಂತ್ರಜ್ಞಾನ ಉದ್ಯಮಕ್ಕೆ ಭಾರಿ ನಷ್ಟವಾಗಿದೆ' ಎಂದು ಅಡೋಬಿ ಸಿಇಒ ಶಂತನು ನಾರಾಯಣ್ ಅವರು ತಮ್ಮ ಸಿಬ್ಬಂದಿಗೆ ಕಳುಹಿಸಿರುವ ಇಮೇಲ್ ಸಂದೇಶದಲ್ಲಿ ತಿಳಿಸಿದ್ದಾರೆ.

ನಿಧನ



ಅತ್ಯಂತ ಆತ್ಮೀಯ ಸ್ನೇಹಿತ ಹಾಗೂ ಜೀವಂತಿಕೆಯಿಂದ ತುಂಬಿದ್ದ ಮಾಜಿ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ
ಶ್ರೀ ಜಿ ಕೆ ಭಟ್ ಅವರ
ನಿಧನ ನಮ್ಮನ್ನು ತೀವ್ರ ಶೋಕದಲ್ಲಿ ಮುಳುಗಿಸಿದೆ. ಅವರ ನೆನಪು ಸದಾ ನಮ್ಮ ಹೃದಯದಲ್ಲಿ ಹಸಿರಾಗಿರುತ್ತದೆ.
ನೆನಪುಗಳೊಂದಿಗೆ
ಸ್ನೇಹಿತರು - ಹಿತೈಷಿಗಳು

ವಿಸ್ಕಾನ್ಸಿನ್: ಹೋಟೆಲ್‌ನಲ್ಲಿ ಗುಂಡಿನ ದಾಳಿ, ಮೂವರ ಸಾವು

ಕೆನೋಶಾ, ಅಮೆರಿಕ (ಎಪಿ): ವಿಸ್ಕಾನ್ಸಿನ್ ರಾಜ್ಯದ ಸೋಮರ್ಸ್ ಗ್ರಾಮದಲ್ಲಿನ ಹೋಟೆಲ್‌ವೊಂದರಲ್ಲಿ ವ್ಯಕ್ತಿಯೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಮೂವರು ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ಭಾನುವಾರ ನಡೆದಿದೆ.

'ಗುಂಡಿನ ದಾಳಿ ನಡೆಸಿರುವ ಶಂಕಿತ ವ್ಯಕ್ತಿಯನ್ನು ಇನ್ನೂ ಬಂಧಿಸಿಲ್ಲ. ನಿರ್ದಿಷ್ಟ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವ ಶಂಕೆ ಇದೆ. ಈ ಘಟನೆಯಿಂದ ಸಾರ್ವಜನಿಕರ ಜೀವಕ್ಕೆ ಅಪಾಯ ಇಲ್ಲ' ಎಂದು ಕೆನೋಶಾ ಕೌಂಟಿಯ ಸಾರ್ಜೆಂಟ್ ಡೇವಿಡ್ ರೈಟ್ ತಿಳಿಸಿದರು.

'ಮೃತರ ಗುರುತು ಪತ್ತೆ ಹಚ್ಚುವ ಕಾರ್ಯ ನಡೆದಿದೆ. ಗಾಯಗೊಂಡಿರುವವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ರೈಟ್ ತಿಳಿಸಿದರು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹280-388
ದ್ವಿತಳಿ (ಬಿ.ವಿ)
₹277-443

ಕೋವಿಡ್–19 ಹೆಚ್ಚಳ, ರೂಪಾಯಿ ಮೌಲ್ಯ ಇಳಿಕೆ ಪರಿಣಾಮ

ಮತ್ತೆ ಏರುಗತಿಯಲ್ಲಿ ಚಿನ್ನದ ದರ

• ವಿಶ್ವನಾಥ ಎಸ್.

ಬೆಂಗಳೂರು: ಚಿನ್ನ ಮತ್ತು ಬೆಳ್ಳಿ ಬೆಲೆ ಮತ್ತೆ ಏರುಮುಖವಾಗಿದೆ. ಬೆಂಗಳೂರಿನಲ್ಲಿ ಏಪ್ರಿಲ್ 1ರಿಂದ 17ರವರೆಗೆ ಚಿನ್ನವು 10 ಗ್ರಾಂಗೆ ₹ 3,360ರಷ್ಟು ಹಾಗೂ ಬೆಳ್ಳಿ ದರ ಕೆ.ಜಿ.ಗೆ ₹ 6,200ರಷ್ಟು ಏರಿಕೆ ದಾಖಲಿಸಿದೆ. ಏಪ್ರಿಲ್ 1ರಂದು ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರ ₹ 45,440 ಇತ್ತು. ಈಗ 10 ಗ್ರಾಂ ಚಿನ್ನದ ದರವು ₹ 48,800ಕ್ಕೆ ಏರಿಕೆಯಾಗಿದೆ. ಬೆಳ್ಳಿ ದರ ಕೆ.ಜಿ.ಗೆ ₹ 63,400 ಇತ್ತು. ಈಗ ಅದು ₹ 69,600ಕ್ಕೆ ಏರಿದೆ.

'ಚಿನ್ನದ ದರ ಏರಿಕೆಗೆ ಕಾರಣಗಳು ಹಲವು. ಕೋವಿಡ್-19 ಸಾಂಕ್ರಾಮಿಕ ವೇಗವಾಗಿ ಹರಡುತ್ತಿರುವುದು, ರೂಪಾಯಿ ಮೌಲ್ಯ ಇಳಿಕೆ ಹಾಗೂ ಆರ್ಥಿಕ ಬೆಳವಣಿಗೆಯ ಕುರಿತ ಅನಿಶ್ಚಿತತೆಯು ಚಿನ್ನದ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತಿವೆ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ ವಿದ್ಯಾಸಾಗರ್ ತಿಳಿಸಿದರು.

'ಕಳೆದ ವರ್ಷ ಕೋವಿಡ್-19 ಹರಡಲು ಆರಂಭವಾದ ಬಳಿಕ ಚಿನ್ನದ ಬೆಲೆಯು ಪ್ರತಿ ಗ್ರಾಂಗೆ ₹ 5,200ರವರೆಗೂ ಏರಿಕೆ ಆಗಿತ್ತು. ಎರಡನೇ ಅಲೆಯ ಸಂದರ್ಭದಲ್ಲಿಯೂ ಚಿನ್ನದ ಬೆಲೆ ಏರಿಕೆ ಕಾಣಲಾರಂಭಿಸಿದೆ. ಕಳೆದ 10 ವರ್ಷಗಳಲ್ಲಿ ಚಿನ್ನ, ಬೆಳ್ಳಿ ಬೆಲೆ ಸುಮಾರು ಶೇ 20 ರಿಂದ ಶೇ 30ರವರೆಗೂ ಹೆಚ್ಚಾಗಿದೆ. ಆರ್ಥಿಕತೆಯು ಸ್ಥಿರವಾಗಿಲ್ಲದಿದ್ದರೆ ಅಲ್ಪಾವಧಿಯಲ್ಲಿ ಇನ್ನೂ ಶೇ 10ರಷ್ಟು ಏರಿಕೆ ಆಗುವ ನಿರೀಕ್ಷೆ ಇದೆ. ಪ್ರತಿ ಗ್ರಾಂಗೆ ₹ 300ರಿಂದ ₹ 400ರವರೆಗೂ ಏರಿಕೆ ಆಗಬಹುದು' ಎಂದು ಅವರು ಹೇಳಿದರು.

ರೂಪಾಯಿ ಕುಸಿತ: 'ಕೋವಿಡ್‌ನ ಎರಡನೇ ಅಲೆಯು ಆರಂಭವಾದಾಗಿನಿಂದ ಈವರೆಗೆ ಡಾಲರ್ ಎದುರು ರೂಪಾಯಿ ಮೌಲ್ಯವು ಸುಮಾರು ₹ 2ರಷ್ಟು ಇಳಿಕೆ ಆಗಿದೆ. ಇದರಿಂದಾಗಿ ಚಿನ್ನದ ದರ ಹೆಚ್ಚಾಗುತ್ತಿದೆ. ಹಿಂದಿನಿಂದಲೂ ಚಿನ್ನವು ಆಪದ್ಧನ ಎಂದು ಪರಿಗಣಿತವಾಗಿರುವುದರಿಂದ ದೊಡ್ಡ ಮಟ್ಟದಲ್ಲಿ ಹೂಡಿಕೆ ಮಾಡುವವರು ಸಹ ಚಿನ್ನದ ಖರೀದಿಗೆ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ಇದರಿಂದಲೂ ಬೆಲೆ ಹೆಚ್ಚುತ್ತಿದೆ' ಎಂದರು.

ಸದ್ಯದ ಅನಿಶ್ಚಿತ ಪರಿಸ್ಥಿತಿಯಲ್ಲಿ ಜೀವನ ನಿರ್ವಹಣೆಗೇ ಕಷ್ಟಪಡುತ್ತಿರುವ ಮಧ್ಯಮವರ್ಗಕ್ಕೆ ಚಿನ್ನ ಖರೀದಿಸುವ ಆಲೋಚನೆ ಮಾಡುವುದೇ ಕಷ್ಟ ಎಂಬಂತಾಗಿದೆ. ಭವಿಷ್ಯದ ದೃಷ್ಟಿಯಿಂದ ಚಿನ್ನದ ಗಟ್ಟಿ ಖರೀದಿಸುವುದು ಉತ್ತಮವಾದರೂ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎಂದು ವೈಯಕ್ತಿಕ ಹಣಕಾಸು ಸಲಹೆಗಾರರು ಹೇಳುತ್ತಾರೆ.

'ಕೋವಿಡ್ ಬರುವುದಕ್ಕೂ ಮೊದಲು ನಮ್ಮಲ್ಲಿ ಚಿನ್ನಾಭರಣಗಳಿಗೆ ಮಾತ್ರವೇ ಬೇಡಿಕೆ ಇತ್ತು. ಆದರೆ, ಈಗ ಚಿನ್ನದ ಗಟ್ಟಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಮದುವೆ ಸಮಾರಂಭಗಳಿಗೆ ಚಿನ್ನಾಭರಣ ಖರೀದಿಸುವುದು ಕಡಿಮೆ ಆಗುತ್ತಲೇ ಇದೆ' ಎಂದು ವರ್ತಕರೊಬ್ಬರು ತಿಳಿಸಿದರು.

ಅಂಕಿ–ಅಂಶ

7,000 ರಾಜ್ಯದಲ್ಲಿ ಇರುವ ಚಿನ್ನಾಭರಣ ವರ್ತಕರು

1,800-2,000 ಸಂಘದಲ್ಲಿ ನೋಂದಾಯಿತ ವರ್ತಕರ ಸಂಖ್ಯೆ

ಕೋವಿಡ್ ನಿಯಂತ್ರಣಕ್ಕೆ ಬರದೇ ಆರ್ಥಿಕತೆಯಲ್ಲಿ ಅನಿಶ್ಚಿತ ಸ್ಥಿತಿ ಮುಂದುವರಿದರೆ ಚಿನ್ನದ ದರ ಕಳೆದ ವರ್ಷ ಕಂಡಿದ್ದ ದಾಖಲೆಯ ಮಟ್ಟವನ್ನು ಮತ್ತೆ ತಲುಪುವ ಸಾಧ್ಯತೆ ಇದೆ

ವಿದ್ಯಾಸಾಗರ್, ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ

ಎಟಿಎಂನಿಂದ ಹಣ ಪಡೆಯಲು ವಂಚಕರ ಹೊಸ ತಂತ್ರ

ನವದೆಹಲಿ (ಪಿಟಿಐ): ಎಟಿಎಂಗಳಿಂದ ಅಕ್ರಮವಾಗಿ ಹಣ ಪಡೆಯಲು ಸೈಬರ್ ಅಪರಾಧಿಗಳು ಹೊಸ ಕಾರ್ಯತಂತ್ರ ಅನುಸರಿಸುತ್ತಿದ್ದಾರೆ. ಹೀಗಾಗಿ ನೆಟ್‌ವರ್ಕ್‌ನಲ್ಲಿ ಎಂಡ್-ಟು-ಎಂಡ್ ಎನ್‌ಕ್ರಿಪ್ಷನ್ ವ್ಯವಸ್ಥೆಯ ಮೂಲಕ ಎಟಿಎಂಗಳಲ್ಲಿ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೂ ಸರ್ಕಾರ ಸೂಚನೆ ನೀಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುರಕ್ಷತಾ ಏಜೆನ್ಸಿಗಳು ನಡೆಸಿರುವ ತನಿಖೆಯಿಂದ ಇದು ತಿಳಿದುಬಂದಿದೆ ಎಂದು ಈ ಕುರಿತು ಮಾಹಿತಿ ಇರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖೆಯ ಪ್ರಕಾರ, ವಂಚಕರು ಮೊದಲು ಎಟಿಎಂನ ನೆಟ್‌ವರ್ಕ್ (ಲ್ಯಾನ್) ಕೇಬಲ್ ಅನ್ನು ಬದಲಿಸುತ್ತಾರೆ. ಹೀಗೆ ಮಾಡಿ, ಎಟಿಎಂ ಸ್ವಿಚ್‌ನಿಂದ ಹೊರಡುವ 'ಹಣ ಕೊಡಲು ನಿರಾಕರಿಸುವ' ಸಂದೇಶಗಳನ್ನೇ ಬದಲಾಯಿಸಿ, ಅವು 'ಹಣ ನೀಡುವ ಸಂದೇಶ'ವಾಗಿ ಬದಲಾಗುವಂತೆ ಮಾಡಿ ಅಕ್ರಮವಾಗಿ ಹಣ ಪಡೆಯುತ್ತಿದ್ದಾರೆ.

ಅಪರಾಧಿಗಳು ಎಟಿಎಂ ಯಂತ್ರ ಇರುವ ಜಾಗದಲ್ಲಿನ ರೂಟರ್ ಅಥವಾ ಸ್ವಿಚ್ ಮಧ್ಯೆ ಒಂದು ಸಾಧನವನ್ನು ಜೋಡಿಸುತ್ತಾರೆ. ನೆಟ್‌ವರ್ಕ್ ಮೂಲಕ ಎಟಿಎಂಗೆ ಸಂಪರ್ಕ ಹೊಂದಿರುವ ಅಧಿಕೃತ ಹೋಸ್ಟ್‌ನಿಂದ (ಎಟಿಎಂ ಸ್ವಿಚ್) ಪ್ರತಿಕ್ರಿಯೆಗಳನ್ನು ಮಾರ್ಪಡಿಸುವ ಸಾಮರ್ಥ್ಯವನ್ನು ಈ ಸಾಧನ ಹೊಂದಿರುತ್ತದೆ. ಬಳಿಕ ವಂಚಕರು ನಿರ್ಬಂಧಿತ ಅಥವಾ ಬ್ಲಾಕ್ ಆಗಿರುವ ಕಾರ್ಡ್‌ಗಳನ್ನು ಬಳಸಿ ಎಟಿಎಂನಲ್ಲಿ ಹಣ ಪಡೆಯುವ ಪ್ರಕ್ರಿಯೆ ನಡೆಸುತ್ತಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಜಿಡಿಪಿ ವೃದ್ಧಿ: ಅಂದಾಜು ತಗ್ಗಿಸಿದ ಬ್ರೋಕರೇಜ್ ಸಂಸ್ಥೆಗಳು

ನವದೆಹಲಿ (ಪಿಟಿಐ): ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವುದು ಆರ್ಥಿಕ ಚೇತರಿಕೆಗೆ ಅಪಾಯ ತಂದೊಡ್ಡುತ್ತಿರುವ ಕಾರಣ, ಪ್ರಮುಖ ಬ್ರೋಕರೇಜ್ ಸಂಸ್ಥೆಗಳು ಭಾರತದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣದ ಅಂದಾಜನ್ನು ತಗ್ಗಿಸಿವೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇಕಡ 12.6ರಷ್ಟು ಬೆಳವಣಿಗೆ ಸಾಧಿಸಬಹುದು ಎಂದು ನೊಮುರ ಅಂದಾಜಿಸಿದೆ. ಈ ಮೊದಲು ಸಂಸ್ಥೆಯು, ಭಾರತದ ಜಿಡಿಪಿ ಬೆಳವಣಿಗೆ ಶೇ 13.5ರಷ್ಟು ಇರಲಿದೆ ಎಂದು ಅಂದಾಜಿಸಿತ್ತು. ಜಿಡಿಪಿಯು ಶೇ 13ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಈ ಮೊದಲು ಅಂದಾಜಿಸಿದ್ದ ಜೆಪಿ ಮಾರ್ಗನ್, ಈಗ ಬೆಳವಣಿಗೆಯು ಶೇ 11ರಷ್ಟು ಆಗಬಹುದು ಎಂದು ಹೇಳಿದೆ. ಯುಬಿಎಸ್ ಸಂಸ್ಥೆಯು ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ 10ಕ್ಕೆ ತಗ್ಗಿಸಿದೆ. ಅದು ಈ ಮೊದಲು ಶೇ 11.5ರ ಬೆಳವಣಿಗೆ ಇರಲಿದೆ ಎಂದು ಅಂದಾಜು ಮಾಡಿತ್ತು.

ಕೋವಿಡ್–19 ಸಾಂಕ್ರಾಮಿಕ ಹರಡಲು ಆರಂಭಿಸುವ ಮೊದಲೂ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಮಂದಗತಿಗೆ ತಿರುಗಿತ್ತು. 2016–17ರಲ್ಲಿ ಶೇ 8.3ರಷ್ಟಿದ್ದ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು 2019–20ರಲ್ಲಿ ಶೇ 4ಕ್ಕೆ ಇಳಿಕೆ ಕಂಡಿತ್ತು. ಈ ವರ್ಷದ ಮಾರ್ಚ್‌ಗೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇ (–)8ರಷ್ಟು ಕುಸಿತ ಕಂಡಿರುವ ಅಂದಾಜು ಇದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅಂದಾಜಿನ ಅನ್ವಯ ದೇಶದ ಜಿಡಿಪಿ ಬೆಳವಣಿಗೆಯು 2021–22ರಲ್ಲಿ ಶೇ 10.5ರಷ್ಟು ಇರಲಿದೆ. ಜಿಡಿಪಿ ಬೆಳವಣಿಗೆ ಶೇ 12.5ರಷ್ಟಾಗಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ.

'ಬಹುತೇಕ ಜಿಲ್ಲೆಗಳಲ್ಲಿ ಈಗ ವರದಿಯಾಗುತ್ತಿರುವ ಕೋವಿಡ್–19 ಪ್ರಕರಣಗಳು ಆತಂಕ ಹುಟ್ಟಿಸುತ್ತಿವೆ. ಪ್ರಕರಣಗಳು ತೀವ್ರ ಗತಿಯಲ್ಲಿ ಏರಿಕೆಯಾಗುತ್ತಿವೆ, ಹಾಗೆಯೇ ಅವು ಬಹಳ ಬೇಗ ಕಡಿಮೆ ಆಗುತ್ತವೆ ಕೂಡ' ಎಂದು ಕ್ರೆಡಿಟ್ ಸ್ಯೂಸ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

'ವಿದ್ಯುತ್ ಚಾಲಿತ ವಾಹನ: ಮುಂಚೂಣಿ ಸ್ಥಾನಕ್ಕೆ ಭಾರತ'

ನವದೆಹಲಿ (ಪಿಟಿಐ): ಮುಂದಿನ ಆರು ತಿಂಗಳಲ್ಲಿ ಲಿಥಿಯಂ ಅಯಾನ್ ಬ್ಯಾಟರಿಗಳನ್ನು ಪೂರ್ಣ ಪ್ರಮಾಣದಲ್ಲಿ ಭಾರತದಲ್ಲಿಯೇ ತಯಾರಿಸಲಾಗುತ್ತದೆ, ಭಾರತವು ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಯಲ್ಲಿ ವಿಶ್ವದಲ್ಲಿ ಮೊದಲ ಸ್ಥಾನ ಪಡೆಯಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಮೆಜಾನ್ ಆಯೋಜಿಸಿದ 'ಸಂಭವ್ ಶೃಂಗ'ದಲ್ಲಿ ಮಾತನಾಡಿದ ಅವರು ಈ ಮಾತು ಹೇಳಿದರು. ಮುಂದಿನ ಎರಡು ವರ್ಷಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಬೆಲೆಯು ಕಡಿಮೆ ಆಗಲಿದೆ. ಆಗ ಅವು ಪೆಟ್ರೋಲ್, ಡೀಸೆಲ್ ಚಾಲಿತ ವಾಹನಗಳಷ್ಟೇ ಸ್ಪರ್ಧಾತ್ಮಕ ಆಗಲಿವೆ ಎಂದು ಗಡ್ಕರಿ ಹೇಳಿದರು.

ಚಿನ್ನ ಆಮದು ಹೆಚ್ಚಳ

ನವದೆಹಲಿ (ಪಿಟಿಐ): 2019–20ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2020–21ರಲ್ಲಿ ಚಿನ್ನದ ಆಮದು ಶೇಕಡ 22.58ರಷ್ಟು ಏರಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 2 ಲಕ್ಷ ಕೋಟಿಯಿಂದ ₹ 2.54 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಬಾಂಗ್ಲಾದೇಶ: ಇಸ್ಲಾಮಿಕ್ ಮುಖಂಡನ ಬಂಧನ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ತೀವ್ರ ಸ್ವರೂಪದ ಗಲಭೆಗೆ ಪ್ರಚೋದನೆ ನೀಡಲು ಸಂಚು ನಡೆಸಿದ್ದ ಆರೋಪದಡಿ ಇಸ್ಲಾಮಿಕ್ ಸಂಘಟನೆ ಹಿಫಾಜತ್–ಎ–ಇಸ್ಲಾಂನ ಮುಖಂಡನನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Finance
ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.
Business Offers
Finance
★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ
Astrology
★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾಧೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137
★ಶ್ರೀಕ್ಷೇತ್ರ ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542
★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ_ಮೂಲಕ_ಪರಿಹಾರ ತಿಳಿಸುತ್ತಾರೆ. ಬಸ್_ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668
ಪರಿಹಾರಕ್ಕೆ ಸಹಾಯವಿದೆ:- ಮದುವೆಯಾಗಿಲ್ಲ, ಉದ್ಯೋಗವಿಲ್ಲ, ಜಗಳ, ರೋಗಬಾಧೆ, ಇನ್ನಿತರ. ವಶೀಕರಣವಿಧಿ ಕಲಿಯಬೇಕಾ? ಹಠಮಾರಿ, ಪತಿಪತ್ನಿ, ಸಹೋದ್ಯೋಗಿ, ಅಧಿಕಾರಿ, ಸ್ತ್ರೀಪುರುಷರನ್ನು, ಆಕರ್ಷಿಸಬೇಕಾ? ಆಹಾರಪದಾರ್ಥದ ವ್ಯಾಪಾರಕ್ಕೂ, ಆಹಾರಪದಾರ್ಥವಲ್ಲದ ವ್ಯಾಪಾರಕ್ಕೂ ಗ್ರಾಹಕರು ತಮ್ಮಲ್ಲೇ ಬರುವಂತಾಗಬೇಕಾ? ಪ್ರೇಮಸಂಬಂಧ ಯಶಸ್ಸಿಗಾಗಿ:- ಒಂದೇಸಲ ತಿಳಿಸಿದ ಸಣ್ಣಕಾರ್ಯದಲ್ಲಿ ತೊಡಗಿಸಿಕೊಳ್ಳುವಿರಾ. 8884826120
★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558
★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ,25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಉದ್ಯೋಗಾವಕಾಶ
General
TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554
ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611285757, 9611625051
Wanted
ಬೇಕಾಗಿದ್ದಾರೆ: ಅಡುಗೆಕೆಲಸ, ಮನೆಕೆಲಸ, ಮಕ್ಕಳನ್ನು ನೋಡಿಕೊಳ್ಳುವವರು, ರೋಗಿಗಳನ್ನು ನೋಡಿಕೊಳ್ಳುವವರು, ಹೆಂಗಸರು ಬೇಕಾಗಿದ್ದಾರೆ. ಸಂಬಳ:18,000/- ಸಂಪರ್ಕಿಸಿ: ಸ್ಟ್ಯಾಂಡರ್ಡ ಸರ್ವಿಸ್, 134/1, 3ನೇ ಮಹಡಿ, ಜ್ಯೋತಿ ಕಾಂಪ್ಲೆಕ್ಸ್, ಇನ್‌ಫ್ಯಾಂಟ್ರಿ ರೋಡ್, ಶಿವಾಜಿನಗರ, ಬೆಂಗಳೂರು-560051 080-44556677, 9844008345
Part-Time Jobs
ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ವಾಹನ
Four Wheelers Selling
Others
ನೂತನ ವರ್ಷಕ್ಕೆ ವಿನೂತನ ಕೊಡುಗೆಗಳು
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

4.99%* ಬಡ್ಡಿದರ/ 47 ತಿಂಗಳು
₹30,000/-* ವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹20,000/-* ವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore - 7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಕೊರೊನಾ ಸಾಂತ್ವನ

‘ಕೋವಿಡ್: ಪರೀಕ್ಷೆಗೆ ವಿಳಂಬ ಮಾಡಿದಲ್ಲಿ ಸಮಸ್ಯೆ’

‘ಜ್ವರ, ಕೆಮ್ಮು ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಾಗ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಕೆಲವರು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ ಅವರ ಆರೋಗ್ಯ ಇನ್ನಷ್ಟು ಹದಗೆಡುವ ಜತೆಗೆ ಅವರಿಂದ ಮತ್ತಷ್ಟು ಮಂದಿಗೆ ವೈರಾಣು ಹರಡುವ ಸಾಧ್ಯತೆ ಇರುತ್ತದೆ. ಹಾಗಾಗಿ, ಕೋವಿಡ್ ಲಕ್ಷಣಗಳು ಗೋಚರಿಸಿದರೆ ತಡಮಾಡದೆಯೇ ಪರೀಕ್ಷೆ ಮಾಡಿಸಿಕೊಂಡು, ಅಗತ್ಯ ಆರೈಕೆ ಮಾಡಿಕೊಳ್ಳಬೇಕು.’

‘ಕೋವಿಡ್ ಮೊದಲ ಅಲೆ ಹೋಲಿಸಿದರೆ ಎರಡನೇ ಅಲೆಯ ಅವಧಿಯಲ್ಲಿ ವೈರಾಣು ವೇಗವಾಗಿ ಹರಡುತ್ತಿದೆ. ಅಲ್ಪಾವಧಿಯಲ್ಲಿಯೇ ಎಲ್ಲರ ಸೋಂಕು ವ್ಯಾಪಿಸಿಕೊಳ್ಳುತ್ತಿದೆ. ವೈರಾಣುವಿನ ತೀವ್ರತೆ ಈ ಮೊದಲಿನಂತೆಯೇ ಇದೆ. ಹಾಗಾಗಿ, ಈ ಬಾರಿ ಇನ್ನಷ್ಟು ಮುನ್ನೆಚ್ಚರಿಕೆ ವಹಿಸಬೇಕು. ಜ್ವರ, ಮೈಕೈ ನೋವು, ಆಯಾಸ, ವಾಸನೆ ಗ್ರಹಿಕೆ ಶಕ್ತಿ ಕಳೆದುಕೊಳ್ಳುವುದು, ರುಚಿ ತಿಳಿಯದಿರುವುದು, ಅತಿಸಾರ, ಮೂಗು ಮತ್ತು ಗಂಟಲು ನೋವು, ಉಸಿರಾಟ ಸಮಸ್ಯೆ, ಕೆಮ್ಮು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾಗಿ, ಫಲಿತಾಂಶ ಬರುವವರೆಗೂ ಮನೆಯಲ್ಲಿಯೇ ಸ್ವಯಂ ನಿಗಾ ವ್ಯವಸ್ಥೆಗೆ ಒಳಪಡಬೇಕು.’

‘ವೈರಾಣು ದೇಹವನ್ನು ಪ್ರವೇಶಿಸಿದ ಕೂಡಲೇ ಪತ್ತೆ ಮಾಡಿ, ಚಿಕಿತ್ಸೆ ನೀಡಿದಲ್ಲಿ ವ್ಯಕ್ತಿ ಬೇಗ ಚೇತರಿಸಿಕೊಳ್ಳುತ್ತಾನೆ. ಮನೆಯ ಹಿರಿಯ ಸದಸ್ಯರಿಗೆ ಲಸಿಕೆ ನೀಡುವ ಜವಾಬ್ದಾರಿ ನಮ್ಮ ಮೇಲಿದೆ ಎನ್ನುವುದನ್ನು ಯುವಜನತೆ ಮರೆಯಬಾರದು. ವೃದ್ಧರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವುದರಿಂದ ಸೋಂಕಿತರಾದಲ್ಲಿ ಅಸ್ವಸ್ಥರಾಗುವ ಸಾಧ್ಯತೆ ಇರಲಿದೆ. ಹಾಗಾಗಿ, ಅಂತಹವರು ಅನಿವಾರ್ಯ ಇದ್ದಲ್ಲಿ ಮಾತ್ರ ಅಗತ್ಯ ಸುರಕ್ಷತೆಯೊಂದಿಗೆ ಹೊರಗಡೆ ಹೋಗಬೇಕು. ಸದ್ಯ ಪಡೆಯುತ್ತಿರುವ ವೈದ್ಯಕೀಯ ಚಿಕಿತ್ಸೆಯನ್ನು ಮುಂದುವರಿಸಬೇಕು.’

‘ಈ ಸಂದರ್ಭದಲ್ಲಿ ನಮ್ಮ ಆಹಾರ ಕ್ರಮ ಹಾಗೂ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳಬೇಕು. ಹಣ್ಣು, ತರಕಾರಿ, ಮೊಟ್ಟೆ ಸೇರಿದಂತೆ ವಿವಿಧ ಪೌಷ್ಟಿಕ ಆಹಾರ ಸೇವಿಸುವ ಮೂಲಕ ರೋಗನಿರೋಧಕ ಶಕ್ತಿ ವೃದ್ಧಿಸಿಕೊಳ್ಳಬೇಕು. ವ್ಯಾಯಾಮ, ಯೋಗ ಮಾಡುವುದನ್ನು ರೂಢಿಸಿಕೊಳ್ಳಬೇಕು. ಅರ್ಹ ಫಲಾನುಭವಿಗಳು ಆದಷ್ಟು ಬೇಗ ಲಸಿಕೆಯನ್ನು ಪಡೆದುಕೊಳ್ಳಬೇಕು. ಇದು ದೇಹದಲ್ಲಿ ಪ್ರತಿಕಾಯಗಳನ್ನು ವೃದ್ಧಿಸಲು ಸಹಕಾರಿಯಾಗಲಿದೆ. ಮುಖಗವಸು ಧರಿಸುವುದನ್ನು ಮತ್ತು ಅಂತರ ಕಾಯ್ದುಕೊಳ್ಳುವುದನ್ನು ಯಾವುದೇ ಕಾರಣಕ್ಕೂ ಮರೆಯಬಾರದು.’

ಡಾ. ವಾಸುನೇತ್ರ ಕಾಸರಗೋಡು, ವಿಕ್ರಮ್ ಆಸ್ಪತ್ರೆಯ ಶ್ವಾಸಕೋಶ ತಜ್ಞ

ಕೋವಿಡ್ ಸಾಂಕ್ರಾಮಿಕ ನಿಯಂತ್ರಣ: ಪ್ರಧಾನಿ ಮೋದಿಗೆ ಮಾಜಿ ಪ್ರಧಾನಿ ಮನಮೋಹನ್ ಪತ್ರ ಮೂಲಕ ಸಲಹೆ

ಲಸಿಕೆ ನೀಡುವಿಕೆಗೆ ವೇಗ ತುಂಬಿ

ನವದೆಹಲಿ (ಪಿಟಿಐ): ‘ಲಸಿಕಾ ಕಾರ್ಯಕ್ಕೆ ಇನ್ನಷ್ಟು ವೇಗ ತುಂಬುವುದೊಂದೇ ಕೋವಿಡ್ ಪಿಡುಗಿನ ನಿಯಂತ್ರಣಕ್ಕೆ ಇರುವ ದಾರಿ. ಸರ್ಕಾರವು ಇಂತಿಷ್ಟು ಮಂದಿಗೆ ಲಸಿಕೆ ನೀಡಿದ್ದೇವೆ ಎಂದು ಸಂಖ್ಯೆ ಹೇಳುವುದಕ್ಕಿಂತ, ಶೇಕಡಾವಾರು ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಬೇಕು’ ಎಂದು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹೇಳಿದ್ದಾರೆ.

ಕೋವಿಡ್ ನಿರ್ವಹಣೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಪತ್ರ ಬರೆದಿರುವ ಅವರು ಐದು ಪ್ರಮುಖ ಸಲಹೆಗಳನ್ನು ನೀಡಿದ್ದಾರೆ. ‘ಲಸಿಕೆ ನೀಡಿಕೆಯಲ್ಲಿ ಸಂಖ್ಯೆಗಿಂತ ಶೇಕಡಾವಾರು ಪ್ರಮಾಣದತ್ತ ಗಮನ ಹರಿಸಬೇಕು. ಜನಸಂಖ್ಯೆಯ ಸಣ್ಣ ಪ್ರಮಾಣದ ಜನರಿಗಷ್ಟೇ ಲಸಿಕೆ ನೀಡಲು ನಮಗೆ ಸಾಧ್ಯವಾಗಿದೆ. ನಾವು ಇದಕ್ಕಿಂತ ವೇಗವಾಗಿ ಇನ್ನಷ್ಟು ಉತ್ತಮ ಕೆಲಸಗಳನ್ನು ಮಾಡಬಲ್ಲೆವು’ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

‘ಲಸಿಕೆ ನೀಡುವ ವಿಚಾರದಲ್ಲಿ ರಾಜ್ಯಗಳಿಗೆ ಇನ್ನಷ್ಟು ಸ್ವಾತಂತ್ರ್ಯ ನೀಡಬೇಕು. ಕೆಲವು ರಾಜ್ಯಗಳು ವಕೀಲರು, ಟ್ಯಾಕ್ಸಿ–ಬಸ್ ಚಾಲಕರು, ಶಿಕ್ಷಕರು, ನಗರಸಭೆ, ಪಂಚಾಯಿತಿ ಸಿಬ್ಬಂದಿ... ಹೀಗೆ ಬೇರೆಬೇರೆ ವರ್ಗದವರನ್ನು ಮುಂಚೂಣಿ ಹೋರಾಟಗಾರರೆಂದು ಪರಿಗಣಿಸಿ, ಲಸಿಕೆ ನೀಡಲು ಬಯಸಬಹುದು. ಇಂಥವರು 45 ವರ್ಷಕ್ಕೂ ಕಡಿಮೆ ವಯಸ್ಸಿನವರಾಗಿದ್ದರೂ ಲಸಿಕೆ ನೀಡಲು ಅವಕಾಶ ಕೊಡಬೇಕು.

‘ಕಾನೂನಿನಲ್ಲಿರುವ ‘ಕಡ್ಡಾಯ ಪರವಾನಗಿ’ ಅವಕಾಶವನ್ನು ಈಗ ಸರ್ಕಾರ ಬಳಸಿಕೊಳ್ಳಬೇಕು. ಇದರಿಂದ ಇನ್ನಷ್ಟು ಕಂಪನಿಗಳಿಗೆ ಲಸಿಕೆ ತಯಾರಿಸಲು ಅವಕಾಶ ಲಭಿಸುತ್ತದೆ. ಆ ಮೂಲಕ ಲಸಿಕೆಯ ಕೊರತೆಯನ್ನು ನೀಗಿಸಬಹುದಾಗಿದೆ. ಎಚ್‌ಐವಿ/ಏಡ್ಸ್ ಔಷಧ ತಯಾರಿಕೆಯ ವಿಚಾರದಲ್ಲಿ ಸರ್ಕಾರ ಹಿಂದೆ ಇಂಥ ಕ್ರಮ ಕೈಗೊಂಡಿತ್ತು. ಇಸ್ರೇಲ್ ಸರ್ಕಾರವು ಈಗಾಗಲೇ ಇಂಥ ಕ್ರಮ ಕೈಗೊಂಡಿದೆ’ ಎಂದು ಅವರು ಸಲಹೆ ನೀಡಿದ್ದಾರೆ.

‘ದೇಶದಲ್ಲಿ ಲಸಿಕೆಯ ಕೊರತೆ ಇರುವುದರಿಂದ ದೇಶೀಯ ಪ್ರಯೋಗವನ್ನು ಕಡ್ಡಾಯಗೊಳಿಸದೆಯೇ, ಯುಎಸ್‌ಎಫ್‌ಡಿಎ ಅಥವಾ ಯುರೋಪಿಯನ್ ಮೆಡಿಕಲ್ ಏಜನ್ಸಿಯಂಥ ಸಂಸ್ಥೆಗಳು ಪ್ರಮಾಣೀಕರಿಸಿದ ಲಸಿಕೆಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ನೀಡಬೇಕು. ತುರ್ತು ಸಂದರ್ಭಗಳಲ್ಲಿ ಇಂಥ ಸಡಿಲಿಕೆ ಮಾಡಬಹುದು’ ಎಂದು ತಜ್ಞರು ಸಹ ಹೇಳುತ್ತಾರೆ ಎಂದು ಸಿಂಗ್ ಹೇಳಿದ್ದಾರೆ.

ಮುಂಬೈಯ ಬೊಯಿಸರ್ ರೈಲುನಿಲ್ದಾಣದಲ್ಲಿ ‘ಆಕ್ಸಿಜನ್ ಎಕ್ಸ್‌ಪ್ರೆಸ್’ನ ವ್ಯಾಗನ್‌ಗಳ ಮೇಲೆ ಟ್ಯಾಂಕರ್‌ಗಳನ್ನು ಇಡುವ ಕಾರ್ಯ ನಡೆದಿದೆ –ಪ್ರಜಾವಾಣಿ ಚಿತ್ರ

ಆಮ್ಲಜನಕ ಪೂರೈಕೆಗೆ ‘ಆಕ್ಸಿಜನ್ ಎಕ್ಸ್‌ಪ್ರೆಸ್’

‘ದೇಶದ ವಿವಿಧ ಭಾಗಗಳಿಗೆ ತ್ವರಿತವಾಗಿ ವೈದ್ಯಕೀಯ ಆಮ್ಲಜನಕವನ್ನು ತಲುಪಿಸುವ ಉದ್ದೇಶದಿಂದ ಶೀಘ್ರದಲ್ಲೇ ‘ಆಕ್ಸಿಜನ್ ಎಕ್ಸ್‌ಪ್ರೆಸ್’ ರೈಲುಗಳನ್ನು ಆರಂಭಿಸಲಾಗುವುದು’ ಎಂದು ರೈಲ್ವೆ ಇಲಾಖೆ ಭಾನುವಾರ ತಿಳಿಸಿದೆ.

ದೇಶದ ವಿವಿಧ ಭಾಗಗಳಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ಉಂಟಾಗಿರುವುದರಿಂದ ತ್ವರಿತವಾಗಿ ಟ್ಯಾಂಕರ್‌ಗಳ ಮೂಲಕ ಆಮ್ಲಜನಕ ಸಾಗಾಣಿಕೆಗೆ ಇಲಾಖೆ ಮುಂದಾಗಿದೆ. ಶೀಘ್ರದಲ್ಲೇ ಮಹಾರಾಷ್ಟ್ರದಿಂದ ಖಾಲಿ ಟ್ಯಾಂಕರ್‌ಗಳೊಂದಿಗೆ ಜಾರ್ಖಂಡ್, ಆಂಧ್ರಪ್ರದೇಶ ಹಾಗೂ ಒಡಿಶಾಗೆ ಆಕ್ಸಿಜನ್ ಎಕ್ಸ್‌ಪ್ರೆಸ್ ರೈಲುಗಳು ಪ್ರಯಾಣಿಸಲಿವೆ. ಅಲ್ಲಿಂದ ಆಮ್ಲಜನಕವನ್ನು ತುಂಬಿಕೊಂಡು ರೈಲುಗಳು ಮುಂಬೈಗೆ ಮರಳಲಿವೆ. ‘ಕೋವಿಡ್ ವಿರುದ್ಧದ ಹೋರಾಟಕ್ಕೆ ಸಾಧ್ಯವಾಗುವ ಎಲ್ಲಾ ನೆರವನ್ನು ರೈಲ್ವೆ ಇಲಾಖೆ ನೀಡಲಿದೆ. ಗ್ರೀನ್ ಕಾರಿಡಾರ್ ಅನ್ನು ಬಳಸಿಕೊಂಡು ರೈಲ್ವೆ ಇಲಾಖೆಯು ಶೀಘ್ರದಲ್ಲಿ ಆಮ್ಲಜನಕವನ್ನು ಅಗತ್ಯ ರೋಗಿಗಳಿಗೆ ತಲುಪಿಸುವ ಕಾರ್ಯ ಮಾಡಲಿದೆ’ ಎಂದು ರೈಲ್ವೆ ಖಾತೆ ಸಚಿವ ಪೀಯೂಷ್ ಗೋಯಲ್ ಟ್ವೀಟ್ ಮಾಡಿದ್ದಾರೆ.

ಟ್ಯಾಂಕರ್‌ಗಳ ಮೂಲಕ ದ್ರವೀಕೃತ ವೈದ್ಯಕೀಯ ಆಮ್ಲಜನಕದ ಸಾಗಾಣಿಕೆ ನಡೆಯಲಿದೆ. ಆಮ್ಲಜನಕದ ಟ್ಯಾಂಕ್‌ಗಳನ್ನು ಹೊಂದಿರುವ ಟ್ರಕ್‌ಗಳನ್ನು ರೈಲ್ವೆ ವ್ಯಾಗನ್‌ಗಳ ಮೇಲಿಟ್ಟು ಸಾಗಿಸಲಾಗುವುದು ಎಂದು ರೈಲ್ವೆ ಇಲಾಖೆ ತಿಳಿಸಿದೆ.

ರೈಲುಗಳ ಮೂಲಕ ಟ್ಯಾಂಕರ್‌ಗಳ ಸಾಗಾಣಿಕೆಯ ಸಾಧ್ಯತೆಯನ್ನು ಪರಿಶೀಲಿಸುವಂತೆ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ಸರ್ಕಾರಗಳು ರೈಲ್ವೆ ಇಲಾಖೆಗೆ ಮನವಿ ಮಾಡಿದ್ದವು.

ನೇರಪ್ರಸಾರಕ್ಕೆ ನಿಷೇಧ ಸಂಪಾದಕರ ಕೂಟ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಉಗ್ರರು ಮತ್ತು ಭದ್ರತಾ ಸಿಬ್ಬಂದಿ ಮಧ್ಯೆ ನಡೆಯುವ ಚಕಮಕಿಯ ನೇರ ಪ್ರಸಾರ ಮಾಡುವುದನ್ನು ನಿಷೇಧಿಸಿ ಕಾಶ್ಮೀರ ಪೊಲೀಸರು ಮಾಧ್ಯಮಗಳಿಗೆ ನೀಡಿರುವ ನಿರ್ದೇಶನವನ್ನು ಹಿಂದೆಗೆದುಕೊಳ್ಳಬೇಕು’ ಎಂದು ಭಾರತೀಯ ಸಂಪಾದಕರ ಕೂಟವು ಒತ್ತಾಯಿಸಿದೆ.

‘ಚಕಮಕಿಯ ನೇರ ವರದಿಗಳಿಂದ ಹಿಂಸಾಚಾರಕ್ಕೆ ಪ್ರಚೋದನೆ ಲಭಿಸುವ ಅಥವಾ ರಾಷ್ಟ್ರವಿರೋಧಿ ಶಕ್ತಿಗಳಿಗೆ ಉತ್ತೇಜನ ಉಂಟಾಗುವ ಸಾಧ್ಯತೆ ಇದೆ ಎಂದು ಪೊಲೀಸರು ಹೇಳುತ್ತಾರೆ. ಹಿಂಸಾಚಾರವನ್ನು ನಿಯಂತ್ರಿಸುವ ಮೂಲಕ ಶಾಂತಿ ಸ್ಥಾಪನೆಯ ಪ್ರಯತ್ನವನ್ನು ಮಾಡಲಾಗುತ್ತಿದೆ ಎಂಬ ಭಾವನೆಯನ್ನು ಇಂಥ ಹೇಳಿಕೆಗಳ ಮೂಲಕ ಪೊಲೀಸರು ಮೂಡಿಸಿದ್ದಾರೆ. ಆದರೆ ವಾಸ್ತವದಲ್ಲಿ, ಹಿಂಸಾಚಾರದ ಹಿಂದಿನ ಘಟನಾವಳಿಗಳ ಬಗ್ಗೆ ಮಾಧ್ಯಮಗಳು ಪರಿಶೀಲನೆ ನಡೆಸುವುದನ್ನು ಭದ್ರತಾಪಡೆಗಳು ತಡೆಯುತ್ತಿವೆ’ ಎಂದು ಕೂಟ ಹೇಳಿದೆ.

‘ಉಗ್ರರು ಮತ್ತು ಭದ್ರತಾ ಪಡೆಗಳ ನಡುವಿನ ಚಕಮಕಿಯೂ ಸೇರಿದಂತೆ, ಸಂಘರ್ಷ ನಡೆಯುವ ಸ್ಥಳದಿಂದಲೇ ಸುದ್ದಿಯ ನೇರ ಪ್ರಸಾರ ಮಾಡುವುದು ಯಾವುದೇ ಜವಾಬ್ದಾರಿಯುತ ಮಾಧ್ಯಮದ ಅತಿ ಮುಖ್ಯ ಹೊಣೆಯಾಗಿದೆ. ಇದಕ್ಕೆ ವರದಿಗಾರರಲ್ಲಿ ಸಾಕಷ್ಟು ಧೈರ್ಯ ಹಾಗೂ ಬದ್ಧತೆಗಳು ಬೇಕಾಗುತ್ತವೆ. ಇದನ್ನು ನಿಷೇಧಿಸುವ ಬದಲು, ಭದ್ರತಾಪಡೆಗಳ ತಂತ್ರಗಾರಿಕೆ, ಯೋಜನೆಗಳನ್ನು ಬಹಿರಂಗಪಡಿಸದಿರುವುದು, ಪತ್ರಕರ್ತರ ಮಧ್ಯಪ್ರವೇಶವನ್ನು ತಡೆಯುವುದು, ಸುದ್ದಿಯ ಮೂಲಕ ವೀಕ್ಷಕರ ಭಾವನೆ ಕಲಕುವುದಕ್ಕೆ ತಡೆ ಮುಂತಾದ ವಿಚಾರದಲ್ಲಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು ಸೂಕ್ತ. ಜವಾಬ್ದಾರಿಯುತ ಸರ್ಕಾರಗಳು ಇಂಥ ಕ್ರಮಗಳನ್ನು ಅನುಸರಿಸುತ್ತಿವೆ. ಕಾಶ್ಮೀರ ಪೊಲೀಸರು ನೀಡಿರುವ ನಿರ್ದೇಶನವು ಪ್ರಜಾಪ್ರಭುತ್ವ ವಿರೋಧಿಯಾಗಿವೆ. ಆದ್ದರಿಂದ ಅದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು’ ಎಂದು ಕೂಟದ ಅಧ್ಯಕ್ಷರಾದ ಸೀಮಾ ಮುಸ್ತಫಾ, ಕಾರ್ಯದರ್ಶಿ ಸಂಜಯ್ ಕಪೂರ್ ಹಾಗೂ ಖಜಾಂಚಿ ಅನಂತನಾಥ್ ಒತ್ತಾಯಿಸಿದ್ದಾರೆ.

ಹಾಸಿಗೆ ಲಭ್ಯತೆ: ಬಿಜೆಪಿ–ಎಎಪಿ ನಡುವೆ ವಾಗ್ಯುದ್ಧ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಕೋವಿಡ್ ರೋಗಿಗಳಿಗೆ ಆಸ್ಪತ್ರೆ ಹಾಸಿಗೆ ಲಭ್ಯತೆಯ ವಿಚಾರದಲ್ಲಿ ಎಎಪಿ ಮತ್ತು ಬಿಜೆಪಿ ನಡುವೆ ಭಾನುವಾರ ವಾಕ್ಸಮರ ನಡೆದಿದೆ.

ದೆಹಲಿಯ ನಗರಪಾಲಿಕೆಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ನಗರಪಾಲಿಕೆ ಅಧೀನದ ಆಸ್ಪತ್ರೆಗಳಲ್ಲಿ 3,127 ಹಾಸಿಗೆಗಳು ಇವೆ. ಇವುಗಳ ಪೈಕಿ ಒಂದು ಹಾಸಿಗೆಯನ್ನೂ ಕೋವಿಡ್ ರೋಗಿಗಳಿಗೆ ನೀಡಿಲ್ಲ ಎಂದು ಎಎಪಿ ಆರೋಪಿಸಿದೆ. ಈ ಆರೋಪವನ್ನು ಬಿಜೆಪಿ ಅಲ್ಲಗಳೆದಿದೆ. ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ಅಗತ್ಯವಾದ ಅನುಮತಿಯನ್ನು ದೆಹಲಿ ಸರ್ಕಾರವು ನಗರಪಾಲಿಕೆಗಳಿಗೆ ನೀಡಿಲ್ಲ ಎಂದು ಬಿಜೆಪಿ ಆಪಾದಿಸಿದೆ.

ಪ್ರತಿಯೊಬ್ಬ ನಾಗರಿಕನೂ ಕೋವಿಡ್ ರೋಗಿಗಳಿಗೆ ನೆರವಾಗಲು ಯತ್ನಿಸುತ್ತಿದ್ದರೆ ಬಿಜೆಪಿ ಆಳ್ವಿಕೆಯ ನಗರಪಾಲಿಕೆಗಳು ರಾಜಕಾರಣ ಮಾಡುವುದರಲ್ಲಿಯೇ ವ್ಯಸ್ತವಾಗಿವೆ ಎಂದು ಎಎಪಿ ಮುಖಂಡ ದುರ್ಗೇಶ್ ಪಾಠಕ್ ಹೇಳಿದ್ದಾರೆ. ನಗರಪಾಲಿಕೆ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ನೀಡಲು ದೆಹಲಿ ಬಿಜೆಪಿ ಮುಖ್ಯಸ್ಥ ಆದೇಶ್ ಗುಪ್ತಾ ಮತ್ತು ಮೇಯರ್‌ಗಳು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈ ಆರೋಪಕ್ಕೆ ಬಿಜೆಪಿ ತಿರುಗೇಟು ನೀಡಿದೆ. ನಗರಪಾಲಿಕೆ ಆಸ್ಪತ್ರೆಗಳಲ್ಲಿ ಕೋವಿಡ್‌ಗೆ ಚಿಕಿತ್ಸೆ ನೀಡಲು ದೆಹಲಿ ಸರ್ಕಾರವು ಏಕೆ ಅನುಮತಿ ನೀಡಿಲ್ಲ ಎಂದು ಬಿಜೆಪಿ ವಕ್ತಾರ ಪ್ರವೀಣ್ ಶಂಕರ್ ಕಪೂರ್ ಪ್ರಶ್ನಿಸಿದ್ದಾರೆ. ದೆಹಲಿ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರವು ಅನುಮತಿ ನೀಡಿದರೆ ಮಾತ್ರ ನಗರಪಾಲಿಕೆ ಆಸ್ಪತ್ರೆಗಳು ಕೋವಿಡ್‌ಗೆ ಚಿಕಿತ್ಸೆ ನೀಡಲು ಸಾಧ್ಯ ಎಂಬುದನ್ನು ಆರೋಪ ಹೊರಿಸುವುದಕ್ಕೆ ಮುನ್ನ ಅರಿತುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

ರೈಲ್ವೆ ನೆರವು: ರೈಲ್ವೆ ಇಲಾಖೆಯು ಪ್ರತ್ಯೇಕವಾಸಕ್ಕಾಗಿ 50 ರೈಲು ಬೋಗಿಗಳನ್ನು ದೆಹಲಿಯ ಶಾಕುರ್ ಬಸ್ತಿ ರೈಲು ನಿಲ್ದಾಣದಲ್ಲಿ ಒದಗಿಸಿದೆ. ಪ್ರತಿ ಬೋಗಿಯಲ್ಲಿ ಎರಡು ಆಮ್ಲಜನಕ ಸಿಲಿಂಡರ್‌ಗಳೂ ಇವೆ. ಆನಂದ್ ವಿಹಾರ್ ನಿಲ್ದಾಣದಲ್ಲಿ ಇಂತಹ 25 ಬೋಗಿಗಳನ್ನು ಸೋಮವಾರದ ಒಳಗೆ ಒದಗಿಸಲಾಗುವುದು ಎಂದು ರೈಲ್ವೆ ಹೇಳಿದೆ. ಐದು ಸಾವಿರ ಹಾಸಿಗೆಗಳನ್ನು ಒದಗಿಸುವಂತೆ ದೆಹಲಿ ಸರ್ಕಾರ ಮಾಡಿದ ಮನವಿಗೆ ರೈಲ್ವೆಯು ಹೀಗೆ ಸ್ಪಂದಿಸಿದೆ.

ಅಹಮದಾಬಾದ್‌ನ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ಆರೋಗ್ಯ ಸ್ಥಿರವಾಗಿರುವ ರೋಗಿಯನ್ನು ಬೇರೆಡೆಗೆ ಸಾಗಿಸಿ, ಇತರ ರೋಗಿಗಳಿಗೆ ಹಾಸಿಗೆ ವ್ಯವಸ್ಥೆ ಮಾಡಲಾಗುತ್ತಿದೆ ಪಿಟಿಐ ಚಿತ್ರ

> **ಪ್ರಧಾನಿ ಚುನಾವಣಾ ನಿರ್ವಹಣೆ ಕೈಬಿಟ್ಟು ಕೊರೊನಾ ನಿರ್ವಹಣೆಗೆ ಗಮನ ಹರಿಸಬೇಕು. ದಯವಿಟ್ಟು ಮೊದಲು ಜನರ ಜೀವ ರಕ್ಷಿಸಿ**
>
> **ರಾಘವ್ ಛಡ್ಡಾ**, ಎಎಪಿ ವಕ್ತಾರ

ಆಮ್ಲಜನಕ ಪೂರೈಕೆಯಲ್ಲಿ ತಾರತಮ್ಯ: ಕೇಜ್ರಿವಾಲ್

ದೆಹಲಿಯಲ್ಲಿ ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆ ಇದೆ. ದೆಹಲಿಗೆ ಮೀಸಲಾಗಿರುವ ಆಮ್ಲಜನಕದ ಕೋಟಾವನ್ನು ಬೇರೆ ರಾಜ್ಯಗಳಿಗೆ ವರ್ಗಾಯಿಸಲಾಗುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ. ಕೋವಿಡ್ ರೋಗಿಗಳಿಗೆ ಲಭ್ಯವಿರುವ ಹಾಸಿಗೆ ಸಂಖ್ಯೆ ಹೆಚ್ಚಳ ಮತ್ತು ಆಮ್ಲಜನಕ ಪೂರೈಕೆಯನ್ನು ತುರ್ತಾಗಿ ಹೆಚ್ಚಿಸಬೇಕು ಎಂದು ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದ ಕೆಲವೇ ತಾಸುಗಳ ಬಳಿಕ ಅವರು ಈ ಆರೋಪ ಮಾಡಿದ್ದಾರೆ.

‘ದೆಹಲಿಯಲ್ಲಿ ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆ ಇದೆ. ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರವಾಗಿ ಏರುತ್ತಿರುವುದರಿಂದ ದೆಹಲಿಗೆ ಸಾಮಾನ್ಯ ಪೂರೈಕೆ ಸಾಲದು. ಇಂತಹ ಸಂದರ್ಭದಲ್ಲಿ ಪೂರೈಕೆ ಹೆಚ್ಚಿಸುವ ಬದಲು, ರಾಜ್ಯದ ಕೋಟಾವನ್ನು ಬೇರೆಡೆಗೆ ವರ್ಗಾಯಿಸಲಾಗಿದೆ. ವೈದ್ಯಕೀಯ ಆಮ್ಲಜನಕವು ದೆಹಲಿಯ ತುರ್ತು ಅಗತ್ಯವಾಗಿದೆ’ ಎಂದು ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

ತಮಿಳುನಾಡು, ಬಿಹಾರದಲ್ಲಿ ರಾತ್ರಿ ಕರ್ಫ್ಯೂ

ಚೆನ್ನೈ/ಪಟ್ನಾ: 12ನೇ ತರಗತಿಯ ಅಂತಿಮ ಪರೀಕ್ಷೆಗಳನ್ನು ತಮಿಳುನಾಡು ಸರ್ಕಾರ ಮುಂದೂಡಿದೆ. ಭಾನುವಾರಗಳಂದು ಸಂಪೂರ್ಣ ಲಾಕ್‌ಡೌನ್ ಹೇರಲಾಗಿದೆ. ಮಂಗಳವಾರದಿಂದ ರಾತ್ರಿ ಕರ್ಫ್ಯೂ (ರಾತ್ರಿ 10ರಿಂದ ಬೆಳಿಗ್ಗೆ 4) ಜಾರಿಗೆ ಬರಲಿದೆ. ಮುಖ್ಯಮಂತ್ರಿ ಕೆ.ಪಳನಿಸ್ವಾಮಿ ಅವರು ಉನ್ನತ ಮಟ್ಟದ ಸಭೆಯ ಬಳಿಕ ಈ ತೀರ್ಮಾನಗಳನ್ನು ಪ್ರಕಟಿಸಿದ್ದಾರೆ.

ಬಿಹಾರದಲ್ಲಿ ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಹೇರಲು ಸರ್ಕಾರ ನಿರ್ಧರಿಸಿದೆ. ಶಾಲೆ, ಕಾಲೇಜುಗಳನ್ನು ಮೇ 15ರವರೆಗೆ ತೆರೆಯುವಂತಿಲ್ಲ ಎಂದು ಸರ್ಕಾರ ಹೇಳಿದೆ. ಸರ್ಕಾರಿ ಕಚೇರಿಗಳು ಸಂಜೆ 5ಕ್ಕೆ ಮುಚ್ಚಲಿದ್ದು, ಮೂರನೇ ಒಂದರಷ್ಟು ಸಿಬ್ಬಂದಿ ಮಾತ್ರ ಕೆಲಸ ಮಾಡಲಿದ್ದಾರೆ. ಅಂಗಡಿಗಳು ಮತ್ತು ಇತರ ವ್ಯಾಪಾರ ಸಂಸ್ಥೆಗಳನ್ನು ಸಂಜೆ 6ಕ್ಕೆ ಮುಚ್ಚಲು ಸೂಚಿಸಲಾಗಿದೆ.

ಗುಜರಾತ್: ಹಾಸಿಗೆಗಳು ಭರ್ತಿ

ಅಹಮದಾಬಾದ್: ಕೋವಿಡ್‌ಗಾಗಿ ಮೀಸಲಿರಿಸಿರುವ ಆಸ್ಪತ್ರೆಗಳ ಹಾಸಿಗೆಗಳು ಭರ್ತಿಯಾಗಿವೆ ಎಂದು ಗುಜರಾತ್ ಸರ್ಕಾರ ಹೇಳಿದೆ. ರಾಜ್ಯದಲ್ಲಿ ಪ್ರತಿ ದಿನ 9 ಸಾವಿರಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಇದನ್ನು ನಿಭಾಯಿಸಲು ಈಗ ಇರುವ ಹಾಸಿಗೆ ಸಾಮರ್ಥ್ಯ, ಆಮ್ಲಜನಕ ಮತ್ತು ಇತರ ಸೌಲಭ್ಯಗಳು ಸಾಲುವುದಿಲ್ಲ ಎಂದು ಆರೋಗ್ಯ ಸಚಿವ ನಿತಿನ್ ಪಟೇಲ್ ಹೇಳಿದ್ದಾರೆ. ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿಯೂ ಕೋವಿಡ್ ಪಿಡುಗು ತೀವ್ರವಾಗಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ 71 ಸಾವಿರ ಹಾಸಿಗೆಗಳು ಲಭ್ಯ ಇವೆ ಎಂದು ಹೈಕೋರ್ಟ್‌ಗೆ ಸರ್ಕಾರ ಕಳೆದ ವಾರ ಹೇಳಿತ್ತು. ಕೋವಿಡ್ ರೋಗಿಗಳು ಆಸ್ಪತ್ರೆಗೆ ದಾಖಲಾಗುವುದು ಸಾಧ್ಯವಾಗುತ್ತಿಲ್ಲ ಎಂಬುದನ್ನು ಗಮನಿಸಿದ್ದ ಹೈಕೋರ್ಟ್, ಸ್ವಪ್ರೇರಣೆಯಿಂದ ಪ್ರಕರಣವನ್ನು ಕೈಗೆತ್ತಿಕೊಂಡಿತ್ತು. ಇಷ್ಟೊಂದು ಹಾಸಿಗೆಗಳು ಇವೆ ಎಂದಾದರೆ ಜನರು ಏಕೆ ಆಸ್ಪತ್ರೆ ಹೊರಗೆ ಕಾಯುತ್ತಿದ್ದಾರೆ ಎಂದು ಪ್ರಶ್ನಿಸಿತ್ತು.

24 ಗಂಟೆ: 20 ಸಾವಿರದತ್ತ ಕೋವಿಡ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ವೇಗವಾಗಿ ಏರಿಕೆ ಕಾಣಲಾರಂಭಿಸಿದ್ದು, ಭಾನುವಾರ 19,067 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. 23 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ ತಲುಪಿದೆ.

ಸೋಂಕು ದೃಢ ಪ್ರಮಾಣ ಶೇ 13.09ಕ್ಕೆ ಏರಿಕೆಯಾಗಿದೆ. ಈ ತಿಂಗಳು 17 ದಿನಗಳಲ್ಲಿಯೇ 1.64 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 11.61 ಲಕ್ಷ ದಾಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 12,793 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (777), ಕಲಬುರ್ಗಿ (671), ತುಮಕೂರು (494), ಬೀದರ್ (469), ಹಾಸನ (348), ಮಂಡ್ಯ (338), ದಕ್ಷಿಣ ಕನ್ನಡ (272), ಧಾರವಾಡ (265) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 60 ಮಂದಿ ಸೇರಿದಂತೆ ರಾಜ್ಯದಲ್ಲಿ 81 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರು ಮತ್ತು ಧಾರವಾಡದಲ್ಲಿ ತಲಾ ಮೂರು ಮಂದಿ, ಯಾದಗಿರಿ, ವಿಜಯಪುರ, ಉತ್ತರ ಕನ್ನಡ, ಕೊಪ್ಪಳ, ಬಳ್ಳಾರಿ ಜಿಲ್ಲೆಯಲ್ಲಿ ತಲಾ ಇಬ್ಬರು, ಬೆಳಗಾವಿ, ಬೀದರ್, ಚಾಮರಾಜನಗರ, ಮಂಡ್ಯ ಮತ್ತು ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇವರಲ್ಲಿ ಬಹುತೇಕರು 60 ವರ್ಷ ಮೇಲ್ಪಟ್ಟವರಾಗಿದ್ದು, ಉಸಿರಾಟದ ಸಮಸ್ಯೆಯನ್ನು ಎದುರಿಸಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 13,351ಕ್ಕೆ ತಲುಪಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಕೋವಿಡ್ ವೇಗವಾಗಿ ವ್ಯಾಪಿಸಿಕೊಳ್ಳುತ್ತಿರುವ ಪರಿಣಾಮ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ಒಂದು ದಿನದ ಅವಧಿಯಲ್ಲಿ 1.45 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.33 ಲಕ್ಷ ದಾಟಿದೆ. ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಹೆಚ್ಚಳವಾಗಿದೆ. ಸದ್ಯ 620 ಮಂದಿ ಐಸಿಯುನಲ್ಲಿದ್ದಾರೆ. ಕೋವಿಡ್ ಪೀಡಿತರಲ್ಲಿ 4,603 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 10.14 ಲಕ್ಷಕ್ಕೆ ಏರಿಕೆಯಾಗಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	14.16 ಕೋಟಿ	1.50 ಕೋಟಿ
ಸಕ್ರಿಯ ಪ್ರಕರಣ	1.83 ಕೋಟಿ	19.23 ಲಕ್ಷ
ಗುಣಮುಖ	12.01 ಕೋಟಿ	1.29 ಕೋಟಿ
ಸಾವು	30.27 ಲಕ್ಷ	1.785 ಲಕ್ಷ

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.84 ಲಕ್ಷ	2.58 ಲಕ್ಷ
ಗುಣಮುಖ	6.15 ಲಕ್ಷ	1.27 ಲಕ್ಷ
ಸಾವು	11,596	1,394

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಫ್ರಾನ್ಸ್	ಅಮೆರಿಕ	ಬ್ರೆಜಿಲ್
35,861	63,625	65,755

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	60,473
ತಮಿಳುನಾಡು	13,113
ದೆಹಲಿ	12,121

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರೆಜಿಲ್
68.70	10.78	11.83

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	38.39
ಕೇರಳ	12.39
ತಮಿಳುನಾಡು	9.91

ಕೋವಿಡ್: ಇನ್ನಷ್ಟು ಕಠಿಣ ನಿರ್ಬಂಧ

ಒಂದನೇ ಪುಟದಿಂದ

ರಾಜ್ಯದಲ್ಲಿನ ಸದ್ಯದ ಕೋವಿಡ್ ಪರಿಸ್ಥಿತಿ ಅವಲೋಕಿಸಲು ಗೃಹ ಸಚಿವ ಬಸರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ ಅವರು ಹಿರಿಯ ಅಧಿಕಾರಿಗಳ ಜತೆ ಭಾನುವಾರ ಚರ್ಚೆ ನಡೆಸಿದರು. ಸೋಂಕಿತರಿಗೆ ಚಿಕಿತ್ಸಾ ಸೌಲಭ್ಯ, ಮೃತರ ಅಂತ್ಯಸಂಸ್ಕಾರಕ್ಕೆ ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಯಿತು ಎಂದು ಸುಧಾಕರ್ ತಿಳಿಸಿದರು.

‘ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದರಿಂದ ಕೆಲವು ಸಮಸ್ಯೆಗಳು ಎದುರಾಗುತ್ತಿವೆ. ಆದರೆ, ಆಮ್ಲಜನಕದ ಕೊರತೆ ಇಲ್ಲ. ಎಷ್ಟು ಐಸಿಯುಗಳು ಇವೆಯೋ ಅದಕ್ಕಿಂತ ಹೆಚ್ಚು ಪ್ರಕರಣಗಳು ಬಂದಾಗ ಐಸಿಯು ಕೊರತೆ ಆಗಿದೆ. ಪ್ರತಿನಿತ್ಯ ಐಸಿಯುಗಳ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಯತ್ನ ಮಾಡುತ್ತಿದ್ದೇವೆ’ ಎಂದೂ ಹೇಳಿದರು.

‘ಕೋವಿಡ್ ರೋಗಿಗಳಿಗೆ ಶೇ 50 ಹಾಸಿಗೆ ಮೀಸಲಿಡುವ ಆದೇಶವನ್ನು ಯಾರೆಲ್ಲ ಪಾಲಿಸಿದ್ದಾರೆ ಎಂದು ಪರಿಶೀಲಿಸಲಾಗುತ್ತಿದೆ. ಮಣಿಪಾಲ ಆಸ್ಪತ್ರೆಯವರು ಶೇ 50 ಹಾಸಿಗೆ ನೀಡಿಲ್ಲ. ಹೀಗಾಗಿ, ಆ ಆಸ್ಪತ್ರೆಯವರಿಗೆ ತೀಕ್ಷ್ಣವಾಗಿ ಸೂಚನೆ ನೀಡಲಾಗಿದೆ. ಖಾಸಗಿ ಆಸ್ಪತ್ರೆಗಳು ಹಾಸಿಗೆ ನೀಡುವ ವಿಚಾರದಲ್ಲಿ ನನಗೆ ಸಮಾಧಾನ ಆಗಿಲ್ಲ. ಕೆಲವು ದೊಡ್ಡ ಆಸ್ಪತ್ರೆಗಳು ಕೂಡ ಹಾಸಿಗೆ ನೀಡಿಲ್ಲ. ಖಾಸಗಿ ಆಸ್ಪತ್ರೆಯವರು ಸರ್ಕಾರದ ಆದೇಶ ಪಾಲಿಸದಿದ್ದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ರಾಜ್ಯದಲ್ಲಿ ಆಮ್ಲಜನಕ ಲಭ್ಯತೆಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ವಲಯವಾರು ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಈಗ ಇರುವ 800 ಟನ್ ಆಮ್ಲಜನಕ ಜೊತೆಗೆ 300 ಟನ್‌ಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಅಗತ್ಯವಿರುವಷ್ಟು ಆಮ್ಲಜನಕ ನೀಡಲಾಗುವುದು ಎಂದು ಕೈಗಾರಿಕಾ ವಲಯದವರು ಕೂಡ ಹೇಳಿದ್ದಾರೆ’ ಎಂದು ವಿವರಿಸಿದರು.

ರೆಮ್‌ಡಿಸಿವಿರ್ ಅಕ್ರಮ ಮಾರಾಟ

ಒಂದನೇ ಪುಟದಿಂದ

‘ಕೊರೊನಾ ಸೋಂಕಿತರ ಚಿಕಿತ್ಸೆಗೆ ಅಗತ್ಯವಾದ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಮಳಿಗೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದರು. ನಿಗದಿತ ದರಕ್ಕಿಂತ ಪ್ರತಿ ಚುಚ್ಚುಮದ್ದಿಗೆ ₹ 10,500 ಪಡೆದು ಕಾಳಸಂತೆಯಲ್ಲಿ ಮಾರುತ್ತಿದ್ದರು’ ಎಂದು ತಿಳಿಸಿದರು. ‘ಮಡಿವಾಳ ಠಾಣೆ ಬಳಿ ಆರೋಪಿ ಸುಹೇಲ್, ಚುಚ್ಚುಮದ್ದು ಮಾರಾಟ ಮಾಡುತ್ತಿದ್ದ ವೇಳೆಯಲ್ಲೇ ಬಂಧಿಸಲಾಗಿದೆ. ಮೂವರೂ ಆರೋಪಿಗಳು ಚುಚ್ಚುಮದ್ದುಗಳನ್ನು ಎಲ್ಲಿಂದ ಖರೀದಿ ಮಾಡಿದ್ದರು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದರು.

‘ರೆಮ್‌ಡಿಸಿವಿರ್ ಔಷಧಿ ಹಾಗೂ ಚುಚ್ಚುಮದ್ದುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಹೀಗಾಗಿ, ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದೂ ಹೇಳಿದರು.

ಮಾಸ್ಕ್ ಧಾರಣೆ ರದ್ದು ಮಾಡಿದ ಇಸ್ರೇಲ್

ಜೆರುಸಲೇಮ್ (ಎಪಿ): ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂಬ ನಿಯಮವನ್ನು ಇಸ್ರೇಲ್ ರದ್ದು ಮಾಡಿದೆ. ಅಲ್ಲದೇ, ದೇಶದಾದ್ಯಂತ ಶಾಲೆಗಳನ್ನು ಪುನರಾರಂಭಿಸಿದೆ.

ವ್ಯಾಪಕ ಲಸಿಕೆ ಕಾರ್ಯಕ್ರಮವನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಕೋವಿಡ್–19 ಪ್ರಸರಣ ನಿಯಂತ್ರಣಕ್ಕಾಗಿ ಹೇರಲಾಗಿದ್ದ ಹಲವಾರು ನಿರ್ಬಂಧಗಳನ್ನು ಇಸ್ರೇಲ್ ಸಡಿಲಿಸಿದೆ.

ಒಳಾಂಗಣ ಹಾಗೂ ಭಾರಿ ಸಂಖ್ಯೆಯಲ್ಲಿ ಜನರು ಸೇರುವ ಸ್ಥಳಗಳಲ್ಲಿ ಮಾಸ್ಕ್ ಧರಿಸಬೇಕು ಎಂಬ ನಿಯಮ ಈಗಲೂ ಜಾರಿಯಲ್ಲಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರ ಕೈಚೆಲ್ಲಿ ಕುಳಿತಿದೆ: ಡಿಕೆಶಿ ವಾಗ್ದಾಳಿ

ಬೆಂಗಳೂರು: ‘ಜನ ಇದ್ದರೆ ಜೀವನ, ಜನರಿದ್ದರೆ ರಾಜ್ಯ, ಆರ್ಥಿಕತೆ. ಮೊದಲು ಜನರನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು. ಆದರೆ, ಸರ್ಕಾರ ಕೈಚೆಲ್ಲಿ ಕುಳಿತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಕೋವಿಡ್ ನಿಭಾಯಿಸುವ ವಿಷಯದಲ್ಲಿ ಜನರ ಜೀವದ ಜೊತೆ ಕೇಂದ್ರ ರಾಜ್ಯ ಸರ್ಕಾರ ಚೆಲ್ಲಾಟವಾಡುತ್ತಿವೆ. ಕೈಮೀರಿ ಹೋಗಿದೆ ಎಂದು ಸಚಿವರು ಹೇಳುತ್ತಿದ್ದಾರೆ. ಬದುಕುತ್ತೇವೊ, ಇಲ್ವೋ ಎಂಬ ಆತಂಕದಲ್ಲಿ ಜನರಿದ್ದಾರೆ. ಸರ್ಕಾರ ಇದೆಯೋ, ಇಲ್ಲವೋ ಗೊತ್ತಾಗುತ್ತಿಲ್ಲ’ ಎಂದರು.

‘ಸೋಮವಾರ ನಡೆಯಲಿರುವ ಬೆಂಗಳೂರು ಜನಪ್ರತಿನಿಧಿಗಳ ಸಭೆಯಲ್ಲಿ ನಮ್ಮವರೂ (ಕಾಂಗ್ರೆಸ್) ಭಾಗವಹಿಸಿ, ಸಲಹೆ ಕೊಡುತ್ತಾರೆ. ಲಾಕ್‌ಡೌನ್‌ಗೆ ನಮ್ಮ ವಿರೋಧವಿದೆ. ಲಾಕ್‌ಡೌನ್‌ನಿಂದ ಏನು ಪ್ರಯೋಜನ. ರಾತ್ರಿ ಮಾಡಿದರೆ ಮಾತ್ರ ಉಪಯೋಗವಾಗುತ್ತದೆ. ಹಗಲು ಹೊತ್ತು ಕೊರೊನಾ ಬರುವುದಿಲ್ಲವೇ’ ಎಂದು ಪ್ರಶ್ನಿಸಿದರು.

‘ಅತಿ ಹೆಚ್ಚು ಆಸ್ಪತ್ರೆ ಮತ್ತು ಇಡೀ ದೇಶದಲ್ಲೇ ತಜ್ಞ ವೈದ್ಯರು ನಮ್ಮಲ್ಲಿದ್ದಾರೆ. ಆದರೂ ಸರ್ಕಾರಕ್ಕೆ ಕೋವಿಡ್ ನಿರ್ವಹಿಸಲು ಆಗುತ್ತಿಲ್ಲ. ರೆಮ್‌ಡಿಸಿವರ್ ಇಂಜೆಕ್ಷನ್ ಸಿಗುತ್ತಿಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಆಸ್ಪತ್ರೆಗಳಿಗೆ ಎಷ್ಟು ಅಧಿಕಾರಿಗಳು ಭೇಟಿ ಮಾಡಿದ್ದಾರೆ. ಸಚಿವರು ರಾಜ್ಯದ ಎಷ್ಟು ಕಡೆ ಭೇಟಿ ನೀಡಿದ್ದಾರೆ’ ಎಂದು ಪ್ರಶ್ನಿಸಿದರು.

ಸಂಸದ ಡಿ.ಕೆ.ಸುರೇಶ್ ಮಾತನಾಡಿ, ‘ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರ ಕೊಡಬೇಕಾದ ಬಾಕಿ ಉಳಿಸಿಕೊಂಡಿದೆ. ಕೊರೊನಾ ಸಮಯದಲ್ಲಿ ಹಾಸಿಗೆ ಕೊಟ್ಟವರಿಗೆ ಬಿಲ್ ಕೊಟ್ಟಿಲ್ಲ. ಚಿಕಿತ್ಸೆ ನೀಡಿದವರಿಗೆ ಹಣ ಕೊಡದಿದ್ದರೆ ಹೇಗೆ? ಇದು ಉದ್ದೇಶಪೂರ್ವಕವಾಗಿ ಮಾಡಿರುವಂಥದ್ದು. ಈಗ ಹಾಸಿಗೆ ಬಿಟ್ಟುಕೊಡಿ ಅಂದರೆ ಯಾರು ಸಹಾಯ ಮಾಡುತ್ತಾರೆ. ಖಾಸಗಿ ಆಸ್ಪತ್ರೆಗೆ ಹಣ ಸಂದಾಯ ಆಗದಿರುವುದರಿಂದ ಸಮಸ್ಯೆ ಆಗಿದೆ’ ಎಂದರು.

ಕೆಲ ಶಾಸಕರು, ಮುಖಂಡರಿಗೆ ಕೋವಿಡ್

ರಾಮನಗರ: ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕ ಎ. ಮಂಜುನಾಥ ಅವರಿಗೆ ಕೋವಿಡ್ ಸೋಂಕು ದೃಢಪಟ್ಟಿದೆ.

ಅವರಿಗೆ ಸೋಂಕಿನ ಯಾವುದೇ ಲಕ್ಷಣಗಳು ಇರಲಿಲ್ಲ. ಹೈದರಾಬಾದ್‌ಗೆ ತೆರಳುವ ಮುನ್ನ ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಶನಿವಾರ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದರು. ವರದಿ ಪಾಸಿಟಿವ್ ಆಗಿದ್ದು, ಸದ್ಯ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಮಂಗಳೂರು ವರದಿ: ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಶಾಸಕ ಡಿ.ಎಸ್. ಸುರೇಶ್ ಹಾಗೂ ಕಾಂಗ್ರೆಸ್ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಕೆ. ಹರೀಶ್‌ಕುಮಾರ್ ಅವರಿಗೆ ಭಾನುವಾರ ಕೋವಿಡ್–19 ದೃಢಪಟ್ಟಿದೆ.

ಹಲವು ‘ಮೊದಲು’ಗಳ ಮೈಲುಗಲ್ಲು ಸ್ಥಾಪಿಸಿದ ಕರ್ನಾಟಕದ ಕ್ರೀಡಾಪಟು

ಹಾಕಿ ಅಂಪೈರಿಂಗ್‌ನಲ್ಲಿ ‘ಅನುಪಮ’ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಕಿ ನಾಡು ಕೊಡಗಿನಲ್ಲಿ ಜನಿಸಿ ಅಲ್ಲಿನ ಕ್ರೀಡಾಶಾಲೆಯಲ್ಲಿ ಆಡಿ ಬೆಳೆದ ಅನುಪಮಾ ಪುಚ್ಚಿಮಂಡ ಅವರು ಅಂತರರಾಷ್ಟ್ರೀಯ ಮಟ್ಟದ ಹಾಕಿ ಅಂಗಣದಲ್ಲಿ ಮಾಡಿದ ಸಾಧನೆಗಳು ವಿಶಿಷ್ಟ. ಮಹಿಳಾ ಅಂಪೈರಿಂಗ್ ಕ್ಷೇತ್ರದಲ್ಲಿ ಹಲವು ಮೊದಲುಗಳಿಗೆ ಕಾರಣರಾದ ಅನುಪಮಾ ಅವರು ಇಲ್ಲವಾಗುವುದರ ಮೂಲಕ ಭಾರತ ಮಹಿಳಾ ಹಾಕಿಯ ನಕ್ಷತ್ರವೊಂದು ಮರೆಯಾದಂತಾಗಿದೆ.

ಕಾಲೇಜು ದಿನಗಳಲ್ಲಿ ಹಾಕಿ ಜೊತೆಯಲ್ಲಿ ಎನ್‌ಸಿಸಿಯಲ್ಲೂ ಹೆಸರು ಮಾಡಿದ ಅನುಪಮಾ, ಜೂನಿಯರ್ ಅಂಡರ್ ಆಫೀಸರ್ ಆಗಿ ದೆಹಲಿಯಲ್ಲಿ ಎಸ್‌ಎಸ್‌ಬಿ ಶಿಬಿರದಲ್ಲಿ ಪಾಲ್ಗೊಂಡಿದ್ದರು. 2002–03ರ ಶೈಕ್ಷಣಿಕ ವರ್ಷದಲ್ಲಿ ಉತ್ತಮ ಆಲ್‌ರೌಂಡರ್ ಎಂದೆನಿಸಿಕೊಂಡಿದ್ದರು.

ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಮಂಗಳೂರು ವಿಶ್ವವಿದ್ಯಾಲಯವನ್ನು ಸತತ ಎರಡು ವರ್ಷ ಪ್ರತಿನಿಧಿಸಿದ್ದರು. ಸಬ್ ಜೂನಿಯರ್ ಮತ್ತು ಸೀನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದಾರೆ. ಅಂಪೈರಿಂಗ್ ಕ್ಷೇತ್ರಕ್ಕೆ ಕಾಲಿರಿಸಿದ ನಂತರ ಅನೇಕ ಮೈಲುಗಲ್ಲುಗಳನ್ನು ಸ್ಥಾಪಿಸಿದ್ದಾರೆ.

88 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ ಭಾರತದ ಮೊದಲ ಮಹಿಳಾ ಅಂಪೈರ್, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅಂಪೈರಿಂಗ್ ಮಾಡಿದ ಕರ್ನಾಟಕದ ಮೊದಲ ಮಹಿಳಾ ಅಂಪೈರ್, ಜೂನಿಯರ್ ಹಾಕಿ ವಿಶ್ವಕಪ್ ಮತ್ತು ಮೂರು ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪಾಲ್ಗೊಂಡ ಭಾರತದ ಮೊದಲ ಮಹಿಳಾ ಅಂಪೈರ್ ಮುಂತಾದ ದಾಖಲೆ ಅವರ ಹೆಸರಿನಲ್ಲಿದೆ. ಅಂಪೈರ್‌ಗಳ ಅನೇಕ ಅಂತರರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ಪಾಲ್ಗೊಂಡಿದ್ದರು.

2004ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಜೂನಿಯರ್ ಏಷ್ಯಾ ಕಪ್, 2005ರಲ್ಲಿ ಚಿಲಿಯಲ್ಲಿ ನಡೆದ ಜೂನಿಯರ್ ವಿಶ್ವಕಪ್, 2006ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್, 2008ರಲ್ಲಿ ಮಲೇಷ್ಯಾದಲ್ಲಿ ನಡೆದ ಜೂನಿಯರ್ ಏಷ್ಯಾಕಪ್, 2009ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಯೂತ್ ಒಲಿಂಪಿಕ್ಸ್‌ನ ಹಾಕಿ, 2009ರಲ್ಲಿ ಥಾಯ್ಲೆಂಡ್‌ನಲ್ಲಿ ನಡೆದ ಏಷ್ಯಾಕಪ್, 2010ರಲ್ಲಿ ಇಲ್ಲೇ ನಡೆದ ಏಷ್ಯನ್ ಗೇಮ್ಸ್ ಅರ್ಹತಾ ಸುತ್ತಿನ ಟೂರ್ನಿ, 2010ರಲ್ಲಿ ನವದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್; ಚೀನಾದಲ್ಲಿ ನಡೆದ ಏಷ್ಯನ್ ಗೇಮ್ಸ್, 2013ರಲ್ಲಿ ನವದೆಹಲಿಯಲ್ಲಿ ನಡೆದ ವಿಶ್ವ ಲೀಗ್ ಎರಡನೇ ಸುತ್ತಿನ ಪಂದ್ಯಗಳು; ಮಲೇಷ್ಯಾದಲ್ಲಿ ನಡೆದ ಏಷ್ಯಾಕಪ್ ಅವರು ಅಂಪೈರಿಂಗ್ ಮಾಡಿದ ಪ್ರಮುಖ ಟೂರ್ನಿಗಳು.

> **ಪ್ರಮುಖ ಟೂರ್ನಿಗಳಲ್ಲಿ ಅಂಪೈರಿಂಗ್ ಮಾಡಿದ ಮೊದಲ ಘಟ್ಟದ ಮಹಿಳೆಯರಲ್ಲಿ ಅನುಪಮಾ ಒಬ್ಬರು. ಅವರು ಇಲ್ಲವಾದ ವಿಷಯ ತಿಳಿದು ಅತೀವ ಬೇಸರ ಆಗಿದೆ.**
>
> **ಗ್ಯಾನೇಂದ್ರೋ ನಿಂಗೊಂಬಮ್**, ಹಾಕಿ ಇಂಡಿಯಾ ಅಧ್ಯಕ್ಷ

ಅನುಪಮಾ ಪುಚ್ಚಿಮಂಡ ಇನ್ನಿಲ್ಲ

ಬೆಂಗಳೂರು: ಮಹಿಳಾ ಹಾಕಿ ಅಂಪೈರ್ ಅನುಪಮಾ ಪುಚ್ಚಿಮಂಡ (40) ಭಾನುವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಕೋವಿಡ್ ಸೋಂಕಿಗೆ ಒಳಗಾಗಿದ್ದರು ಎಂದು ಹಾಕಿ ಇಂಡಿಯಾ ತಿಳಿಸಿದೆ. 1980ರ ಜುಲೈ 8ರಂದು ಕೊಡಗಿನಲ್ಲಿ ಜನಿಸಿದ ಅನುಪಮಾ ಅವರ ತಂದೆ ಪುಚ್ಚಿಮಂಡ ಶಿವಪ್ಪ, ತಾಯಿ ಪುಚ್ಚಿಮಂಡ ಶಾಂತಿ. ಪತಿ ಮುಂಡಂಡ ಮಂದಣ್ಣ. ವಿರಾಜಪೇಟೆಯ ಕಾವೇರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣದ ನಂತರ ಕೊಡಗಿನ ಕ್ರೀಡಾಶಾಲೆಗೆ ಪ್ರವೇಶ. ಭಾರತ ಕ್ರೀಡಾ ಪ್ರಾಧಿಕಾರದ ಮಡಿಕೇರಿ ಜೂನಿಯರ್ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ, ವಿರಾಜಪೇಟೆಯ ಕಾವೇರಿ ಕಾಲೇಜಿನಲ್ಲಿ ಪಿಯುಸಿ ಮಾಡಿದ್ದರು. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪದವಿ ಪೂರೈಸಿದ ಅವರು ಬೆಂಗಳೂರಿನ ಶೇಷಾದ್ರಿಪುರ ಕಾನೂನು ಕಾಲೇಜಿನಲ್ಲಿ ಎಲ್‌ಎಲ್‌ಬಿ ಓದಿದ್ದರು.

ವಿರಾಟ್ ಕೊಹ್ಲಿ ಬಳಗಕ್ಕೆ ಹ್ಯಾಟ್ರಿಕ್ ಜಯ; ಗ್ಲೆನ್ ಮ್ಯಾಕ್ಸ್‌ವೆಲ್ ಅರ್ಧಶತಕದ ರಂಗು

ಎಬಿಡಿ ಅಬ್ಬರಕ್ಕೆ ಕೋಲ್ಕತ್ತ ತತ್ತರ

ಚೆನ್ನೈ (ಪಿಟಿಐ): 'ಮಿಸ್ಟರ್ 360 ಡಿಗ್ರಿ' ಬ್ಯಾಟ್ಸ್‌ಮನ್ ಎಬಿ ಡಿವಿಲಿಯರ್ಸ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಅಬ್ಬರದ ಆಟದ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 'ಹ್ಯಾಟ್ರಿಕ್' ಜಯ ಸಾಧಿಸಿತು.

ಭಾನುವಾರ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ಆರ್‌ಸಿಬಿಯು 38 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಜಯಿಸಿತು. ಟೂರ್ನಿಯಲ್ಲಿ ಸತತ ಮೂರನೇ ಪಂದ್ಯ ಗೆದ್ದ ವಿರಾಟ್ ಕೊಹ್ಲಿ ಬಳಗವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಬೆಂಗಳೂರು ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮ್ಯಾಕ್ಸ್‌ವೆಲ್ (78; 49ಎಸೆತ, 9ಬೌಂಡರಿ, 3ಸಿಕ್ಸರ್) ಮತ್ತು ಎಬಿ ಡಿವಿಲಿಯರ್ಸ್ (ಅಜೇಯ 76; 34ಎಸೆತ, 9ಬೌಂಡರಿ, 3ಸಿಕ್ಸರ್) ಅವರಿಬ್ಬರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 204 ರನ್ ಗಳಿಸಿತು. ಅದಕ್ಕುತ್ತರವಾಗಿ ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 166 ರನ್ ಗಳಿಸಿತು.

ಎಬಿಡಿ ಜೊತೆಗೆ ನಾಲ್ಕನೇ ವಿಕೆಟ್‌ಗೆ 53 ರನ್ ಸೇರಿಸಿದ್ದ ಮ್ಯಾಕ್ಸ್‌ವೆಲ್ 17ನೇ ಓವರ್‌ನಲ್ಲಿ ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಔಟಾದರು. ಆಗ ತಂಡದ ಮೊತ್ತವು ನಾಲ್ಕು ವಿಕೆಟ್‌ಗಳಿಗೆ 148 ರನ್‌ಗಳಾಗಿತ್ತು. ಇನಿಂಗ್ಸ್ ಮುಗಿಯುವ ಹೊತ್ತಿಗೆ ತಂಡದ ಮೊತ್ತವು ದ್ವಿಶತಕದ ಗಡಿ ದಾಟಲು ಎಬಿಡಿಯ ಬೀಸಾಟ ಕಾರಣವಾಯಿತು. ಬೌಲರ್‌ಗಳು ಸುಸ್ತಾದರು. 223. 53ರ ಸ್ಟ್ರೈಕ್‌ರೇಟ್‌ನಲ್ಲಿ ಎಬಿಡಿ ರನ್ ಸೂರೆ ಮಾಡಿದರು.

ಆರ್‌ಸಿಬಿಗೆ ಆರಂಭದಲ್ಲಿಯೇ ಬೌಲರ್‌ಗಳು ನೀಡಿದ್ದ ಏಟಿಗೆ ಎಬಿಡಿ ತಿರುಗೇಟು ಕೊಟ್ಟಿದ್ದರು. ಅವರಿಗೆ ಉತ್ತಮ ಜೊತೆ ನೀಡಿದ ಕೈಲ್ ಜೆಮಿಸನ್ ನಾಲ್ಕು ಎಸೆತಗಳಲ್ಲಿ ಒಂದು ಸಿಕ್ಸರ್ ಮತ್ತು ಬೌಂಡರಿಯೊಂದಿಗೆ 11 ರನ್ ಗಳಿಸಿದರು.

ಇನಿಂಗ್ಸ್ ಆರಂಭದ ಎರಡು ಓವರ್‌ಗಳಲ್ಲಿಯೇ ಕೇವಲ ಒಂಬತ್ತು ರನ್‌ಗಳಿಗೆ ನಾಯಕ ವಿರಾಟ್ ಮತ್ತು ರಜತ್ ಪಾಟೀದಾರ್ ಔಟಾಗಿ ಮರಳಿದರು. ಇನ್ನೊಬ್ಬ ಆರಂಭಿಕ ದೇವದತ್ತ ಪಡಿಕ್ಕಲ್ (25 ರನ್) ಜೊತೆಗೂಡಿದ ಮ್ಯಾಕ್ಸ್‌ವೆಲ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು. ಆದರೆ 12ನೇ ಓವರ್‌ನಲ್ಲಿ ಕನ್ನಡಿಗ ಪ್ರಸಿದ್ಧ ಕೃಷ್ಣ ಎಸೆತದಲ್ಲಿ ದೇವದತ್ತ ಔಟಾದರು. ಅಲ್ಲಿಂದ ಮ್ಯಾಕ್ಸ್‌ವೆಲ್ ಮತ್ತು ಎಬಿಡಿ ಆಟ ಕಳೆಗಟ್ಟಿತು.

ಬೌಲಿಂಗ್‌ನಲ್ಲಿಯೂ ಮಿಂಚಿದ ಜೆಮಿಸನ್ (41ಕ್ಕೆ3), ಲಯಕ್ಕೆ ಮರಳಿದ ಸ್ಪಿನ್ನರ್ ಯಜುವೇಂದ್ರ ಚಾಹಲ್ (34ಕ್ಕೆ2) ಹಾಗೂ ಹರ್ಷಲ್ ಪಟೇಲ್ (17ಕ್ಕೆ2) ತಂಡದ ಗೆಲುವನ್ನು ಸುಲಭಗೊಳಿಸಿದರು. ಕೋಲ್ಕತ್ತ ತಂಡದಲ್ಲಿ ಆ್ಯಂಡ್ರೆ ರಸೆಲ್ ಗಳಿಸಿದ 31 ರನ್‌ಗಳೇ ಗರಿಷ್ಠ ವೈಯಕ್ತಿಕ ಸ್ಕೋರ್.

ಎಬಿ ಡಿವಿಲಿಯರ್ಸ್ ಅವರ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 4ಕ್ಕೆ 204 (20 ಓವರ್‌ಗಳಲ್ಲಿ)

ವಿರಾಟ್ ಕೊಹ್ಲಿ ಸಿ ರಾಹುಲ್ ತ್ರಿಪಾಠಿ ಬಿ ವರುಣ್ ಚಕ್ರವರ್ತಿ	5
ದೇವದತ್ತ ಪಡಿಕ್ಕಲ್ ಸಿ ರಾಹುಲ್ ತ್ರಿಪಾಠಿ ಬಿ ಪ್ರಸಿದ್ಧ ಕೃಷ್ಣ	25
ರಜತ್ ಪಾಟಿದಾರ್ ಬಿ ವರುಣ್ ಚಕ್ರವರ್ತಿ	1
ಗ್ಲೆನ್ ಮ್ಯಾಕ್ಸ್‌ವೆಲ್ ಸಿ ಹರಭಜನ್ ಸಿಂಗ್ ಬಿ ಪ್ಯಾಟ್ ಕಮಿನ್ಸ್	78
ಎಬಿ ಡಿವಿಲಿಯರ್ಸ್ ಔಟಾಗದೆ	76
ಕೈಲ್ ಜೆಮೀಸನ್ ಔಟಾಗದೆ	11
ಇತರೆ (ನೋಬಾಲ್ 3, ವೈಡ್ 5)	8

ವಿಕೆಟ್ ಪತನ: 1–6 (ವಿರಾಟ್ ಕೊಹ್ಲಿ, 1.2), 2–9 (ರಜತ್ ಪಾಟಿದಾರ್, 1.6), 3–95 (ದೇವದತ್ತ ಪಡಿಕ್ಕಲ್, 11.1), 4–148 (ಗ್ಲೆನ್ ಮ್ಯಾಕ್ಸ್‌ವೆಲ್, 16.6)

ಬೌಲಿಂಗ್: ಹರಭಜನ್ ಸಿಂಗ್ 4–0–38–0, ವರುಣ್ ಚಕ್ರವರ್ತಿ 4–0–39–2, ಶಕೀಬ್ ಅಲ್ ಹಸನ್ 2–0–24–0, ಪ್ಯಾಟ್ ಕಮಿನ್ಸ್ 4–0–34–1, ಪ್ರಸಿದ್ಧ ಕೃಷ್ಣ 4–0–31–1, ಆ್ಯಂಡ್ರೆ ರಸೆಲ್ 2–0–38–0

ಕೋಲ್ಕತ್ತ ನೈಟ್ ರೈಡರ್ಸ್ 8ಕ್ಕೆ 166 (20 ಓವರ್‌ಗಳಲ್ಲಿ)

ನಿತೀಶ್ ರಾಣಾ ಸಿ ದೇವದತ್ತ ಪಡಿಕ್ಕಲ್ ಬಿ ಯಜುವೇಂದ್ರ ಚಾಹಲ್	18
ಶುಭಮನ್ ಗಿಲ್ ಸಿ ಡ್ಯಾನ್ ಕ್ರಿಸ್ಟಿಯನ್ (ಬದಲಿ) ಬಿ ಕೈಲ್ ಜೆಮೀಸನ್	21
ರಾಹುಲ್ ತ್ರಿಪಾಠಿ ಸಿ ಮೊಹಮ್ಮದ್ ಸಿರಾಜ್ ಬಿ ವಾಷಿಂಗ್ಟನ್ ಸುಂದರ್	25
ಏಯಾನ್ ಮಾರ್ಗನ್ ಸಿ ವಿರಾಟ್ ಕೊಹ್ಲಿ ಬಿ ಹರ್ಷಲ್ ಪಟೇಲ್	29
ದಿನೇಶ್ ಕಾರ್ತಿಕ್ ಎಲ್‌ಬಿಡಬ್ಲ್ಯು ಯಜುವೇಂದ್ರ ಚಾಹಲ್	2
ಶಕೀಬ್ ಅಲ್ ಹಸನ್ ಬಿ ಕೈಲ್ ಜೆಮೀಸನ್	26
ಆ್ಯಂಡ್ರೆ ರಸೆಲ್ ಬಿ ಹರ್ಷಲ್ ಪಟೇಲ್	31
ಪ್ಯಾಟ್ ಕಮಿನ್ಸ್ ಸಿ ಎಬಿ ಡಿವಿಲಿಯರ್ಸ್ ಬಿ ಕೈಲ್ ಜೆಮೀಸನ್	6
ಹರಭಜನ್ ಸಿಂಗ್ ಔಟಾಗದೆ	2
ವರುಣ್ ಚಕ್ರವರ್ತಿ ಔಟಾಗದೆ	2
ಇತರೆ (ವೈಡ್ 4)	4

ವಿಕೆಟ್ ಪತನ: 1–23 (ಶುಭಮನ್ ಗಿಲ್, 1.5), 2–57 (ರಾಹುಲ್ ತ್ರಿಪಾಠಿ, 5.6), 3–66 (ನಿತೀಶ್ ರಾಣಾ, 6.5), 4–74 (ದಿನೇಶ್ ಕಾರ್ತಿಕ್, 8.3), 5–114 (ಏಯಾನ್ ಮಾರ್ಗನ್, 13.4), 6–155 (ಶಕೀಬ್ ಅಲ್ ಹಸನ್, 17.4), 7–161 (ಪ್ಯಾಟ್ ಕಮಿನ್ಸ್, 17.6), 8–162 (ಆ್ಯಂಡ್ರೆ ರಸೆಲ್, 19.1)

ಬೌಲಿಂಗ್: ಮೊಹಮ್ಮದ್ ಸಿರಾಜ್ 3–0–17–0, ಕೈಲ್ ಜೆಮೀಸನ್ 3–0–41–3, ಯಜುವೇಂದ್ರ ಚಾಹಲ್ 4–0–34–2, ವಾಷಿಂಗ್ಟನ್ ಸುಂದರ್ 4–0–33–1, ಗ್ಲೆನ್ ಮ್ಯಾಕ್ಸ್‌ವೆಲ್ 2–0–24–0, ಹರ್ಷಲ್ ಪಟೇಲ್ 4–0–17–2

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 38 ರನ್ ಜಯ

ಪಂದ್ಯಶ್ರೇಷ್ಠ: ಎಬಿ ಡಿವಿಲಿಯರ್ಸ್

ಮುತ್ತಯ್ಯ ಮುರಳೀಧರನ್‌ಗೆ ಆ್ಯಂಜಿಯೊಪ್ಲಾಸ್ಟಿ

ಚೆನ್ನೈ (ಪಿಟಿಐ): ಶ್ರೀಲಂಕಾ ಕ್ರಿಕೆಟ್‌ನ ಮಾಜಿ ಸ್ಪಿನ್ನರ್ ಮುತ್ತಯ್ಯ ಮುರಳೀಧರನ್ ಅವರಿಗೆ ಹೃದಯದಲ್ಲಿ ನೋವು ಕಾಣಿಸಿಕೊಂಡಿದ್ದು, ಭಾನುವಾರ ಇಲ್ಲಿಯ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಿಗೆ ಆ್ಯಂಜಿಯೊಪ್ಲಾಸ್ಟಿ ನಡೆಸಲಾಗಿದೆ.

ಮುರಳೀಧರನ್ ಐಪಿಎಲ್ ಫ್ರಾಂಚೈಸ್ ಸನ್‌ರೈಸರ್ಸ್ ಹೈದರಾಬಾದ್‌ಗೆ ಬೌಲಿಂಗ್ ಕೋಚ್ ಆಗಿದ್ದಾರೆ. ಸದ್ಯ ಅವರಿಗೆ ಸ್ಟೆಂಟ್ ಅಳವಡಿಸಲಾಗಿದ್ದು ಆಸ್ಪತ್ರೆಯಿಂದ ಮರಳಿದ ನಂತರ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಇಎಸ್‌ಪಿಎನ್‌ಕ್ರಿಕ್ ಇನ್ಫೊ ವರದಿ ಮಾಡಿದೆ.

ಮುತ್ತಯ್ಯ ಮುರಳೀಧರನ್

43 ವರ್ಷದ ಮುರಳೀಧರನ್ ಶ್ರೀಲಂಕಾ ಪರ 133 ಟೆಸ್ಟ್ ಮತ್ತು 350 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಟೆಸ್ಟ್‌ನಲ್ಲಿ 800 ಮತ್ತು ಏಕದಿನ ಪಂದ್ಯಗಳಲ್ಲಿ 534 ವಿಕೆಟ್ ಪಡೆದಿದ್ದಾರೆ. 12 ಟಿ20 ಪಂದ್ಯಗಳಿಂದ 13 ವಿಕೆಟ್ ಗಳಿಸಿದ್ದಾರೆ.

2015ರಿಂದ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಬೌಲಿಂಗ್ ಕೋಚ್ ಹಾಗೂ ಮೆಂಟರ್ ಆಗಿದ್ದಾರೆ.

ಮಹಿಗೆ ಸಂಜು ಸವಾಲು

ಮುಂಬೈ (ಪಿಟಿಐ): ಸೋಮವಾರ ಚೆನ್ನೈ ಸೂಪರ್ ಕಿಂಗ್ಸ್ ತಂಡ ರಾಜಸ್ಥಾನ ರಾಯಲ್ಸ್ ವಿರುದ್ಧ ಸೆಣಸಲಿದೆ. ಉಭಯ ತಂಡಗಳು ಇದುವರೆಗೆ ಆಡಿರುವ ತಲಾ ಎರಡು ಪಂದ್ಯಗಳಲ್ಲಿ ಒಂದು ಗೆಲುವು ಮತ್ತು ಸೋಲು ಅನುಭವಿಸಿವೆ.

ಧೋನಿ ಬಳಗವು ಹೋದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್‌ನ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದ ರೀತಿ ಅಮೋಘವಾಗಿತ್ತು. ಮೊದಲ ಪಂದ್ಯದ ಲೋಪಗಳನ್ನು ತಿದ್ದಿಕೊಂಡಿದ್ದು ಎರಡನೇ ಪಂದ್ಯದಲ್ಲಿ ಕಂಡಿತ್ತು.ತನ್ನ ಮೊದಲ ಪಂದ್ಯದಲ್ಲಿ ಪಂಜಾಬ್ ಎದುರು ವಿರೋಚಿತ ಸೋಲು ಅನುಭವಿಸಿದ್ದ ರಾಯಲ್ಸ್, ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಜಯಿಸಿತ್ತು. ಡೇವಿಡ್ ಮಿಲ್ಲರ್ ಮತ್ತು 'ದುಬಾರಿ' ಆಟಗಾರ ಕ್ರಿಸ್ ಮೋರಿಸ್ ಅವರ ಉತ್ತಮ ಆಟ ಕಳೆಗಟ್ಟಿತ್ತು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕ್ರೀಡಾ ಪತ್ರಕರ್ತ ಜಗನ್ನಾಥ ರಾವ್

ನವದೆಹಲಿ: ಪಿಟಿಐ ಸುದ್ದಿಸಂಸ್ಥೆಯ ಕ್ರೀಡಾ ವಿಭಾಗದ ಮಾಜಿ ಮುಖ್ಯಸ್ಥ ಕೆ.ಜಗನ್ನಾಥ ರಾವ್ (78) ಭಾನುವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಆರು ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು ಎಂದು ಕುಟುಂಬ ಮೂಲಗಳು ತಿಳಿಸಿವೆ. 1964ರಿಂದ 2002ರ ವರೆಗೆ ಅವರು ಪಿಟಿಐ ಸಂಸ್ಥೆಯಲ್ಲಿದ್ದರು. ಆರು ಒಲಿಂಪಿಕ್ಸ್ ಮತ್ತು ಎರಡು ಏಷ್ಯನ್ ಗೇಮ್ಸ್ ವರದಿ ಮಾಡಿರುವ ಅವರು ಭಾರತ ಮತ್ತು ಪಾಕಿಸ್ತಾನ ನಡುವಿನ 1982ರ ಕ್ರಿಕೆಟ್ ಸರಣಿಯನ್ನೂ ವರದಿ ಮಾಡಿದ್ದಾರೆ.

ಶಿಖರ್ ಮಿಂಚು; ಡೆಲ್ಲಿ ಜಯಭೇರಿ

ಮುಂಬೈ (ಪಿಟಿಐ): ಸವಾಲಿನ ಗುರಿ ಮುಂದಿದ್ದರೂ ಛಲದಿಂದ ಆಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಭರ್ಜರಿ ಜಯ ಸಾಧಿಸಿತು.

ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ರಿಷಭ್ ಪಂತ್ ನಾಯಕತ್ವದ ಕ್ಯಾಪಿಟಲ್ಸ್ ತಂಡ ಪಂಜಾಬ್ ಕಿಂಗ್ಸ್ ವಿರುದ್ಧ ಆರು ವಿಕೆಟ್‌ಗಳ ಗೆಲುವು ಸಾಧಿಸಿತು.

196 ರನ್‌ಗಳ ಜಯದ ಗುರಿ ಬೆನ್ನತ್ತಿದ ತಂಡ ಆರಂಭಿಕ ಬ್ಯಾಟ್ಸ್‌ಮನ್ ಶಿಖರ್ ಧವನ್ (92; 49 ಎಸೆತ, 13 ಬೌಂಡರಿ, 2 ಸಿಕ್ಸರ್) ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಇನ್ನೂ 10 ಎಸೆತಗಳು ಉಳಿದಿರುವಾಗಲೇ ಗೆಲುವಿನ ನಗೆ ಸೂಸಿತು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ್ದ ಪಂಜಾಬ್ ಕಿಂಗ್ಸ್, ಕನ್ನಡದ ಜೋಡಿ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ಶತಕದ ಜೊತೆಯಾಟದಿಂದಾಗಿ 4 ವಿಕೆಟ್‌ಗಳಿಗೆ 195 ರನ್ ಗಳಿಸಿತು. ಮೊದಲ ವಿಕೆಟ್‌ಗೆ ಇಬ್ಬರೂ 122 ರನ್ ಸೇರಿಸಿದರು.

ಬಹಳ ದಿನಗಳ ನಂತರ ಲಯ ಕಂಡುಕೊಂಡ ಮಯಂಕ್ ಜೊತೆಗೆ ರಾಹುಲ್ ಜೊತೆಯಾಟ ಕುದುರಿಸಿದರು. ರಾಹುಲ್ 51 ಎಸೆತಗಳಲ್ಲಿ 61 ರನ್ ಗಳಿಸಿದರು. ಅದರಲ್ಲಿ ಏಳು ಬೌಂಡರಿ ಮತ್ತು ಎರಡು ಸಿಕ್ಸರ್‌ಗಳಿದ್ದವು. ಮಯಂಕ್ ಅವರ ಆಟವು ರಾಹುಲ್ ಬ್ಯಾಟಿಂಗ್ ಅನ್ನು ಮೀರಿಸಿತು.

ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ –ಪಿಟಿಐ ಚಿತ್ರ

ಚೆಂದದ ಹೊಡೆತಗಳೊಂದಿಗೆ ಮಯಂಕ್ ಕೇವಲ 36 ಎಸೆತಗಳಲ್ಲಿ 69 ರನ್‌ಗಳಿಸಿದರು. ಏಳು ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಸಿಡಿಸಿದರು.

13ನೇ ಓವರ್‌ನಲ್ಲಿ ಮಯಂಕ್ ವಿಕೆಟ್ ಗಳಿಸಿದ ಲಕ್ಮನ್ ಮೆರಿವಾಲಾ ಜೊತೆಯಾಟವನ್ನು ಮುರಿದರು. ಕ್ರಿಸ್ ಗೇಲ್ ಕೇವಲ 11 ರನ್ ಗಳಿಸಿ ನಿರ್ಗಮಿಸಿದರು. ಆದರೆ ದೀಪಕ್ ಹೂಡಾ (ಔಟಾಗದೆ 22; 13ಎಸೆತ) ಮತ್ತು ಶಾರೂಕ್ ಖಾನ್ (ಔಟಾಗದೆ 15; 5ಎಸೆತ) ತಂಡದ ಮೊತ್ತ ಹೆಚ್ಚಲು ಕಾಣಿಕೆ ನೀಡಿದರು.

ರಿಷಭ್ ಪಂತ್ ನಾಯಕತ್ವದ ಡೆಲ್ಲಿ ತಂಡದ ಬೌಲರ್‌ಗಳು ಉತ್ತಮವಾಗಿ ಬೌಲಿಂಗ್ ಮಾಡಿದರು.

ಆದರೆ ಫೀಲ್ಡಿಂಗ್ ಲೋಪಗಳ ಕಾರಣ ಬೌಲರ್‌ಗಳ ಶ್ರಮ ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರ್: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 4ಕ್ಕೆ 195 (ಕೆ.ಎಲ್.ರಾಹುಲ್ 61, ಮಯಂಕ್ ಅಗರವಾಲ್ 69, ದೀಪಕ್ ಹೂಡಾ ಔಟಾಗದೆ 22; ಕ್ರಿಸ್ ವೋಕ್ಸ್ 42ಕ್ಕೆ1, ಮೆರಿವಾಲ 32ಕ್ಕೆ1, ಕಗಿಸೊ ರಬಾಡ 43ಕ್ಕೆ1, ಆವೇಶ್ ಖಾನ್ 33ಕ್ಕೆ1); **ಡೆಲ್ಲಿ ಕ್ಯಾಪಿಟಲ್ಸ್:** 18.2 ಓವರ್‌ಗಳಲ್ಲಿ 4ಕ್ಕೆ 198 (ಪೃಥ್ವಿ ಶಾ 32, ಶಿಖರ್ ಧವನ್ 92, ರಿಷಭ್ ಪಂತ್ 15, ಮಾರ್ಕಸ್ ಸ್ಟೋಯಿನಿಸ್ ಔಟಾಗದೆ 27, ಲಲಿತ್ ಯಾದವ್ ಔಟಾಗದೆ 12). **ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್‌ಗೆ 6 ವಿಕೆಟ್‌ಗಳ ಜಯ.

ದಾಖಲೆಯೊಂದಿಗೆ ಚಿನ್ನ ಗೆದ್ದ ಶ್ರೀಹರಿ

ತಾಷ್ಕೆಂಟ್ (ಪಿಟಿಐ): ಕರ್ನಾಟಕದ ಶ್ರೀಹರಿ ನಟರಾಜ್ ಒಲಿಂಪಿಕ್ ಅರ್ಹತಾ ಈಜು ಚಾಂಪಿಯನ್‌ಷಿಪ್‌ನ 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು. ಕೂಟದಲ್ಲಿ ಅವರ ಕೊರಳಿಗೇರಿದ ಎರಡನೇ ಚಿನ್ನ ಇದು.

ಶ್ರೀಹರಿ ನಟರಾಜ್

ಶನಿವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ 25.11 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಶ್ರೀಹರಿ ಅವರು ಎರಡು ದಿನಗಳ ಅಂತರದಲ್ಲಿ ಮೂರನೇ ಬಾರಿ ರಾಷ್ಟ್ರೀಯ ದಾಖಲೆ ಬರೆದರು. ಈ ವಾರದ ಆರಂಭದಲ್ಲಿ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಅವರು ಎರಡು ಬಾರಿ ಈ ಸಾಧನೆ ಮಾಡಿದ್ದರು.

ಭಾರತದ ಸ್ಪರ್ಧಿಗಳು ಕೂಟದಲ್ಲಿ ಒಟ್ಟು 29 ಪದಕಗಳನ್ನು (18 ಚಿನ್ನ, ಏಳು ಬೆಳ್ಳಿ ಹಾಗೂ ನಾಲ್ಕು ಕಂಚು) ತಮ್ಮದಾಗಿಸಿಕೊಂಡರು.

ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಕರ್ನಾಟಕದ ಸುವನಾ ಭಾಸ್ಕರ್ (30.28 ಸೆಕೆಂಡು, ವೈಯಕ್ತಿಕ ಶ್ರೇಷ್ಠ ಸಾಧನೆ) ಅವರಿಗೆ ಬೆಳ್ಳಿ ಪದಕಗಳು ಒಲಿದವು.

ಭಾರತದ ಯಾವುದೇ ಈಜುಪಟು ಇದುವರೆಗೆ ಟೋಕಿಯೊ ಒಲಿಂಪಿಕ್ಸ್‌ಗೆ 'ಎ' ಅರ್ಹತೆ ಗಳಿಸಿಲ್ಲ.

ಏಷ್ಯನ್ ಕುಸ್ತಿ: ದೀಪಕ್‌ಗೆ ಬೆಳ್ಳಿ ಪದಕ

ಆಲ್ಮಾಟಿ, ಕಜಕಸ್ತಾನ (ಪಿಟಿಐ): ಭಾರತದ ದೀಪಕ್ ಪೂನಿಯಾ ಅವರು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 86 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು ಇರಾನ್‌ನ ಹಸನ್ ಯಾಜ್ದನ್‌ಚರಾಟಿ ಎದುರು ಸೋತರು. ಭಾರತದ ಮತ್ತೊಬ್ಬ ಪೈಲ್ವಾನ್ ಸಂಜೀತ್ ಅವರಿಗೆ ಕಂಚಿನ ಪದಕ ಒಲಿಯಿತು. 92 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಸಂಜೀತ್, ಕಂಚಿನ ಪದಕದ ಸುತ್ತಿನಲ್ಲಿ 11–8ರಿಂದ ಉಜ್ಬೆಕಿಸ್ತಾನದ ರುಸ್ತಮ್ ಶೊದೆವ್ ಅವರನ್ನು ಪರಾಭವಗೊಳಿಸಿದರು. ರವಿಂದರ್ (61 ಕೆಜಿ) ಕಂಚಿನ ಪದಕದ ಪ್ಲೇ ಆಫ್‌ನಲ್ಲಿ ಕಿರ್ಗಿಸ್ತಾನದ ಇಕ್ರಮ್ಜೊನ್ ಖದಿಮುರೊದೊಯ್‌ಗೆ ಮಣಿದರು.

ಮೊದಲ ಸುತ್ತಿನ ಬೌಟ್‌ನಲ್ಲಿ ಇರಾನ್‌ನ ಮಜೀದ್ ದಸ್ತಾನ್ ಎದುರು 4–3ರಿಂದ ಗೆದ್ದಿದ್ದ ರವಿಂದರ್, ನಾಲ್ಕರ ಘಟ್ಟದ ಹಣಾಹಣಿಯಲ್ಲಿ 4–7ರಿಂದ ಅದ್ಲಾನ್ ಆಕರೊಯ್‌ಗೆ ಮಣಿದರು.

ವೇಟ್‌ಲಿಫ್ಟಿಂಗ್: ಭಾರತಕ್ಕೆ ಚಿನ್ನ

ತಾಷ್ಕೆಂಟ್ (ಪಿಟಿಐ): ಭಾರತದ ಜಿಲ್ಲಿ ಡಲಾಬೆಹರಾ ಇಲ್ಲಿ ನಡೆಯುತ್ತಿರುವ ಏಷ್ಯನ್ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 45 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತೆ ಜಿಲ್ಲಿ, ಭಾನುವಾರ ಸ್ನ್ಯಾಚ್‌ನಲ್ಲಿ 69 ಹಾಗೂ ಕ್ಲೀನ್ ಆ್ಯಂಡ್ ಜೆರ್ಕ್‌ನಲ್ಲಿ 88 ಕೆಜಿ ಸೇರಿ ಒಟ್ಟು 157 ಕೆಜಿ ಭಾರ ಎತ್ತಿದರು. ಇಬ್ಬರೇ ಸ್ಪರ್ಧಿಗಳು ಇದ್ದ ಕಣದಲ್ಲಿ ಪಿಲಿಪ್ಪೀನ್ಸ್‌ನ ಮೇರಿ ಫ್ಲೊರ್ ಡಿಯಾಜ್, ಒಟ್ಟು 135 ಕೆಜಿ (60 + 75) ಭಾರ ಎತ್ತಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. 45 ಕೆಜಿ ವಿಭಾಗವನ್ನು ಒಲಿಂಪಿಕ್ಸ್ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ.

2019ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಜಿಲ್ಲಿ ಅವರು ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಕೃಷ್ಣಾ ಪೂನಿಯಾಗೆ ಕೋವಿಡ್

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತೆ, ರಾಜಸ್ಥಾನದ ಶಾಸಕಿ ಕೃಷ್ಣಾ ಪೂನಿಯಾ ಅವರಿಗೆ ಕೋವಿಡ್–19 ಇರುವುದು ಭಾನುವಾರ ಖಚಿತಪಟ್ಟಿದೆ. ಸದ್ಯ ಅವರು ಜೈಪುರದ ರಾಜಸ್ಥಾನ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಯುಎಚ್‌ಎಸ್) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೃಷ್ಣಾ ಪೂನಿಯಾ

43 ವರ್ಷದ ಕೃಷ್ಣಾ, 2010ರಲ್ಲಿ ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನ ಡಿಸ್ಕಸ್ ಥ್ರೊ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು.

ಅವರು ರಾಜಸ್ಥಾನದ ಸಾದುಲ್ಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕಿಯಾಗಿದ್ದಾರೆ.

'ಕೃಷ್ಣಾಗೆ ಕೆಮ್ಮು ಮತ್ತು ಸೌಮ್ಯ ಜ್ವರದ ಲಕ್ಷಣ ಇತ್ತು. ಶನಿವಾರ ಪರೀಕ್ಷೆಗೆ ಒಳಪಟ್ಟಾಗ ಸೋಂಕು ಪತ್ತೆಯಾಗಿರಲಿಲ್ಲ. ಆದರೆ, ಆರ್‌ಯುಎಚ್‌ಎಸ್‌ನಲ್ಲಿ ಸಿಟಿ ಸ್ಕ್ಯಾನ್ ಮಾಡಿಸಿದಾಗ ಕೋವಿಡ್ ಇರುವುದು ದೃಢಪಟ್ಟಿದೆ' ಎಂದು ಕೃಷ್ಣಾ ಅವರ ಪತಿ ವೀರೇಂದ್ರ ಪೂನಿಯಾ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಯಾಚ್ ಇಟ್.. ಕ್ರೀಡಾ ಕಥೆಗಳು
ಮಲ್ಲರ ಮಲ್ಲ ರಾಜಣ್ಣ
ಡಾ. ರಾಜ್‌ಕುಮಾರ ಅವರೆಂದರೆ ಕನ್ನಡ ನಾಡಿನ ಅಸ್ಮಿತೆಯ ಪ್ರತಿರೂಪ. ಅವರು ಕೇವಲ ನಟ, ಕಲಾವಿದ ಮಾತ್ರವಲ್ಲ. ಕುಸ್ತಿಪಟುವೂ ಹೌದು. ಮಲ್ಲರ ಮಲ್ಲ ರಾಜಣ್ಣನೇ ಆಗಿದ್ದರು. ಪೈಲ್ವಾನರಾಗಲು ಅವರು ಮಾಡಿದ್ದೇನು?
ಇಲ್ಲಿ ನೋಡಿ..
QR ಕೋಡ್ ಸ್ಕ್ಯಾನ್ ಮಾಡಿ

ALVA'S EDUCATION FOUNDATION (R.)
Vidyagiri-Moodubidire - 574 227
ADMISSION OPEN
FOR I PU NEET/JEE/KCET ONLINE CLASSES
to
10th CBSE STUDENTS
CLASSES WILL START FROM 03rd MAY 2021
OFFLINE CLASSES WILL START SOON AFTER THE RESULT
8970797028, 8217234750
9448915155, 9743166097
www.alvaspuccollege.org

ದೀರ್ಘಕಾಲಿನ ಕೀಲು ನೋವುಗಳಿಗೆ ಪರಿಣಾಮಕಾರಿ ಪರಿಹಾರ

ಡಾ. ಆರ್ಥೋವನ್ನೇ ಏಕೆ ಕೊಳ್ಳಬೇಕು?
ಭಾರತದಾದ್ಯಂತ ಕಂಡು ಬಂದ ಫಲಿತಾಂಶಗಳು
24x7 Helpline No.: 7876977777 • Website: www.drorthooil.com • Available at all medical & general stores
ನಕಲಿಗಳ ಬಗ್ಗೆ ಜಾಗೃತೆ
ಡಾ. ಆರ್ಥೋ ರವರ ಎಲ್ಲಾ ಉತ್ಪನ್ನಗಳನ್ನು ಡಾ.ಆರ್ಥೋ ಹೆಸರಿನಲ್ಲಿಯೇ ಉತ್ಪಾದಿಸಲಾಗುತ್ತದೆ. ಇದೇ ರೀತಿಯ ಹೆಸರು, ಪ್ಯಾಕೇಜಿಂಗ್, ಬಾಟಲ್ ಮತ್ತು ಜಾಹೀರಾತು ಹೊಂದಿರುವ ಇತರೆ ಉತ್ಪನ್ನಗಳಿಂದ ಜಾಗೃತರಾಗಿರಿ. ಅತ್ಯುತ್ತಮ ಡಾ.ಆರ್ಥೋ ಮಾತ್ರ ಕೊಳ್ಳಿರಿ.

ಲೈಂಗಿಕ ಸಮಸ್ಯೆ!
ನಮ್ಮ ಆಯುರ್ವೇದಿಕ ಔಷಧವನ್ನು ಉಪಯೋಗ ಮಾಡಿ ಲೈಂಗಿಕ
07079943917

ನೀವು ಕೂಡ ಉತ್ತಮ ಐ ಡ್ರಾಪ್ಸ್‌ನ ನಿರೀಕ್ಷೆಯಲ್ಲಿ ಇದ್ದೀರಾ?
– ಕಣ್ಣುಗಳಲ್ಲಿ ಒತ್ತಡ
– ಕಣ್ಣುಗಳ ದಣಿವು
– ಕಣ್ಣುಗಳ ಬಳಲಿಕೆ
– ಕಣ್ಣುಗಳಲ್ಲಿ ಊತ
– ಕೆಂಪುಕಣ್ಣು ಬೇನೆ
Dr. Juneja's EYE Mantra Ayurvedic EYE Drops
24x7 HELPLINE : 8196822222 • Available at all leading medical stores.